ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 19 ಬುಧವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 211 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಸ್ಪಷ್ಟ ಕೈಗಾರಿಕಾ ನೀತಿ; ಸರಳೀಕೃತ ಅನುಮತಿ; ಮೂಲ ಸೌಕರ್ಯ; ಪೂರಕ ವಾತಾವರಣದಿಂದಾಗಿ

ಕರ್ನಾಟಕ ವಿಶ್ವಾಸಾರ್ಹ ಹೂಡಿಕೆ ತಾಣ

- ಮುಖ್ಯಮಂತ್ರಿ ಸಿದ್ದರಾಮಯ್ಯ ವಿಶ್ವಾಸ
- ಬೆಂಗಳೂರು ಟೆಕ್ ಸಮ್ಮಿಟ್‌ಗೆ ಚಾಲನೆ

ಬೆಂಗಳೂರು, ನ.18(ಕೆಎಂಶಿ)– ಸರ್ಕಾರದ ಸ್ಪಷ್ಟ ಕೈಗಾರಿಕಾ ನೀತಿಗಳು, ಸರಳೀಕೃತ ಅನುಮತಿ, ಕೌಶಲ್ಯ, ಮೂಲ ಸೌಕರ್ಯ ಹಾಗೂ ಪೂರಕ ವಾತಾವರಣ, ಕರ್ನಾಟಕ ಭಾರತದ ಅತ್ಯಂತ ವಿಶ್ವಾಸಾರ್ಹ ಹೂಡಿಕೆ ತಾಣವಾಗಿಸಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಸಮರ್ಥಿಸಿಕೊಂಡಿದ್ದಾರೆ.

'ಬೆಂಗಳೂರು ಟೆಕ್ ಸಮ್ಮಿಟ್' 28ನೇ ಆವೃತ್ತಿ ಉದ್ಘಾಟಿಸಿ ಮಾತನಾಡಿದ ಅವರು, ಕರ್ನಾಟಕ ಮಾಹಿತಿ ತಂತ್ರಜ್ಞಾನ ನೀತಿ, ಬಾಹ್ಯಾಕಾಶ ತಂತ್ರಜ್ಞಾನ ನೀತಿ, ಸ್ಟಾರ್ಟ್‌ಅಪ್‌ನಂತಹ ಪ್ರಮುಖ ನೀತಿ ರಚಿಸುವ ಮೂಲಕ ಐತಿಹಾಸಿಕ ಹೆಜ್ಜೆ ಇಡಲಾಗಿದೆ ಎಂದರು.

ದತ್ತಾಂಶ ಚಾಲಿತ, ಆಧುನಿಕ ತಂತ್ರಜ್ಞಾನ ಪೂರಕ ಕರ್ನಾಟಕ ಮಾಹಿತಿ ತಂತ್ರಜ್ಞಾನ ನೀತಿಯಿಂದ ನಾವೀನ್ಯತೆ ಮತ್ತು ಡೀಪ್ ಟೆಕ್‌ಗೆ ಜಾಗತಿಕ ತಾಣವಾಗಿಸುವ ಗುರಿ ಸರ್ಕಾರದ್ದಾಗಿದೆ. ಕರ್ನಾಟಕವನ್ನು 2034ರ ವೇಳೆಗೆ ಭಾರತದ ಪ್ರಮುಖ ಬಾಹ್ಯಾಕಾಶ ತಂತ್ರಜ್ಞಾನ ಕೇಂದ್ರವಾಗಿ ಪರಿವರ್ತಿಸುವ ಗುರಿಗೆ ಬಾಹ್ಯಾಕಾಶ ತಂತ್ರಜ್ಞಾನ ನೀತಿ ಸಹಕಾರಿಯಾಗಲಿದೆ, ಹೊಸ ಸ್ಟಾರ್ಟ್ ಅಪ್ ನೀತಿಯಿಂದ ಮುಂದಿನ ಐದು ವರ್ಷಗಳಲ್ಲಿ ಬಂಡವಾಳ ನೆರವು, ಮಾರುಕಟ್ಟೆ ಅವಕಾಶ, ಮೂಲಸೌಲಭ್ಯ, ಕೌಶಲ್ಯಾಭಿವೃದ್ಧಿ ಕ್ರಮಗಳ ಮೂಲಕ 25,000 ಸ್ಟಾರ್ಟ್‌ಅಪ್‌ಗಳ ಸ್ಥಾಪನೆ ಗುರಿಯನ್ನ ಸರ್ಕಾರ ಹೊಂದಿದೆ.

ಕಳೆದ ಮೂರು ದಶಕಗಳಿಂದ ಸಮಾವೇಶಗೊಳ್ಳುತ್ತಿರುವ ಬೆಂಗಳೂರು ತಂತ್ರಜ್ಞಾನ ಶೃಂಗಸಭೆ ಅಂತರರಾಷ್ಟ್ರೀಯ ಸಹಭಾಗಿತ್ವದಲ್ಲಿ ನಾವೀನ್ಯತೆ ಮತ್ತು ತಂತ್ರಜ್ಞಾನದಲ್ಲಿ ಹೊಸ ಆವಿಷ್ಕಾರ ಸಂಶೋಧಿಸಿ, ಸೃಷ್ಟಿಸಿ ಹೊಸ ದಿಕ್ಕಿನಲ್ಲಿ ಹೆಜ್ಜೆ ಇಟ್ಟು ವಿಶ್ವದ ಗಮನವನ್ನು ಕರ್ನಾಟಕದತ್ತ ಸೆಳೆಯುತ್ತಿದೆ. ಸಮಾವೇಶದಲ್ಲಿ ಭಾಗವಹಿಸಿರುವ ಪ್ರತಿಯೊಬ್ಬ ಪರಿಣಿತರು ಜ್ಞಾನ, ಕೌಶಲ್ಯಗಳನ್ನು ವೇದಿಕೆಯಲ್ಲಿ ಹಂಚಿಕೊಂಡು ರಾಜ್ಯದ ಭವಿಷ್ಯ ರೂಪಿಸುವಲ್ಲಿ ಪರಿವರ್ತನೆಯ ಹರಿಕಾರರಾಗಲಿದ್ದಾರೆ ಎಂಬ ಆಶಯ ವ್ಯಕ್ತಪಡಿಸಿದರು.

ಮೂರು ದಿನಗಳ ಶೃಂಗ ಸಭೆ: ಮೂರು ದಿನಗಳ ಬೆಂಗಳೂರು ತಂತ್ರಜ್ಞಾನ ಶೃಂಗಸಭೆಯು ಸಮಾವೇಶಕ್ಕಿಂತಲೂ ಹೆಚ್ಚಾಗಿ ಹೊಸ ಹೊಸ ವಿಚಾರ, ಸಂವಾದ, ಬಂಡವಾಳ ಹೂಡಿಕೆ ಆವಿಷ್ಕಾರ ಮತ್ತು ಪರಿವರ್ತನೆಯ ಮನ್ವಂತರಕ್ಕೆ ಹಾಗೂ ಹಲವು ಉತ್ತಮ ಅವಕಾಶಗಳಿಗೆ ಜಾಗತಿಕ ವೇದಿಕೆಯಾಗಿ ಹೊಸ ಮುನ್ನುಡಿ ಬರೆಯಲಿ ಎಂದು ಹಾರೈಸಿದರು.

ಈ ವರ್ಷದ ಶೃಂಗಸಭೆಯ ಧ್ಯೇಯವಾಕ್ಯ 'ಭವಿಷ್ಯೀಕರಣಗೊಳ್ಳಿ–ಅಜ್ಞಾತವನ್ನು ರೂಪಿಸುತ್ತಾ, ಊಹಿಸಲಾಗದ್ದನ್ನು ಅಳೆಯುತ್ತಾ, ಜಗತ್ತನ್ನು ಮುಂದೆ ಕೊಂಡೊಯ್ಯುವುದು' ಎಂಬುದಾಗಿದೆ.

ಸಮಾವೇಶದಲ್ಲಿ ಪಾಲ್ಗೊಳ್ಳಲಿರುವ 600ಕ್ಕೂ ಹೆಚ್ಚು ಜಾಗತಿಕ ಭಾಷಣಕಾರರು, 1200ಕ್ಕೂ ಹೆಚ್ಚು ಪ್ರದರ್ಶಕರು, 60ಕ್ಕೂ ಹೆಚ್ಚು ದೇಶದ ನಿಯೋಗಗಳು ಮತ್ತು ಸಾವಿರಾರು ಪರಿಣಿತರು ಮುಂದಿನ ದಶಕಗಳಲ್ಲಿ ತಂತ್ರಜ್ಞಾನದ ರೂಪುರೇಷೆ, ಹೊಸ ಸಾಧ್ಯತೆಗಳ ಕುರಿತು ಸಂವಾದಿಸಿ, ಕರ್ನಾಟಕ, ಭಾರತ ಮಾತ್ರವಲ್ಲದೆ ಇಡೀ ಜಗತ್ತಿಗೇ ತೆರೆದಿಡುವಂತಾಗಲಿ ಎಂದರು.

ಬೆಂಗಳೂರು ತಂತ್ರಜ್ಞಾನ ಶೃಂಗಸಭೆ ಶೈಕ್ಷಣಿಕ ವಲಯವನ್ನು ಉದ್ಯಮಕ್ಕೆ ಬೆಸೆಯುತ್ತದೆ, ನವೋದ್ಯಮ ಹೂಡಿಕೆದಾರರನ್ನು ಪರಿಚಯಿಸುತ್ತದೆ, ಅನ್ಯ ದೇಶಗಳ ಪರಿಣಿತರು, ಸಂಶೋಧಕರು, ನೀತಿ ನಿರೂಪಕರನ್ನು ಪರಸ್ಪರ ಬೆಸೆಯುವುದಲ್ಲದೇ, ಜಾಗತಿಕ ಮಾರುಕಟ್ಟೆ ಸಂಪರ್ಕಕ್ಕೆ ಬೃಹತ್ ವೇದಿಕೆಯಾಗಿದೆ.

ಸುಸ್ಥಿರ ಅಭಿವೃದ್ಧಿ ನಮ್ಮ ಧ್ಯೇಯ, ಭವಿಷ್ಯೀಕರಣಗೊಳ್ಳಿ ಎನ್ನುವ ಆಶಯ ನುಡಿಯಂತೆ ತಂತ್ರಜ್ಞಾನ, ಸಾಮಾಜಿಕ ಒಳಿತು, ಆರ್ಥಿಕ ನ್ಯಾಯ, ಸುಸ್ಥಿರ ಅಭಿವೃದ್ಧಿ ಮತ್ತು ಸಮಾಜದ ಎಲ್ಲರಿಗೂ ಸಮೃದ್ಧಿ ಒದಗಿಸಬೇಕು ಎಂಬ ನಂಬಿಕೆ ಪುನರುಚ್ಚರಿಸುತ್ತೇವೆ. ■6ನೇ ಪುಟಕ್ಕೆ



ಬೆಂಗಳೂರು ಟೆಕ್ ಸಮ್ಮಿಟ್–28ನೇ ಆವೃತ್ತಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಂಗಳೂರಲ್ಲಿ ಮಂಗಳವಾರ ಚಾಲನೆ ನೀಡಿದರು. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಎಂ.ಬಿ. ಪಾಟೀಲ್, ಪ್ರಿಯಾಂಕ್ ಖರ್ಗೆ ಇನ್ನಿತರರು ಉಪಸ್ಥಿತರಿದ್ದಾರೆ.

200 ಎಕರೆಯಲ್ಲಿ ಸೆಮಿಕಂಡಕ್ಟರ್ ಪಾರ್ಕ್

ಬೆಂಗಳೂರು, ನ.18(ಕೆಎಂಶಿ)– 200 ಎಕರೆ ಜಾಗದಲ್ಲಿ ಸೆಮಿಕಂಡಕ್ಟರ್ ಪಾರ್ಕ್ ಅಭಿವೃದ್ಧಿಪಡಿಸಲಿದ್ದು, ಘಟಕ ಸ್ಥಾಪಿಸುವ ಕಂಪನಿಗಳಿಗೆ ಎಲ್ಲ ಮೂಲಸೌಕರ್ಯ ಕಲ್ಪಿಸಲಾಗುವುದು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಇಂದಿಲ್ಲಿ ತಿಳಿಸಿದ್ದಾರೆ.

ಬೆಂಗಳೂರು ಅಂತಾರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ ಮೂರು ದಿನಗಳ ಬೆಂಗಳೂರು ತಂತ್ರಜ್ಞಾನ ಸಮಾವೇಶ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸೆಮಿಕಂಡಕ್ಟರ್ ಪಾರ್ಕ್ ದೇಶ ಮತ್ತು ರಾಜ್ಯ ಮಟ್ಟದಲ್ಲಿ ಎಲ್ಲ ನಾವೀನ್ಯತಾ ಕೇಂದ್ರವಾಗಿ ಕಾರ್ಯ ನಿರ್ವಹಿಸಲಿದೆ ಎಂದರು.

ಮುಂಚೂಣಿ ತಂತ್ರಜ್ಞಾನ ಕಂಪನಿಗಳು ಮತ್ತು ಪ್ರಮುಖ ಬಂಡವಾಳದಾರರಿಂದ ಹೂಡಿಕೆ ಆಕರ್ಷಿಸಲು ಆದ್ಯತೆ ನೀಡಲಾಗಿದೆ, ಹೂಡಿಕೆಯು ಕೈಗಾರಿಕೋದ್ಯಮದ ವಿವಿಧ ವಲಯಗಳಿಗೆ ಹರಿದುಬರಬೇಕು ಎಂಬುದು ಸರ್ಕಾರದ ಗುರಿ. ಡ್ರೋನ್, ಸೆಮಿಕಂಡಕ್ಟರ್ ಸಾಧನಗಳು ಮತ್ತು ಸೌರ ವಿದ್ಯುತ್ ಉತ್ಪಾದನೆಯನ್ನು ಆದ್ಯತೆಯಾಗಿ ಪರಿಗಣಿಸಲಾಗಿದೆ, ಜೊತೆಗೆ ಇಂಡಸ್ಟ್ರಿ–5.0 ಮತ್ತು ಇತರ ಅತ್ಯಾಧುನಿಕ ಕೈಗಾರಿಕಾ ವಿಧಾನಗಳನ್ನು ಗಂಭೀರವಾಗಿ ತೆಗೆದುಕೊಳ್ಳಲಾಗಿದೆ. ■6ನೇ ಪುಟಕ್ಕೆ

ಬಿಲಿಯನ್ ಡಾಲರ್ ಬಂಡವಾಳ ಹೂಡಿಕೆಗೆ ಉದ್ಯಮಿಗಳು ಉತ್ಸುಕತೆ

ಬೆಂಗಳೂರು, ನ.18(ಕೆಎಂಶಿ)–ರಾಜ್ಯದಲ್ಲಿ ಬಿಲಿಯನ್ ಡಾಲರ್ ಬಂಡವಾಳ ಹೂಡಿಕೆಗೆ ವಿವಿಧ ದೇಶದ ಉದ್ಯಮಿಗಳು ಮುಂದೆ ಬಂದಿದ್ದಾರೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಾಗತಿಕ ಉದ್ಯಮಿಗಳು ಘಟಕ ಆರಂಭಕ್ಕೆ ಉತ್ಸುಕರಾಗಿದ್ದು, ಬೆಂಗಳೂರು ಟೆಕ್ ಸಮಾವೇಶದಲ್ಲಿ 1,500 ಬೃಹತ್ ಕಂಪೆನಿಗಳು ಭಾಗವಹಿಸುತ್ತಿವೆ ಎಂದರು. ಅರವತ್ತು ದೇಶಗಳ ಪ್ರತಿನಿಧಿಗಳು ಸೇರಿದಂತೆ ಸುಮಾರು 50 ಸಾವಿರ ಪ್ರಮುಖರು ಭಾಗವಹಿಸಲಿದ್ದಾರೆ. ಉದ್ಯೋಗ ಸೃಷ್ಟಿ ಹಾಗೂ ಅಭಿವೃದ್ಧಿಗೆ ಪ್ರೋತ್ಸಾಹ ನೀಡಲಾಗುವುದು. ಇದರಿಂದ ಸ್ಥಳೀಯ ಪ್ರತಿಭೆ ಹೊರ ಹೊಮ್ಮುವುದಲ್ಲದೆ, ಹೊಸ ಆವಿಷ್ಕಾರ, ತಂತ್ರಜ್ಞಾನ, ಸ್ಟಾರ್ಟ್ ಅಪ್‌ಗಳು ಕರ್ನಾಟಕವನ್ನು ಅಭಿವೃದ್ಧಿ ದಿಕ್ಕಿನೆಡೆಗೆ ಕೊಂಡೊಯ್ಯಲಿವೆ.

ನಮ್ಮ ಮುಂದಿನ ಪೀಳಿಗೆ ಜಾಗತಿಕ ಮಟ್ಟದಲ್ಲಿ ಸ್ಪರ್ಧಿಸಬೇಕು, ಹೊಸ ಆಲೋಚನೆ ಸ್ಟಾರ್ಟ್ ಅಪ್ ಮೂಲಕ ಬೆಳೆಯಲು ಸರ್ಕಾರ ಅವಕಾಶ ಕಲ್ಪಿಸಲಿದೆ, ನಂಬಿ ಬಂದವರಿಗೆ ಉತ್ತಮ ಅವಕಾಶ ನೀಡುವುದು ನಮ್ಮ ಕರ್ತವ್ಯ, ಅದಕ್ಕಾಗಿ ಉದ್ಯಮಸ್ನೇಹಿ ವಾತಾವರಣ ನಿರ್ಮಿಸಲಾಗುವುದು. ■6ನೇ ಪುಟಕ್ಕೆ

ನಗರ ಸ್ಥಳೀಯ ಸಂಸ್ಥೆ ಚುನಾವಣೆ

ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನೋಟಿಸ್

ಬೆಂಗಳೂರು, ನ.18– ಈ ವರ್ಷಾಂತ್ಯಕ್ಕೆ ಅವಧಿ ಕೊನೆಗೊಳ್ಳಲಿರುವ ರಾಜ್ಯದ 47 ನಗರಸಭೆ, 91 ಪುರಸಭೆ, 49 ಪಟ್ಟಣ ಪಂಚಾಯಿತಿಗಳೂ ಸೇರಿ ಒಟ್ಟು 187 ನಗರ ಸ್ಥಳೀಯ ಸಂಸ್ಥೆಗಳ ವಾರ್ಡ್‌ವಾರು ಮೀಸಲು ಜತೆಗೆ ಅಧ್ಯಕ್ಷ – ಉಪಾಧ್ಯಕ್ಷ ಸ್ಥಾನಗಳ ಅಂತಿಮ ಮೀಸಲು ಅಧಿಸೂಚನೆ ಹೊರಡಿಸುವ ಸಂಬಂಧ ರಾಜ್ಯ ಸರಕಾರಕ್ಕೆ ಹೈಕೋರ್ಟ್ ನೋಟಿಸ್ ಜಾರಿಗೊಳಿಸಿದೆ

ಅವಧಿ ಮುಗಿಯಲಿರುವ ರಾಜ್ಯದ 187 ನಗರ ಸ್ಥಳೀಯ ಸಂಸ್ಥೆಗಳಿಗೆ ಸಕಾಲದಲ್ಲಿ ಚುನಾವಣೆ ನಡೆಸಲು ಅನುವಾಗುವಂತೆ ವಾರ್ಡ್‌ವಾರು ಮೀಸಲಾತಿ ಜೊತೆಗೆ ಅಧ್ಯಕ್ಷ–ಉಪಾಧ್ಯಕ್ಷ ಸ್ಥಾನಗಳ ಅಂತಿಮ ಮೀಸಲಾತಿ ಅಧಿಸೂಚನೆ ಹೊರಡಿಸಲು ನಿರ್ದೇಶಿಸಬೇಕು ಎಂದು ಕೋರಿದ್ದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ. 187 ನಗರ ಸ್ಥಳೀಯ ಸಂಸ್ಥೆಗಳ ಮೀಸಲಾತಿಗೆ ಸಂಬಂಧಿಸಿದಂತೆ ರಾಜ್ಯ ಚುನಾವಣಾ ಆಯೋಗ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು. ಪ್ರತಿವಾದಿಗಳಾದ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆಯ ■6ನೇ ಪುಟಕ್ಕೆ

ಸಾರಿಗೆ ನೌಕರರ ವೇತನ ಪರಿಷ್ಕರಣೆ ಬಗ್ಗೆ ಶೀಘ್ರ ಸಭೆ

ಚಿಕ್ಕಮಗಳೂರು: ಸಾರಿಗೆ ನೌಕರರ ವೇತನ ಪರಿಷ್ಕರಣೆ ಸಂಬಂಧ ವಿಧಾನಸಭೆ ಚಳಿಗಾಲದ ಅಧಿವೇಶನಕ್ಕೂ ಮೊದಲೇ ಮುಖ್ಯಮಂತ್ರಿ ನೇತೃತ್ವದಲ್ಲಿ ಕಾರ್ಮಿಕ ಮುಖಂಡರ ಸಭೆ ನಡೆಸಲು ಉದ್ದೇಶಿಸಲಾಗಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ನೌಕರರ ವೇತನ ಪರಿಷ್ಕರಣೆ ವಿಷಯ ಬಿಟ್ಟರೆ, ಇಲಾಖೆಯಲ್ಲಿ ಬೇರೆ ಸಮಸ್ಯೆ ಇಲ್ಲ. ಐದು ದಿನಗಳ ಹಿಂದೆ ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದೇನೆ. ಶೀಘ್ರವೇ ಸಭೆ ನಡೆಸೋಣ ಎಂದಿದ್ದಾರೆ. ಮುಖ್ಯಮಂತ್ರಿ ಅವರ ಕಾರ್ಯದರ್ಶಿ ಅಂಜುಂ ಪರ್ವೇಜ್ ■6ನೇ ಪುಟಕ್ಕೆ

ಪೋಕ್ಸೋ ಕೇಸ್: ಡಿ.2ಕ್ಕೆ ಹಾಜರಾಗಲು ಬಿಎಸ್‌ವೈ ಸೇರಿ 4 ಆರೋಪಿಗಳಿಗೆ ಕೋರ್ಟ್ ಸಮನ್ಸ್

ಬೆಂಗಳೂರು, ನ.18– ಮಾಜಿ ಸಿಎಂ ಬಿಎಸ್‌ವೈ ವಿರುದ್ಧದ ಪೋಕ್ಸೋ ಪ್ರಕರಣಕ್ಕೆ ಸಂಬಂಧಿಸಿದಂತೆ ಯಡಿಯೂರಪ್ಪ ಸೇರಿ ನಾಲ್ವರು ಆರೋಪಿಗಳಿಗೆ ಕೋರ್ಟ್ ಸಮನ್ಸ್ ಜಾರಿ ಮಾಡಿದೆ.



ಯಡಿಯೂರಪ್ಪ

ಕಳೆದ ಕೆಲವು ದಿನಗಳ ಹಿಂದೆಯಷ್ಟೇ ಈ ಪ್ರಕರಣ ಸಂಬಂಧ ಹೈಕೋರ್ಟ್ ಟ್ರಯಲ್‌ಗೆ ಅನುಮತಿ ನೀಡಿತ್ತು. ಇದೀಗ 1ನೇ ಫಾಸ್ಟ್ ಟ್ರ್ಯಾಕ್ ಕೋರ್ಟ್ ಬಿ.ಎಸ್ ಯಡಿಯೂರಪ್ಪ ಸೇರಿದಂತೆ 4 ಆರೋಪಿಗಳ ವಿರುದ್ಧ ದೋಷಾರೋಪ ನಿಗದಿಗೆ ಸಮನ್ಸ್ ಜಾರಿ ಮಾಡಿದ್ದು, ಡಿ.2ಕ್ಕೆ ಕೋರ್ಟ್‌ಗೆ ಹಾಜರಾಗುವಂತೆ ತಿಳಿಸಿದೆ.

ಇದಕ್ಕೂ ಮುನ್ನ ಕೆಳಹಂತದ ನ್ಯಾಯಾಲಯ ಆರೋಪ ನಿಗದಿಗೆ ಸಂಬಂಧಿಸಿದಂತೆ ಯಡಿಯೂರಪ್ಪನವರಿಗೆ ಸಮನ್ಸ್ ಜಾರಿ ಮಾಡಿತ್ತು. ಸಮನ್ಸ್ ಜಾರಿ ಮಾಡಿದ್ದನ್ನು ಪ್ರಶ್ನಿಸಿ ಬಿಎಸ್‌ವೈ ಹೈಕೋರ್ಟ್ ಮೆಟ್ಟಿಲೇರಿದ್ದರು. ವಿಚಾರಣೆ ನಡೆಸಿದ ಹೈಕೋರ್ಟ್ ಯಡಿಯೂರಪ್ಪನವರ ಅರ್ಜಿಯನ್ನು ವಜಾಗೊಳಿಸಿ ಟ್ರಯಲ್‌ಗೆ ಅನುಮತಿ ನೀಡಿತ್ತು.

ಏನಿದು ಪ್ರಕರಣ: ಬೆಂಗಳೂರಿನ ಡಾಲರ್ಸ್ ಕಾಲೋನಿಯ ತಮ್ಮ ನಿವಾಸದಲ್ಲಿ 17 ವರ್ಷದ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ಆರೋಪ ಬಿಎಸ್‌ವೈ ■6ನೇ ಪುಟಕ್ಕೆ

ದಾಖಲೆಯ 10ನೇ ಸಲ ಬಿಹಾರ ಸಿಎಂ ಆಗಿ ನಾಳೆ ನಿತೀಶ್ ಪ್ರಮಾಣ

ಪಟ್ನಾ: ಪಟ್ನಾದ ಐತಿಹಾಸಿಕ ಗಾಂಧಿ ಮೈದಾನದಲ್ಲಿ ನ. 20ಕ್ಕೆ ನಡೆಯಲಿರುವ ನೂತನ ಸರ್ಕಾರದ ಪ್ರಮಾಣ ವಚನ ಕಾರ್ಯಕ್ರಮ ಸಿದ್ಧತೆಗಳನ್ನು ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಮಂಗಳವಾರ ಪರಿಶೀಲಿಸಿದರು.



ದಾಖಲೆಯ 10ನೇ ಬಾರಿಗೆ ಮುಖ್ಯ ಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿ ಸಲಿರುವ ನಿತೀಶ್ ಅವರೊಂದಿಗೆ ಉಪ ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಮತ್ತು ಮುಖ್ಯ ಕಾರ್ಯದರ್ಶಿ ಪ್ರತ್ಯಯ ಅಮೃತ್ ಅವರಿದ್ದರು. ರಾಜ್ಯ ರಾಜಧಾನಿ ಮತ್ತು ಗಾಂಧಿ ಮೈದಾನದಲ್ಲಿ ಬೃಹತ್ ಪ್ರಮಾಣದಲ್ಲಿ ಭದ್ರತಾ ಸಿಬ್ಬಂದಿ ನಿಯೋಜನೆಗೊಂಡಿದ್ದಾರೆ. ಗಾಂಧಿ ಮೈದಾನಕ್ಕೆ ಗುರುವಾರದವರೆಗೆ ಸಾರ್ವಜನಿಕರ ಪ್ರವೇಶವನ್ನು ನಿರ್ಬಂಧಿಸಲಾಗಿದೆ. ■6ನೇ ಪುಟಕ್ಕೆ

ಶಬರಿಮಲೆಗೆ ತೆರಳುತ್ತಿದ್ದ ಮಂಡ್ಯ ಅಯ್ಯಪ್ಪ ಭಕ್ತರ ಬಸ್ ಪಲ್ಟಿ; 33 ಮಂದಿ ಪಾರು



ಮಂಡ್ಯ: ಶಬರಿಮಲೆಗೆ ತೆರಳುತ್ತಿದ್ದ ಮಂಡ್ಯ ಜಿಲ್ಲೆಯ ಕೆ.ಆರ್ ಪೇಟೆ ತಾಲೂಕಿನ ಯಾಲದಹಳ್ಳಿ ಕೊಪ್ಪಲು ಗ್ರಾಮದ ಅಯ್ಯಪ್ಪ ಮಾಲಾಧಾರಿಗಳಿದ್ದ ಬಸ್ ಪಲ್ಟಿಯಾದ ಘಟನೆ ನಡೆದಿದೆ. ಅದೃಷ್ಟವಶಾತ್ ಪ್ರಾಣಾಪಾಯದಿಂದ ಮಾಲಾಧಾರಿಗಳು ಪಾರಾಗಿದ್ದಾರೆ.

ಯಾಲದಹಳ್ಳಿಕೊಪ್ಪಲು ಗ್ರಾಮದ 33 ಮಂದಿ ಅಯ್ಯಪ್ಪನ ಮಾಲೆ ಧರಿಸಿ ಸ್ವಾಮಿ ದರ್ಶನಕ್ಕೆ ಶಬರಿಮಲೆಗೆ ತೆರಳುತ್ತಿದ್ದರು. ಈ ವೇಳೆ ಕೇರಳದ ಏರಿಮಲೈ ಸಮೀಪ ಚಾಲಕನ ನಿಯಂತ್ರಣ ತಪ್ಪಿ ಬಸ್ ಪಲ್ಟಿಯಾಗಿದೆ. ಅದೃಷ್ಟವಶಾತ್ ಯಾವುದೇ ಅನಾಹುತವಿಲ್ಲದೇ ಬಸ್‌ನಲ್ಲಿದ್ದವರು ಪಾರಾಗಿದ್ದಾರೆ. ಕೆಲ ಮಾಲಾಧಾರಿಗಳಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಇನ್ನೂ ಘಟನಾ ಸ್ಥಳಕ್ಕೆ ಏರಿಮಲೈ ಪೊಲೀಸರು ಭೇಟಿ ನೀಡಿ ಪರಿಶೀಲಿಸಿ ದ್ದಾರೆ. ಬಳಿಕ ಗಾಯಾಳುಗಳನ್ನ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿದ್ದಾರೆ.

ರೈತನ ಬಲಿ ಪಡೆದಿದ್ದ ಹೆಣ್ಣು ಹುಲಿ ಸೆರೆ



ಸರಗೂರು ತಾಲೂಕಿನ ಮುಳ್ಳೂರು–ಬೆಣ್ಣೆಗೆರೆ ಬಳಿ ಸೆರೆ ಹಿಡಿದ ತಾಯಿ ಹುಲಿ.



ಹುಲಿ ಸೆರೆ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದ ಅರಣ್ಯ ಸಿಬ್ಬಂದಿ.

ಸರಗೂರು, ನ.18(ಎಂಟಿವೈ, ನಾಗೇಶ್)– ಸರಗೂರು ತಾಲೂಕಿನ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಕಾಡಂಚಿನ ಗ್ರಾಮಗಳಾದ ಮುಳ್ಳೂರು, ಬೆಣ್ಣೆಗೆರೆ ಬಳಿ ರೈತರೊಬ್ಬರ ಬಲಿ ಪಡೆದಿದ್ದ ಹುಲಿಯನ್ನು ಅದರ ಮೂರು ಮರಿಗಳೊಂದಿಗೆ ಮಂಗಳವಾರ ಮುಂಜಾನೆ ಸುರಕ್ಷಿತವಾಗಿ ಸೆರೆ ಹಿಡಿಯಲಾಗಿದೆ.

ಈ ಹುಲಿ ಸೆರೆಗೆ ಕಳೆದ 15 ದಿನ ದಿಂದಲೂ ಸಾಕಾನೆಗಳೊಂದಿಗೆ ನಡೆಸುತ್ತಿದ್ದ ಕೂಂಬಿಂಗ್ ಕಾರ್ಯಾಚರಣೆ ವೇಳೆ ಅರಣ್ಯ ಸಿಬ್ಬಂದಿಗಳ ಕಣ್ಣಿಗೆ ಬೀಳದೆ ಚಳ್ಳೆಹಣ್ಣು ತಿನ್ನಿಸಿ ಪರಾರಿಯಾಗುತ್ತಿದ್ದ 8 ವರ್ಷದ ತಾಯಿ ಹುಲಿಯನ್ನು ಸೆರೆ ಹಿಡಿದು, ಅದರ 45 ದಿನದ ಒಂದು ಗಂಡು ಹಾಗೂ ಎರಡು ಹೆಣ್ಣು ಮರಿ ಗಳನ್ನು ಸುರಕ್ಷಿತವಾಗಿ ರಕ್ಷಣೆ ಮಾಡಿ ತಾಯಿ ಮಡಿಲಿಗೆ ಸೇರಿಸಲಾಗಿದೆ.

ಮೂರು ಮರಿಗಳ ಸುರಕ್ಷಿತ ಸಂರಕ್ಷಣೆ

ಅ.26ರಂದು ಮುಳ್ಳೂರು ಸಮೀಪದ ಬೆಣ್ಣೆಗೆರೆ ಬಳಿ ರಾಜಶೇಖರ್ ಎಂಬುವರ ಮೇಲೆ ದಾಳಿ ನಡೆಸಿ ಕೊಂದು ಹಾಕಿತ್ತು. ಈ ಹುಲಿಯ ಸೆರೆಗೆ ಕೂಂಬಿಂಗ್ ಕಾರ್ಯಾಚರಣೆ ನಡೆಸುತ್ತಿದ್ದಾಗ ಅ.27ರಂದು ದಾಳಿ ನಡೆಸಿದ 500 ಮೀಟರ್ ಅಂತರದ ಪೊದೆಯೊಂದರಲ್ಲಿದ್ದ ಎರಡು ಗಂಡು ಮರಿಯನ್ನು ರಕ್ಷಣೆ ಮಾಡಲಾಗಿತ್ತು. ಇದೀಗ ದಾಳಿ ನಡೆಸಿದ್ದ ತಾಯಿ ಹುಲಿಯೊಂದಿಗೆ ಅದರ ಮರಿಗಳನ್ನು ಸೆರೆ ಹಿಡಿದಿರುವುದರಿಂದ ಗ್ರಾಮಸ್ಥರು ನಿಟ್ಟುಸಿರು ಬಿಟ್ಟಿದ್ದಾರೆ.

ಕಣ್ಣಾಮುಚ್ಚಾಲೆ: ಕಳೆದ 20 ದಿನ ದಿಂದಲೂ ಅರಣ್ಯ ಇಲಾಖೆ ಸಿಬ್ಬಂದಿ ಕೂಂಬಿಂಗ್ ಕಾರ್ಯಾಚರಣೆ ನಡೆಸುತ್ತಿದ್ದರೂ ಹುಲಿ ಮಾತ್ರ ಯಾರ ಕಣ್ಣಿಗೂ ಬಿದ್ದಿರಲಿಲ್ಲ. 3–4 ದಿನದ ಹಿಂದಷ್ಟೇ ಒಮ್ಮೆ ದಟ್ಟಪೊದೆಯಿಂದ ಹೊರಗೆ ಬಂದಿದ್ದ ಹುಲಿ ಮತ್ತೆ ಅಜ್ಞಾತವಾಗಿತ್ತು. ಹುಲಿಯ ಈ ಕಣ್ಣಾಮುಚ್ಚಾಲೆ ಆಟ ದಿಂದ ಅರಣ್ಯ ಸಿಬ್ಬಂದಿ ರೋಸಿ ಹೋಗಿದ್ದರು. ■6ನೇ ಪುಟಕ್ಕೆ

ಐದು ಮರಿಗೆ ಜನ್ಮ ನೀಡಿರುವುದು ವಿಶೇಷ

ಮೈಸೂರು, ನ.18 (ಎಂಟಿವೈ)– ಸರಗೂರು ತಾಲೂಕಿನ ಮುಳ್ಳೂರು–ಬೆಣ್ಣೆಗೆರೆ ಬಳಿ ಈಗ ಸೆರೆ ಸಿಕ್ಕಿರುವ 8 ವರ್ಷದ ತಾಯಿ ಹುಲಿ ಐದು ಮರಿಗೆ ಜನ್ಮ ನೀಡಿರುವುದು ವಿಶೇಷವಾಗಿದೆ. ಹಳೆ ಮೈಸೂರು ಭಾಗದ ಅರಣ್ಯದಲ್ಲಿರುವ ಹುಲಿಗಳು ಕೇವಲ 1–4 ಮರಿಗಳಿಗಷ್ಟೇ ಜನ್ಮ ನೀಡುತ್ತಿವೆ. ಆದರೆ, ಈ ಹುಲಿಗೆ ಐದು ಮರಿಗಳಿರುವುದು ಅರಣ್ಯ ಸಿಬ್ಬಂದಿಯಲ್ಲಿ ಅಚ್ಚರಿಯುಂಟು ಮಾಡಿದೆ.

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಸರಗೂರು ತಾಲೂಕಿನ ಕಾಡಂಚಿನ ಗ್ರಾಮಗಳಾದ ಮುಳ್ಳೂರು, ಬೆಣ್ಣೆಗೆರೆ ಬಳಿ ಅರಣ್ಯದಿಂದ ಹೊರ ಬಂದು ಪೊದೆಯಲ್ಲಿ ಐದು ಮರಿಗಳಿಗೆ ■6ನೇ ಪುಟಕ್ಕೆ

ಕೂಂಬಿಂಗ್ ಕಾರ್ಯಾಚರಣೆ ಮುಂದುವರೆಯಲಿದೆ

“ಇಂದು ಮುಂಜಾನೆಯ ಕಾರ್ಯಾಚರಣೆಯಲ್ಲಿ ತಾಯಿ ಹುಲಿ ಸೆರೆ ಹಿಡಿದು, ಮೂರು ಮರಿಗಳನ್ನು ರಕ್ಷಿಸಲಾಗಿದೆ. ಸೆರೆ ಹಿಡಿದ ಈ ಹುಲಿಯ ಎರಡು ಮರಿಯನ್ನು ಅ.27ರಂದು ರಕ್ಷಿಸಿ ಪುನರ್ವಸತಿ ಕೇಂದ್ರಕ್ಕೆ ರವಾನಿಸಲಾಗಿತ್ತು. ಇಂದು ಮೂರು ಮರಿಗಳನ್ನು ರಕ್ಷಿಸಲಾಗಿದೆ. ಐದು ಮರಿಗೆ ಜನ್ಮ ನೀಡಿರುವುದು ಅಪರೂಪವಾಗಿದೆ. ಮಾನವ–ವನ್ಯಜೀವಿ ಸಂಘರ್ಷವಿರುವ ಗ್ರಾಮ ಗಳಲ್ಲಿ ಇನ್ನಷ್ಟು ದಿನ ಕೂಂಬಿಂಗ್ ಕಾರ್ಯಾಚರಣೆ ಮುಂದುವರೆಸಲಾಗುವುದು. ಈಗಾಗಲೇ ರೈತರ ಮೇಲೆ ನಡೆದ ನಾಲ್ಕು ದಾಳಿ ಪ್ರಕರಣದ ಹುಲಿಗಳನ್ನು ಸೆರೆ ಹಿಡಿಯಲಾಗಿದೆ.



–ಎಸ್.ಪ್ರಭಾಕರನ್, ನಿರ್ದೇಶಕರು, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ

ಮೈಸೂರು ವಿವಿ ಕುಲಪತಿ ಅಭಿನಂದಿಸಿದ ನೂತನ ಅಕಾಡೆಮಿಕ್ ಕೌನ್ಸಿಲ್ ಸದಸ್ಯರು



ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಅವರನ್ನು ವಿವಿ ಅಕಾಡೆಮಿಕ್ ಕೌನ್ಸಿಲ್‌ನ ನೂತನ ನಾಮನಿರ್ದೇಶಿತ ಸದಸ್ಯರಾದ ಹೆಡತಲೆ ಮಂಜುನಾಥ್, ಪಾಳ್ಯ ಸುರೇಶ್ ಹಾಗೂ ಗಿರೀಶ್ ಪಿ.ತೊರೆಮಾವು ಅಭಿನಂದಿಸಿದರು.

ಮೈಸೂರು,18(ಎಂಕೆ)– ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದಲ್ಲಿ ವಿವಿಯ ಅಕಾಡೆಮಿಕ್ ಕೌನ್ಸಿಲ್‌ಗೆ ನಾಮನಿರ್ದೇಶನಗೊಂಡಿರುವ ಹೆಡತಲೆ ಮಂಜುನಾಥ್, ಪಾಳ್ಯ ಸುರೇಶ್ ಹಾಗೂ ಗಿರೀಶ್ ಪಿ.ತೊರೆಮಾವು ಅವರನ್ನು ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಅಭಿನಂದಿಸಿದರು.

ಬಳಿಕ ಪ್ರೊ.ಎನ್.ಕೆ.ಲೋಕನಾಥ್ ಮಾತನಾಡಿ, ಪ್ರತಿಷ್ಠಿತ ಮೈಸೂರು ವಿಶ್ವವಿದ್ಯಾನಿಲಯಕ್ಕೆ ತನ್ನದೇ ಭವ್ಯ ಇತಿಹಾಸವಿದ್ದು, ವಿವಿಯ ಘನತೆ–ಗೌರವ ಹೆಚ್ಚಿಸುವ ನಿಟ್ಟಿನಲ್ಲಿ ನಾವು ಕರ್ತವ್ಯ ನಿರ್ವಹಣೆ ಮಾಡಬೇಕು ಎಂದು ಹೇಳಿದರು.

ಸರ್ಕಾರ ಮತ್ತು ವಿಶ್ವವಿದ್ಯಾನಿಲಯದ ನಡುವೆ ಸೇತುವೆಯಾಗಿರುವ ವಿದ್ಯಾ ವಿಷಯಕ ಪರಿಷತ್(ಅಕಾಡೆಮಿಕ್ ಕೌನ್ಸಿಲ್) ಸದಸ್ಯರಾಗಿ ಈ ಹಿಂದೆ ಹಿರಿಯ ಮೇಧಾವಿಗಳು ಕಾರ್ಯನಿರ್ವಹಿಸಿದ್ದಾರೆ. ಮುಂದಿನ ದಿನಗಳಲ್ಲಿ ಮೈಸೂರು ವಿಶ್ವವಿದ್ಯಾನಿಲಯವನ್ನು ಬಲಿಷ್ಠವಾಗಿ ಕಟ್ಟುವ ಜವಾಬ್ದಾರಿ ನಮ್ಮೆಲ್ಲರದ್ದಾಗಿದೆ. ಈ ನಿಟ್ಟಿನಲ್ಲಿ ಸರ್ಕಾರದಿಂದ ಬರಬೇಕಾದ ಸವಲತ್ತುಗಳ ಬಗ್ಗೆ ನೂತನ ಸದಸ್ಯರು ಗಮನಹರಿಸಬೇಕಾಗಿದೆ ಎಂದು ಹೇಳಿದರು.

ಈ ವೇಳೆ ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರಾದ ಎಂ.ಕೆ.ಸವಿತಾ, ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಪದಾಧಿಕಾರಿಗಳಾದ ತಿಮ್ಮಯ್ಯ, ನಂದೀಶ್, ಮನೋನ್ಮಣಿ, ಮೀನಾಕ್ಷಿ, ಸಕ್ಕಳ್ಳಿ ಬಸವರಾಜು, ಮಿರ್ಲೆ ಸಂಜಯ್, ಗಂಗಾಧರ್, ಚರಣ್‌ರಾಜ್, ತನುಜ ಮಹೇಶ್ ಇದ್ದರು.

ಶಾಸಕ ಜಿ.ಡಿ.ಹರೀಶ್‌ಗೌಡರಿಗೆ ಸನ್ಮಾನ...



ಮೈಸೂರು ತಾಲೂಕಿನ ಜಯಪುರ ಹೋಬಳಿ ಬರಡನಪುರ ಗುರು ಮಹಂತೇಶ್ವರ ಮಠಕ್ಕೆ ಹುಣಸೂರು ಕ್ಷೇತ್ರದ ಶಾಸಕ ಜಿ.ಡಿ.ಹರೀಶ್‌ಗೌಡ ಮಂಗಳವಾರ ಭೇಟಿ ನೀಡಿ, ಪರಶಿವಮೂರ್ತಿ ಸ್ವಾಮೀಜಿ ಅವರಿಗೆ ಫಲಪುಷ್ಪ ತಾಂಬೂಲ ನೀಡಿ, ಆಶೀರ್ವಾದ ಪಡೆದರು. ಇದೇ ವೇಳೆ ಶ್ರೀಗಳು ಶಾಸಕರನ್ನು ಸನ್ಮಾನಿಸಿದರು. ಸಮಾಜ ಸೇವಕ ಎಸ್.ಶ್ರೀಕಾಂತ್, ಮುಖಂಡರಾದ ಬರಡನಪುರ ಬಸವಣ್ಣ, ಜವರನಾಯಕ, ದಾರಿಪುರ ಬಸವಣ್ಣ, ನಾಗರಾಜು, ರೇಣುಕಾ, ಡೇರಿ ಬಸವಣ್ಣ, ಮಾವಿನಹಳ್ಳಿ ಅಭಿಷೇಕ್, ಹೊಸಕೆರೆ ಮಂಜುನಾಥ್, ಸ್ವಾಮಿ ಇನ್ನಿತರರಿದ್ದರು.

ಸಾಲು ಮರದ ತಿಮ್ಮಕ್ಕಗೆ ನುಡಿನಮನ



ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನ ವತಿಯಿಂದ ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ಅವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಮೈಸೂರು,ನ.18– ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವತಿಯಿಂದ ಸಾಲು ಮರದ ತಿಮ್ಮಕ್ಕ ಅವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ.ಆರ್.ಜಯಕುಮಾರಿ ಮಾತನಾಡಿ, ಪರಿಸರ ಪ್ರೇಮಿ, ಶತಾಯುಷಿಗಳಾದ ಸಾಲು ಮರದ ತಿಮ್ಮಕ್ಕನವರು ತುಮಕೂರು ಜಿಲ್ಲೆಯ ಗುಬ್ಬಿ ತಾಲೂಕಿನಲ್ಲಿ 1911ರಲ್ಲಿ ಜನಿಸಿದರು. ತಮ್ಮ ವೈವಾಹಿಕ ಬದುಕಿನಲ್ಲಿ ಮಕ್ಕಳಿಲ್ಲದ ತಿಮ್ಮಕ್ಕ ತಮ್ಮ ದುಃಖವನ್ನು ಮರೆಯಲು ತುಮಕೂರಿನ ಹುಲಿಕಲ್ಲು ರಾಷ್ಟ್ರೀಯ ಹೆದ್ದಾರಿಯ ಸುತ್ತಮುತ್ತ ಸುಮಾರು 450 ಆಲದ ಸಸಿಗಳನ್ನು ನೆಟ್ಟು ಪ್ರೀತಿಯಿಂದ ಪೋಷಣೆಯ ನೀರನ್ನೆರದು ಹೆಮ್ಮರವನ್ನಾಗಿ ಬೆಳೆಸಿದರು.

ಮರ ಬೆಳೆಸುವ ಕಾಯಕವನ್ನೇ ತಮ್ಮ ಬದುಕಿನ ಧ್ಯೇಯವನ್ನಾಗಿಸಿಕೊಂಡು ಜೀವನದ ಉಸಿರನ್ನಾಗಿಸಿಕೊಂಡು ಬದುಕಿದವರು. ವೃಕ್ಷಗಳನ್ನೇ ತಮ್ಮ ಮಕ್ಕಳೆಂದು ಭಾವಿಸಿ, ಅಕ್ಕರೆಯಿಂದ ನೋಡಿಕೊಳ್ಳುತ್ತಿದ್ದ ತಿಮ್ಮಕ್ಕ 114 ವರ್ಷಗಳ ಸುದೀರ್ಘ ಮತ್ತು ಅರ್ಥಪೂರ್ಣ ಬದುಕನ್ನು ಸವೆಸಿ ಪ್ರಕೃತಿಯಲ್ಲಿ ಲೀನರಾದರು.

2019ರಲ್ಲಿ ಪದ್ಮಶ್ರೀ ಪ್ರಶಸ್ತಿಗೆ ಭಾಜನರಾದ ತಿಮ್ಮಕ್ಕ ಅವರಿಗೆ ನಾಡೋಜ ಪ್ರಶಸ್ತಿ, ಇಂದಿರಾ ಪ್ರಿಯದರ್ಶಿನಿ ಪ್ರಶಸ್ತಿ ಇನ್ನು ಮುಂತಾದ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ರಶಸ್ತಿಗಳು ಲಭಿಸಿವೆ.

ಸಾಲು ಮರದ ತಿಮ್ಮಕ್ಕ ಅವರು 2015ರಲ್ಲಿ ನಮ್ಮ ಕಾಲೇಜಿಗೆ ಮುಖ್ಯ ಅತಿಥಿಗಳಾಗಿ ಆಗಮಿಸಿ, ವಿದ್ಯಾರ್ಥಿಗಳಲ್ಲಿ ಪರಿಸರ ಜಾಗೃತಿ ಹುಟ್ಟುಹಾಕಿ 500 ಸಸಿಗಳನ್ನು ಮೈಸೂರಿನ ವಿಜಯನಗರದ ರಸ್ತೆಗಳಲ್ಲಿ ನೆಡುವ ಮೂಲಕ ಸ್ಥಳೀಯರು ಆ ಸಸಿಗಳನ್ನು ದತ್ತು ಪಡೆಯುವ ಕಾರ್ಯಕ್ಕೆ ಸಾಲುಮರದ ತಿಮ್ಮಕ್ಕ ಸಾಕ್ಷಿಯಾದ ಅವಿಸ್ಮರಣೀಯ ಸಂದರ್ಭವನ್ನು ನೆನೆದರು. ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್.ತಿಮ್ಮೇಗೌಡ, ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ರೋಟರಿ ಮೈಸೂರು ಮಿಡ್‌ಟೌನ್‌ನಿಂದ ಆದರ್ಶ ರೈತ ಪ್ರಶಸ್ತಿ ಪ್ರದಾನ ಇಂದು

ಮೈಸೂರು,ನ.18(ಜಿಎ)–ರೋಟರಿ ಮೈಸೂರು ಮಿಡ್ ಟೌನ್ ವತಿಯಿಂದ ನ.19ರಂದು ಆದರ್ಶ ರೈತ ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಅಧ್ಯಕ್ಷ ರಾಕೇಶ್ ಬಾಬು ಈ ವಿಷಯ ತಿಳಿಸಿ, ಅಂದು ಸಂಜೆ 6.30ಕ್ಕೆ ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಸಭಾಂಗಣದಲ್ಲಿ ದಿ.ಎಚ್.ಎಸ್. ಶಿವದೇವಪ್ಪ ಸ್ಮರಣಾರ್ಥ ಪ್ರಶಸ್ತಿ ಪ್ರದಾನ ಮಾಡುತ್ತಿದ್ದು, ಇದರಿಂದ ಯುವ ಸಮೂಹದವರು ಕೃಷಿಯನ್ನು ವೃತ್ತಿಯಾಗಿ ಆಯ್ಕೆ ಮಾಡಿಕೊಳ್ಳಲು ಸ್ಫೂರ್ತಿ ನೀಡಲು ಪ್ರಶಸ್ತಿ ನೀಡಲಾಗುತ್ತಿದೆ ಎಂದರು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಶಾಸಕ ದರ್ಶನ್ ಪುಟ್ಟಣ್ಣಯ್ಯ ಆಗಮಿಸಲಿದ್ದಾರೆ. ಆದರ್ಶ ರೈತ ಪ್ರಶಸ್ತಿಯನ್ನು ಹುಲ್ಲಹಳ್ಳಿಯ ರಾಂಪುರದ ಎಂ.ಎಂ. ಕುಮಾರ್ ಅವರಿಗೆ ಪ್ರದಾನ ಮಾಡಲಾಗುತ್ತದೆ. ಕುಮಾರ್ ಕಳೆದ 30 ವರ್ಷಕ್ಕೂ ಅಧಿಕ ಕಾಲ ಕೃಷಿ ಮೂಲಕ ಜೀವನ ನಡೆಸಿ, ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ನೀಡಿದ್ದಾರೆ. ಅಷ್ಟೇ ಅಲ್ಲದೇ ಕೂಡು ಕುಟುಂಬವನ್ನು ಕೃಷಿಯಿಂದಲ್ಲೇ ನಿರ್ವಹಣೆ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಅವರ ಆದರ್ಶತನ ಗುರುತಿಸಿ ಪ್ರಶಸ್ತಿ ನೀಡಲಾಗುತ್ತಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಪ್ರಾಯೋಜಕರಾದ ಹೆಚ್.ಎಸ್.ವೀರೇಶ್, ಕಾರ್ಯದರ್ಶಿ ಭಾಸ್ಕರ್ ಸೈನಿಕ್ ಉಪಸ್ಥಿತರಿದ್ದರು.

ಬಾಲಕರ ಪುನರ್ವಸತಿಗೆ ಸಾರ್ವಜನಿಕರಿಂದ ದೇಣಿಗೆ ಸಂಗ್ರಹಕ್ಕೆ ಪ್ರತ್ಯೇಕ ಖಾತೆ ತೆರೆಯಲು ಡಿಸಿ ಸೂಚನೆ



ಮೈಸೂರು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ ಅಧ್ಯಕ್ಷತೆಯಲ್ಲಿ ಬಾಲಕಾರ್ಮಿಕ ಯೋಜನಾ ಸೊಸೈಟಿಯ ಕಾರ್ಯಕಾರಿ, ಕಾರ್ಯಪಡೆ ಹಾಗೂ ಸರ್ವ ಸದಸ್ಯರ ಸಭೆ ನಡೆಯಿತು.

ಮೈಸೂರು,18(ಎಂಕೆ)–ಬಾಲಕಾರ್ಮಿಕರ ಪುನರ್ವಸತಿ ಯೋಜನೆಗೆ ಸಾರ್ವಜನಿಕರಿಂದ ದೇಣಿಗೆ ಸಂಗ್ರಹಿಸಲು ಪ್ರತ್ಯೇಕ ಖಾತೆ ತೆರೆದು ಪ್ರಚಾರ ನೀಡುವಂತೆ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ್ ರೆಡ್ಡಿ ಸೂಚಿಸಿದರು.

ಮೈಸೂರು ಸಿದ್ಧಾರ್ಥನಗರದಲ್ಲಿರುವ ತಮ್ಮ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಬಾಲಕಾರ್ಮಿಕ ಯೋಜನಾ ಸೊಸೈಟಿ ಕಾರ್ಯಕಾರಿ, ಕಾರ್ಯಪಡೆ ಹಾಗೂ ಸರ್ವ ಸದಸ್ಯರ ಸಭೆ ನಡೆಸಿದ ಅವರು, ಬಾಲ ಕಾರ್ಮಿಕ ಪದ್ಧತಿಯನ್ನು ಸಂಪೂರ್ಣವಾಗಿ ಹೋಗಲಾಡಿಸುವ ನಿಟ್ಟಿನಲ್ಲಿ ಕಾರ್ಮಿಕ ಇಲಾಖೆ ಆಯುಕ್ತರು ದೇಣಿಗೆ ಸಂಗ್ರಹಿಸಲು ಸೂಚನೆ ನೀಡಿದ್ದು, ಅದರಂತೆ ಖಾತೆಯನ್ನು ತೆರೆದು ಪಾರದರ್ಶಕವಾಗಿ ನಿರ್ವಹಿಸುವಂತೆ ತಿಳಿಸಿದರು.

ಬಾಲ ಹಾಗೂ ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ 1986ರ ಪರಿಣಾಮಕಾರಿ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಅಧೀಕ್ಷರು ಹಾಗೂ ನಿರೀಕ್ಷಕರಿಗೆ ಸ್ಥಳೀಯವಾಗಿ ಲಭ್ಯವಿರುವ ಸಂಪನ್ಮೂಲ ವ್ಯಕ್ತಿಗಳಿಂದ ಆನ್ ಲೈನ್ ಮೂಲಕ ತರಬೇತಿಗಳನ್ನು ಆಯೋಜಿಸಿ. ಬಾಲಕಾರ್ಮಿಕರನ್ನು ರಕ್ಷಣೆ ಮಾಡಿ ಪುನರ್ವಸತಿ ಕಲ್ಪಿಸುವ ಸಂದರ್ಭದಲ್ಲಿ ಅವರ ಪೋಷಕರ ಸ್ಥಿತಿಗತಿಗಳ ಬಗ್ಗೆ ತಿಳಿದುಕೊಂಡ ನಂತರ ಅವರ ಆರ್ಥಿಕ ಸ್ಥಿತಿಯಲ್ಲಿ ತೊಂದರೆಯಿದ್ದಲ್ಲಿ ಅವರಿಗೆ ಸರ್ಕಾರದ ವಿವಿಧ ಇಲಾಖೆಗಳಿಂದ ದೊರೆಯುವ ಸೌಲಭ್ಯಗಳ ಬಗ್ಗೆ ಅರಿವು ಮೂಡಿಸಿ. ಇದರಿಂದ ಅವರ ಆರ್ಥಿಕ ಸ್ಥಿತಿ ಸುಧಾರಣೆಯಾಗುತ್ತದೆ ಹಾಗೂ ಮಕ್ಕಳನ್ನು ಕೆಲಸಕ್ಕೆ ಕಳುಹಿಸುವ ಪ್ರಮಾಣ ಕಡಿಮೆಯಾಗುತ್ತದೆ ಎಂದು ಸಲಹೆ ನೀಡಿದರು.

ಜಿಲ್ಲಾ ಮಟ್ಟದಲ್ಲಿ ಪ್ರತೀ ತಿಂಗಳು ನಡೆಯುವ ಕಾರ್ಯಕಾರಿ, ಕಾರ್ಯಪಡೆ ಹಾಗೂ ಸರ್ವ ಸದಸ್ಯರ ಸಭೆಯ ರೀತಿಯಲ್ಲೇ ತಹಶೀಲ್ದಾರ್ ಅಧ್ಯಕ್ಷತೆಯಲ್ಲಿ ತಾಲೂಕು ಮಟ್ಟದ ಸಭೆ ನಡೆಸುವಂತೆ ಪತ್ರ ಬರೆಯಲಾಗುವುದು. ದಾಳಿ ನಡೆಸಿದ ಸಂದರ್ಭದಲ್ಲಿ ರಕ್ಷಣೆ ಮಾಡುವ ಮಕ್ಕಳಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿ ಬಾಲಕರ ಹಾಗೂ ಬಾಲಕಿಯರ ಬಾಲಮಂದಿರದಲ್ಲಿ ಪುನರ್ವಸತಿ ಕಲ್ಪಿಸಲಾಗುತ್ತದೆ. ಪ್ರತ್ಯೇಕವಾಗಿ ಸದರಿ ಮಕ್ಕಳಿಗೆ ವಸತಿ ಶಾಲೆ ತೆರೆಯುವ ಬಗ್ಗೆ ವಿಸ್ತಾರವಾಗಿ ಅಧ್ಯಯನ ಮಾಡಿ ನಂತರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಎಂದು ಕಾರ್ಮಿಕ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕಾರ್ಮಿಕ ಇಲಾಖೆ ಉಪ ಆಯುಕ್ತರಾದ ಲಲಿತಾ ಬಾಯ್ ಮಾತನಾಡಿ, ಪ್ರಸಕ್ತ ಸಾಲಿನಲ್ಲಿ ಕಳೆದ ಏಪ್ರಿಲ್ ನಿಂದ ಅಕ್ಟೋಬರ್‌ವರೆಗೆ 742 ದಾಳಿ ನಡೆಸಲಾಗಿದ್ದು, ಮೂವರು ಬಾಲ ಕಾರ್ಮಿಕರನ್ನು ಹಾಗೂ 17 ಕಿಶೋರ ಕಾರ್ಮಿಕರು ಸೇರಿ ಒಟ್ಟು 20 ಬಾಲ ಕಾರ್ಮಿಕರನ್ನು ಪತ್ತೆಹಚ್ಚಿ ಪ್ರಕರಣ ದಾಖಲಿಸಲಾಗಿದೆ ಎಂದು ಮಾಹಿತಿ ನೀಡಿದರು. ಜಿಲ್ಲಾ ಕಾರ್ಮಿಕ ಅಧಿಕಾರಿ ಚೇತನ್, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಉದಯ್‌ಕುಮಾರ್, ಮಡಿಲು ಸಂಸ್ಥೆಯ ಶ್ರೀನಿವಾಸ್ ಇದ್ದರು.

> “ವಲಸೆ ಕಾರ್ಮಿಕರ ಸಂಖ್ಯೆ ಹೆಚ್ಚಿರುವ ಪ್ರದೇಶಗಳನ್ನು ಗುರುತಿಸಿ, ಅವರ ಮಕ್ಕಳನ್ನು ಕೆಲಸಕ್ಕೆ ಕಳುಹಿಸದೆ ಶಾಲೆಗೆ ದಾಖಲಿಸುವುದು, ಪೌಷ್ಟಿಕ ಆಹಾರ ಸೇವನೆ ಕುರಿತಂತೆ ಹೆಚ್ಚು ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಿ.
> –ಲಕ್ಷ್ಮಿಕಾಂತರೆಡ್ಡಿ, ಜಿಲ್ಲಾಧಿಕಾರಿ

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್‌ಗೆ ಅಭಿನಂದನೆ...



2025ನೇ ಸಾಲಿನ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಅವರನ್ನು ಮಾಜಿ ಸಂಸದ ಪ್ರತಾಪ್ ಸಿಂಹ ಆತ್ಮೀಯವಾಗಿ ಅಭಿನಂದಿಸಿದರು. ಈ ವೇಳೆ ನಗರಪಾಲಿಕೆ ಮಾಜಿ ಸದಸ್ಯ ಎಂ.ಯು.ಸುಬ್ಬಯ್ಯ, ಚಾಮರಾಜ ಕ್ಷೇತ್ರದ ಬಿಜೆಪಿ ಅಧ್ಯಕ್ಷ ದಿನೇಶ್‌ಗೌಡ, ಬಿಜೆಪಿ ಮುಖಂಡರಾದ ರಾ.ಪರಮೇಶಗೌಡ, ಅಶೋಕ್, ಪ್ರಮೋದ್, ಶ್ರವಣ್ ಮಾಲಿ, ನಾಗೇಶ್, ಜಯಣ್ಣ, ಹರೀಶ್, ಕಾರ್ತಿಕ್, ವಿನೋದ್ ಹಾಗೂ ಮುಖಂಡರು ಉಪಸ್ಥಿತರಿದ್ದರು.

ಇಂದು ನೇರ ಫೋನ್ ಇನ್ ಕಾರ್ಯಕ್ರಮ

ಮೈಸೂರು,ನ.18–ಅರಣ್ಯ ಸಂರಕ್ಷಣೆ ಹಾಗೂ ಪ್ರಾಣಿ ಮತ್ತು ಮಾನವ ಸಂಘರ್ಷ ಕುರಿತು ಜೆಎಸ್‌ಎಸ್ ರೇಡಿಯೋ 91.2FM ಸಮುದಾಯ ಬಾನುಲಿ ಕೇಂದ್ರವು ನಾಳೆ (ನ.19) ಬೆಳಗ್ಗೆ 11:30ರಿಂದ ಮಧ್ಯಾಹ್ನ 12:30ರವರೆಗೆ ಮೈಸೂರು ವಿಭಾಗದ ಅರಣ್ಯ ಸಂರಕ್ಷಣಾಧಿಕಾರಿ ಪರಮೇಶ್ ಅವರ ಜೊತೆ ನೇರ ಸಂದರ್ಶನದ ಫೋನ್–ಇನ್ ಕಾರ್ಯಕ್ರಮ ಆಯೋಜಿಸಲಾಗಿದೆ. ಸಾರ್ವಜನಿಕರು ಕರೆ ಮಾಡಿ ಮಾನವ ಮತ್ತು ಪ್ರಾಣಿಗಳ ಸಂಘರ್ಷ ಹಾಗೂ ಅರಣ್ಯ ಸಂರಕ್ಷಣೆ ಕುರಿತು ಯಾವುದೇ ಪ್ರಶ್ನೆಗಳು, ಸಲಹೆಗಳು ಇದ್ದಲ್ಲಿ ಕರೆಮಾಡಿ ನೇರವಾಗಿ ವಲಯ ಅರಣ್ಯ ಸಂರಕ್ಷಣಾಧಿಕಾರಿಗಳ ಜೊತೆ ಮಾತನಾಡಬಹುದು. ಅದಕ್ಕಾಗಿ ನೀವು ಕರೆ ಮಾಡಬೇಕಾದ ನಿಲಯದ ದೂ.ಸಂ.: 8296725912 /0821–2546563.



ಪರಮೇಶ್


ಇಂದು ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘಕ್ಕೆ ಪ್ರಶಸ್ತಿ ಪ್ರದಾನ

ಮೈಸೂರು,ನ.18(ಪಿಎಂ)– ನಗರದ ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘಕ್ಕೆ ಸಹಕಾರ ಯೂನಿಯನ್ ವತಿಯಿಂದ ಕೊಡಮಾಡುವ 2024–25ನೇ ಸಾಲಿನ 'ಅತ್ಯುತ್ತಮ ಸಹಕಾರ ಸಂಘ ಪ್ರಶಸ್ತಿ' ಲಭಿಸಿದೆ. ನ.19ರಂದು ಬೆಳಗ್ಗೆ 11ಕ್ಕೆ ಹುಣಸೂರಿನ ಟೌನ್‌ಹಾಲ್‌ನಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಸದರಿ ಸಂಘಕ್ಕೆ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ಬಂಗಾಳಕೊಲ್ಲಿ, ಅರಬ್ಬಿ ಸಮುದ್ರದಲ್ಲಿ ವಾಯುಭಾರ ಕುಸಿತದ ಹಿನ್ನೆಲೆ

ಮೈಸೂರು, ಕೊಡಗು, ಚಾಮರಾಜನಗರ ಹಾಸನ ಸೇರಿ ಇತರೆಡೆ ನ.22ರವರೆಗೆ ಮೋಡ ಕವಿದ ವಾತಾವರಣ; ಮಳೆ ಸಾಧ್ಯತೆ

ಮೈಸೂರು, ನ.18(ಬಿಎಲ್‌ಯು)– ಬಂಗಾಳಕೊಲ್ಲಿ ಹಾಗೂ ಅರಬ್ಬಿ ಸಮುದ್ರದಲ್ಲಿ ವಾಯುಭಾರ ಕುಸಿತ ಉಂಟಾಗುವ ಲಕ್ಷಣಗಳಿರುವ ಹಿನ್ನೆಲೆಯಲ್ಲಿ ಮೈಸೂರು, ಕೊಡಗು, ಚಾಮರಾಜನಗರ, ಹಾಸನ ಸೇರಿದಂತೆ ರಾಜ್ಯದ ಹಲವು ಜಿಲ್ಲೆಗಳಲ್ಲಿ ಮೋಡ ಆವರಿಸಿ ಹಗುರ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ.



ಮೈಸೂರಿನ ನಾಗನಹಳ್ಳಿಯ ಕೃಷಿ ಹವಾಮಾನ ಕ್ಷೇತ್ರ ವಿಭಾಗದ ಸಹ ಸಂಶೋಧಕ ಡಾ.ಜಿ.ವಿ.ಸುಮಂತ್ ಕುಮಾರ್ ಅವರು ಈ ಕುರಿತಂತೆ ವಿವರಣೆ ನೀಡಿದ್ದಾರೆ.

ಅರಬ್ಬಿ ಸಮುದ್ರದ ವಾಯುಭಾರ ಕುಸಿತ ಪಶ್ಚಿಮಾಭಿಮುಖವಾಗಿ ಚಲಿಸುವ ಕಾರಣ ಅಷ್ಟೇನೂ ಪರಿಣಾಮ ಬೀರುವುದಿಲ್ಲ. ಆದರೆ ಬಂಗಾಳ ಕೊಲ್ಲಿಯ ವಾಯುಭಾರ ಕುಸಿತವು ತಮಿಳುನಾಡು ಅಥವಾ ಆಂಧ್ರ ಕರಾವಳಿ ಮೂಲಕ ಪ್ರವೇಶವಿರುವ ಸಾಧ್ಯತೆ ಇದೆ ಎಂದು ತಿಳಿಸಿದ್ದಾರೆ.

ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತ ಉಂಟಾಗಲಿದ್ದು, ಅಂದಿನಿಂದ ಮೈಸೂರು ಸೇರಿದಂತೆ ರಾಜ್ಯಾದ್ಯಂತ ಮಳೆ ಚುರುಕಾಗುವ ಸಾಧ್ಯತೆ ಇದೆ ಎಂದು ಬೆಂಗಳೂರಿನ ಹವಾಮಾನ ಕೇಂದ್ರದ ವಿಜ್ಞಾನಿ ಸಿ.ಎಸ್.ಪಾಟೀಲ್ ಕೂಡ ತಿಳಿಸಿದ್ದಾರೆ.

ಪ್ರಸುತ್ತ ಹವಾಮಾನ ಸ್ಥಿತಿಯಲ್ಲಿ ನೈಋತ್ಯ ಬಂಗಾಳಕೊಲ್ಲಿ ಮತ್ತು ಶ್ರೀಲಂಕಾ ಕರಾವಳಿಯಲ್ಲಿದ್ದ ವಾಯುಭಾರ ಕುಸಿತ ಈಗ ಕೊಮೊರಿಯನ್ ಪ್ರದೇಶದಲ್ಲಿ ಕೇಂದ್ರಿಕೃತವಾಗಿದೆ. ಇದರ ಪರಿಣಾಮ ಇಂದಿನಿಂದ ನವೆಂಬರ್ 22ರವರೆಗೆ ಮಳೆಯಾಗುವ ಸಾಧ್ಯತೆ ಇದೆ ಎಂದು ಹೇಳಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

19.11.2025 ಬುಧವಾರ, ಮಳೆ ನಕ್ಷತ್ರ: ವಿಶಾಖ, 6.11.2025 ರಿಂದ 19.11.2025
ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಕೃಷ್ಣ ಪಕ್ಷ,
ತಿಥಿ: ಚತುರ್ದಶಿ, ನಕ್ಷತ್ರ: ಸ್ವಾತಿ, ರಾಹುಕಾಲ: ಮಧ್ಯಾಹ್ನ 12 ರಿಂದ 1.30 ರವರೆಗೆ

- **ಮೈಸೂರು ವಿವಿ ರೇಷ್ಮೆ ಕೃಷಿ ವಿಜ್ಞಾನ ಅಧ್ಯಯನ ವಿಭಾಗ, ಮಾಳವಿಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರ :** ರೇಷ್ಮೆ ಕೃಷಿಯಲ್ಲಿನ ಪ್ರಗತಿ ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ, ಅಧ್ಯಕ್ಷತೆ : ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ಎಂ.ಕೆ. ಸವಿತಾ, ಮುಖ್ಯ ಅತಿಥಿಗಳು : ರೇಷ್ಮೆ ನಿರ್ದೇಶನಾಲಯದ ಅಪರ ನಿರ್ದೇಶಕ (ತಾಂತ್ರಿ) ವೈ.ಟಿ. ತಿಮ್ಮಯ್ಯ, ರೇಷ್ಮೆ ಕೃಷಿ ವಿಜ್ಞಾನ ಅಧ್ಯಯನ ವಿಭಾಗದ ಸಂಚಾಲಕ ಪ್ರೊ.ಬಿ. ಸಣ್ಣಪ್ಪ, ಪ್ರೊ. ಆರ್.ಎಸ್. ಉಮಾಕಾಂತ್, ಸ್ಥಳ: ವಿಚಾರ ಸಂಕಿರಣ ಕೊಠಡಿ, ರೇಷ್ಮೆ ಕೃಷಿ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಬೆಳಗ್ಗೆ 9.30ಕ್ಕೆ
- **ರಾಮ್‌ಸನ್ಸ್ ಬೊಂಬೆ ಮನೆ :** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ. ಬೆಳಗ್ಗೆ 10 ರಿಂದ.
- **ಕಾವೇರಿ ಆಯುರ್ವೇದ ಆಸ್ಪತ್ರೆ :** ಪಿಸಿಓಡಿ ಮತ್ತು ಮಕ್ಕಳಲ್ಲಿ ಕಂಡು ಬರುವ ಚರ್ಮರೋಗಕ್ಕೆ ಉಚಿತ ತಪಾಸಣೆ ಮತ್ತು ಚಿಕಿತ್ಸೆ. ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ಕೆಬಿಎಲ್ ಲೇಔಟ್. ಬೆಳಗ್ಗೆ 10ರಿಂದ.
- **ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ :** ಭಾರತದ ಉಕ್ಕಿನ ಮಹಿಳೆಗೆ ಕಾಂಗ್ರೆಸ್ ಮಹಾನಮನ, ಉಪಸ್ಥಿತರು : ಶಾಸಕ ತನ್ವೀರ್ ಸೇಠ್, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್, ಮಾಜಿ ಸಂಸದೆ ಶ್ರೀಮತಿ ತೇಜಸ್ವಿನಿ ಗೌಡ, ಅಧ್ಯಕ್ಷತೆ : ನಗರಾಧ್ಯಕ್ಷ ಆರ್. ಮೂರ್ತಿ, ಡಾ. ಬಿ.ಜೆ. ವಿಜಯಕುಮಾರ್, ಸ್ಥಳ: ಇಂದಿರಾ ಗಾಂಧಿ ಕಾಂಗ್ರೆಸ್ ಭವನ, ಮಧ್ಯಾಹ್ನ 12ಕ್ಕೆ.
- **ಶ್ರೀ ವೀರಭದ್ರೇಶ್ವರ ಸ್ವಾಮಿ ಹಾಗೂ ಶ್ರೀಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್:** ಕಾರ್ತಿಕ ಮಾಸದ ವಿಶೇಷ ಪೂಜಾ ಮಹೋತ್ಸವ, ಅಗ್ನಿ ಕೊಂಡೋತ್ಸವ ಮತ್ತು ಗಿರಿಜಾ ಕಲ್ಯಾಣ, ಸ್ಥಳ: ದೇವಸ್ಥಾನದ ಆವರಣ, ಡಿ.ಬನುಮಯ್ಯ ರಸ್ತೆ, ಕೆ.ಆರ್.ಮೊಹಲ್ಲಾ.
- **ಅಭಿವೃದ್ಧಿ ಆಯುಕ್ತರು (ಕರಕುಶಲ), ಜವಳಿ ಮಂತ್ರಾಲಯ, ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್ :** ಗಾಂಧಿ ಶಿಲ್ಪ ಬಜಾರ್, ಕರಕುಶಲ ಹಾಗೂ ಕೈಮಗ್ಗ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 10 ರಿಂದ.
- **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಡಾ. ಬಾಬು ಜಗಜೀವನ ರಾಮ್ ಅಧ್ಯಯನ, ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ :** ಸಫಾಯಿ ಕರ್ಮಚಾರಿಗಳ ಸ್ಥಿತಿಗತಿಗಳ ಕುರಿತು ಒಂದು ದಿನದ ಕಾರ್ಯಾಗಾರ, ಉದ್ಘಾಟನೆ : ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಅಧ್ಯಕ್ಷತೆ : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಶರಣಪ್ಪ ವಿ.ಹಲಸೆ, ಮುಖ್ಯ ಅತಿಥಿಗಳು :ಡಾ. ಬಾಬು ಜಗಜೀವನ ರಾಮ್ ಸಂಶೋಧನಾ ಸಂಸ್ಥೆ ನಿರ್ದೇಶಕ ರಾಜೇಶ್ ಜಿ.ಗೌಡ, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ, ಸಫಾಯಿ ಕರ್ಮಚಾರಿಗಳ ರಾಜ್ಯ ಮೇಲ್ವಿಚಾರಣಾ ಸಮಿತಿ ಸದಸ್ಯ ಡಾ.ಕೆ.ಬಿ. ಓಬಳೇಶ್, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಡೀನ್ (ಶೈಕ್ಷಣಿಕ) ಪ್ರೊ.ಎಂ. ರಾಮನಾಥಂ ನಾಯ್ಡು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಸಚಿವ (ಪರೀಕ್ಷಾಂಗ) ಪ್ರೊ.ಸಿ.ಎಸ್ ಆನಂದ ಕುಮಾರ್, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಹಣಕಾಸು ಅಧಿಕಾರಿ ಮತ್ತು ನಿರ್ದೇಶಕ CIQA ಪ್ರೊ.ನಿರಂಜನ್ ರಾಜ್ ಎಸ್, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಡೀನ್ (ಅಧ್ಯಯನ ಕೇಂದ್ರ) ಡಾ.ಎನ್.ಆರ್. ಚಂದ್ರೇಗೌಡ, ಸ್ಥಳ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣ, ಬೆಳಗ್ಗೆ 10.30 ಗಂಟೆಗೆ
- **ಮೈಸೂರು ವಿಶ್ವವಿದ್ಯಾನಿಲಯ :** ಮೈಸೂರು ವಿವಿ ಸಂಶೋಧಕರ ಸಂಘ ಉದ್ಘಾಟನೆ, ಸಂವಿಧಾನ ದಿನಾಚರಣೆ, ಉದ್ಘಾಟನೆ : ಸಂಗೀತ ನಿರ್ದೇಶಕ ಡಾ. ಹಂಸಲೇಖ, ಉಪಸ್ಥಿತರು : ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ, ಶಿಕ್ಷಣ ತಜ್ಞ ಶ್ರೀಪಾದ ಭಟ್, ಶಾಸಕ ಹರೀಶ್‌ಗೌಡ, ಮಾಜಿ ಮೇಯರ್ ಪುರುಷೋತ್ತಮ್, ಅಹಿಂದ ಜವರಪ್ಪ, ಪ್ರಗತಿಪರ ಚಿಂತಕಿ ಸವಿತಾ ಪ.ಮಲ್ಲೇಶ್, ವಕೀಲ ಎಂ. ಶಿವಪ್ರಸಾದ್, ಪತ್ರಕರ್ತೆ ರಶ್ಮಿ ಕೋಟಿ, ಅಧ್ಯಕ್ಷತೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಸ್ಥಳ: ಮಾನವಿಕ ಸಭಾಂಗಣ, ಮೈಸೂರು ವಿವಿ, ಬೆಳಗ್ಗೆ 10.30ಕ್ಕೆ.
- **ಹಿಂದೂ ಜಾಗೃತಾ ವೇದಿಕೆ :** ಮೈಸೂರಿಗೆ ಬಸವನಗೌಡ ಪಾಟೀಲ್ ಆಗಮನ, ನಂತರ ಕಲಾಮಂದಿರಕ್ಕೆ ಬೈಕ್ ರ್‍ಯಾಲಿ, ವೇದಿಕೆ ಕಾರ್ಯಕ್ರಮ, ಸ್ಥಳ: ಮಣಿಪಾಲ್ ಆಸ್ಪತ್ರೆ ಹತ್ತಿರ, ಬೆಳಗ್ಗೆ 11ಕ್ಕೆ.
- **ಮೈಸೂರು ವಿಶ್ವವಿದ್ಯಾನಿಲಯ ಭೂ ವಿಜ್ಞಾನ ಅಧ್ಯಯನ ವಿಭಾಗ :** ಡಾ. ಎಂ.ಬಿ. ಬೀರಯ್ಯ ಅವರಿಂದ ಪ್ರೊ. ಎಂ.ಎನ್.ವಿಶ್ವನಾಥಯ್ಯ ದತ್ತಿ ಉಪನ್ಯಾಸ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ.ಲೋಕನಾಥ್, ಕುಲಸಚಿವರಾದ ಶ್ರೀಮತಿ ಎಂ.ಕೆ. ಸವಿತಾ, ಪ್ರೊ ಡಿ. ನಾಗರಾಜು, ಪ್ರೊ.ಬಿ.ವಿ.ಸುರೇಶ್‌ಕುಮಾರ್, ಸ್ಥಳ: ಪ್ರೊ. ಎಂ.ಎನ್.ವಿಶ್ವನಾಥಯ್ಯ ಸಭಾಂಗಣ, ಬೆಳಗ್ಗೆ 11ಕ್ಕೆ.
- **ಮಹಾರತ್ನ ಟ್ರಸ್ಟ್ :** ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಶತವರುಷದ ಶುಭನಾಡಗೀತೆ ಹಾಡುವ ಕಂಠದ ಅನುಪಮಾ ಸಂಗಮ ಕಾರ್ಯಕ್ರಮ, ಉದ್ಘಾಟನೆ: ಜಾನಪದ ವಿದ್ವಾಂಸ ಡಾ.ಪಿ.ಕೆ.ರಾಜಶೇಖರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಕನ್ನಡ–ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಡಾ.ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಸ್ಥಳ: ಕಲಾಮಂದಿರ, ಸಂಜೆ 4ಕ್ಕೆ
- **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ:** ಪ್ರವಚನ: ಪಂಡಿತ್ ವ್ಯಾಸತೀರ್ಥಚಾರ್ಯ ಅವರಿಂದ. ವಿಷಯ: 'ಮಹಾಭಾರತ ತಾತ್ಪರ್ಯ ನಿರ್ಣಯ'. ಸ್ಥಳ: ಮಠದ ಆವರಣ, ಜಯಲಕ್ಷ್ಮೀಪುರಂ. ಸಂಜೆ 5ಕ್ಕೆ.
- **ಅಲೆಯನ್ಸ್ ಕ್ಲಬ್ ಆಫ್ ಮೈಸೂರು ನಾಲ್ವಡಿ, ಗಾನ ನಂದನ :** ಕನ್ನಡ ಹಬ್ಬ, ರಾಜ್ಯ ಹಾಗೂ ಜಿಲ್ಲಾ ಮಟ್ಟದ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಿಗೆ ಸನ್ಮಾನ, ಕನ್ನಡ ಹಾಡುಗಳ ಗಾಯನ ಕಾರ್ಯಕ್ರಮ, ಉದ್ಘಾಟನೆ: ಕರ್ನಾಟಕ ಸುಗಮ ಸಂಗೀತ ಪರಿಷತ್ ಜಿಲ್ಲಾಧ್ಯಕ್ಷ ನಾಗರಾಜ್ ವಿ.ಬೈರಿ, ಅಧ್ಯಕ್ಷತೆ: ಸಮಾಜ ಸೇವಕ ಡಾ.ರಘುರಾಂ ವಾಜಪೇಯಿ, ಉಪಸ್ಥಿತರು: ಕಸಾಪ ಮಾಜಿ ಅಧ್ಯಕ್ಷ ಡಾ.ವೈ.ಡಿ. ರಾಜಣ್ಣ, ಗಾನಂದನ, ನಾಲ್ವಡಿ ಅಧ್ಯಕ್ಷ ಎನ್.ಬೆಟ್ಟೇಗೌಡ, ಸ್ಥಳ: ನಾದಬ್ರಹ್ಮ ಸಂಗೀತ ಸಭಾಂಗಣ, ಸಂಜೆ 5ಕ್ಕೆ
- **ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್:** ಕಲಾ ಸಪ್ತಮಿ ವಾರದ ಕಾರ್ಯಕ್ರಮದ ಅಂಗವಾಗಿ ರಘುಲೀಲ ಸ್ಕೂಲ್ ಆಫ್ ಮ್ಯೂಸಿಕ್ ಅವರಿಂದ 'ಕೃಷ್ಣ ಸಖಿ'–ಹೆಚ್.ಎಸ್.ವೆಂಕಟೇಶಮೂರ್ತಿ ಅವರ ಗೀತೆಗಳ ಆಧಾರಿತ ಸಂಗೀತ ಕಾರ್ಯಕ್ರಮ–ಪ್ರಥಮ್ ಭಟ್, ನವನೀತ ಕೃಷ್ಣ, ಸಾಹಜೀತ್ ಚಂದ್ರಕುಮಾರ್, ರೋಹಿಣಿ ಗಾಯತ್ರಿ, ವೈಷ್ಣವಿ ಮಧುಕುಮಾರ್, ಸಂಹಿತಾ ಶ್ರೀನಿವಾಸ, ಭುವನ ಭಟ್, ರಶ್ಮಿ ಸೂರ್ಯ, ಕಪಿಲಾ ಶ್ರೀಧರ್, ಸಮೀರ ರಾವ್–ಕೊಳಲು, ಸಿ.ವಿಶ್ವನಾಥ್–ಮ್ಯಾಂಡೋಲಿನ್, ಸಂಗೀತ ಥಾಮಸ್–ಕೀಬೋರ್ಡ್, ಭೀಮಾ ಶಂಕರ್ ಬಿದನೂರು–ತಬಲ, ವಿನಯ್ ಕುಮಾರ್ ರಂಗಧೋಳ್–ರಿದಮ್ ಪ್ಯಾಡ್, ಸ್ಥಳ: ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್, ವಿಜಯನಗರ 1ನೇ ಹಂತ, ಸಂಜೆ 6 ರಿಂದ.
- **ರೋಟರಿ ಮೈಸೂರು ಮಿಡ್‌ಟೌನ್ :** ದಿವಂಗತ ಹೆಚ್.ಎಸ್.ಶಿವದೇವಪ್ಪ ಸ್ಮರಣಾರ್ಥ ಆದರ್ಶ ರೈತ ಪ್ರಶಸ್ತಿ ಪ್ರದಾನ ಸಮಾರಂಭ, ಮುಖ್ಯ ಅತಿಥಿಗಳು: ಶಾಸಕ ದರ್ಶನ್ ಪುಟ್ಟಣ್ಣಯ್ಯ, ಪ್ರಶಸ್ತಿ ಪುರಸ್ಕೃತರು: ರಾಂಪುರ, ಹುಲ್ಲಹಳ್ಳಿ ಎಂ.ಎಂ.ಕುಮಾರ್, ಸ್ಥಳ: ಆರ್‌ಸಿಎಲ್ ಸಭಾಂಗಣ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಭಾವ ಸೇತು ಭಾಷೆ ಬದಲಾದರು ಭಾವ ಬದಲಾಗದಿರಲಿ ಬಾನುಲಿ ಸರಣಿ, ಪ್ರಸ್ತುತಿ–ಸಿ.ಎಸ್. ಪೂರ್ಣಿಮಾ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಟಿ.ಎನ್.ಅಶ್ವಿನಿ, ವ್ಯಾಖ್ಯಾನ–ಡಾ. ಮ. ರಾಮಕೃಷ್ಣ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಚಿತ್ರಗೀತೆಗಳು, 9.05 ರೇಷ್ಮೆ ಸಿರಿ, 9.20 ವೃತ್ತಿ ಮಾರ್ಗದರ್ಶನ, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ–ಪಂಡಿತ್, ರಾಜೇಂದ್ರಪ್ರಸನ್ನ–ಕೊಳಲು ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ **ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಡಾ.ಶ್ರೀಪಾದ ಪಿನಾಕಪಾಣಿ–ಹಾಡುಗಾರಿಕೆ, 4.00 ಮಹಿಳಾರಂಗ, ಸಾಧನ ಶಿಖರ–ಮೈಸೂರು ಶೈಲಿಯ ಸಾಂಪ್ರದಾಯಿಕ ಚಿತ್ರಕಲಾ ಕಲಾವಿದರಾದ ಲೀಲಾವತಿ ಹೆಚ್. ಅವರೊಂದಿಗೆ ಮಾತುಕತೆ. ಪ್ರಸ್ತುತಿ–ದಿಗ್ವಿಜಯ್. ಬಿ., 4.30 ಹಿಂದಿ ಚಿತ್ರಗೀತೆಗಳು, 5.00 ಕಟ್ಟೋಣ ಬನ್ನಿ ನಿರ್ಮಾಣ ತಾಂತ್ರಿಕತೆಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ, ಪ್ರಾಯೋಜಕರು–ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್ ಇಂಡಿಯಾ, ಮೈಸೂರು ಚಾಪ್ಟರ್, ವಿಷಯ–ನಿರ್ಮಾಣದಲ್ಲಿ ಸ್ಟ್ರಕ್ಚರಲ್ ಇಂಜಿನಿಯರ್‌ಗಳ ಪಾತ್ರ, ಭಾಗವಹಿಸುತ್ತಾರೆ–ನಿವೃತ್ತ ಡೀನ್ ಮತ್ತು ಸ್ಟ್ರಕ್ಚರಲ್ ಕನ್ಸಲ್ಟಂಟ್ ಡಾ. ಜಿ.ಎಸ್. ಸುರೇಶ್ ಮತ್ತು ಮೈಸೂರಿನ ACCEIನ ಅಧ್ಯಕ್ಷರಾದ ಎಸ್. ಬಿ. ಬಸವರಾಜು, ಪ್ರಸ್ತುತಿ –ಎನ್. ಕೇಶವಮೂರ್ತಿ, 4.45 ಹಿಂದಿ ಪಾಠ– ಶಾಂತಾ ಕಿಣಿ, 6.50 ಕೃಷಿರಂಗ–ಕೃಷಿ ಇಲಾಖೆಯ ಅಭಿವೃದ್ಧಿ ಯೋಜನೆಗಳು ಈ ಕುರಿತು ಮಂಡ್ಯ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರಾದ ವಿ. ಎಸ್. ಅಶೋಕ್ ಅವರೊಂದಿಗೆ ಸಂದರ್ಶನ, ಸಂದರ್ಶಕರು –ಎನ್. ಕೇಶವಮೂರ್ತಿ, 7.45 ಚಿತ್ರಗೀತೆಗಳು, 8.00 ವಿಶೇಷ ಕಾರ್ಯಕ್ರಮ ಸರಣಿ, ಮೈಸೂರು ಆಕಾಶವಾಣಿ ತೊಂಬತ್ತು ನೆನಪುಗಳ ಹೊತ್ತು–ವಿಶೇಷ ಕಾರ್ಯಕ್ರಮ ಸರಣಿ, ಹಿರಿಯ ರೇಡಿಯೊ ಕೇಳುಗರಾದ ಎ.ಡಿ. ನಂಜುಂಡಸ್ವಾಮಿ ಅವರೊಂದಿಗಿನ ಸಂವಾದ, ಇವರೊಂದಿಗೆ ಭಾಗವಹಿಸುತ್ತಾರೆ –ದಿಗ್ವಿಜಯ್ .ಬಿ., 8.30 ಹಿಂದಿ ಚಿತ್ರಗೀತೆಗಳು, 9.30 ಕ್ರೀಡಾಲೋಕ, 10.00 ಜನಪದ ಸಂಗೀತ, 10.30 ಸವಿನೆನಪು

ಮೈಸೂರು ಮಿತ್ರ

ಸಹಕಾರಿಗಳೆಲ್ಲಾ ಪ್ರಾಮಾಣಿಕರಾಗಿರುವ ಪ್ರಮಾಣ ಮಾಡಬೇಕು

ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರೂ ಆದ ಹಿರಿಯ ಶಾಸಕ ಜಿ.ಟಿ.ದೇವೇಗೌಡ ಮನವಿ; ಸಹಕಾರ ಕ್ಷೇತ್ರದ ಧ್ಯೇಯ ಸಾಧನಕ್ಕೆ ಕಟಿಬದ್ಧರಾಗಲು ಕರೆ

ಮೈಸೂರು, ನ.18– ಸಹಕಾರ ಕ್ಷೇತ್ರವನ್ನು ಪಕ್ಷಾತೀತ ಹಾಗೂ ಜಾತ್ಯಾತೀತವಾಗಿ ಅಭಿವೃದ್ಧಿ ಹಾದಿಯಲ್ಲಿ ಮುನ್ನಡೆಸುವ ನಿಟ್ಟಿನಲ್ಲಿ ಪ್ರತಿಯೊಬ್ಬ ಸಹಕಾರಿಯೂ ಕಟಿಬದ್ಧರಾಗಬೇಕು ಎಂದು ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರೂ ಆದ ಹಿರಿಯ ಶಾಸಕ ಜಿ.ಟಿ.ದೇವೇಗೌಡರು ಆಶಿಸಿದರು.



ಹಾವೇರಿಯಲ್ಲಿ ನಡೆದ 72ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮವನ್ನು ಸಹಕಾರ ಮಹಾಮಂಡಳದ ಅಧ್ಯಕ್ಷರೂ ಆದ ಶಾಸಕ ಜಿ.ಟಿ.ದೇವೇಗೌಡ, ವಿಧಾನಪರಿಷತ್ ಸಭಾಪತಿ ಬಸವರಾಜ್ ಹೊರಟ್ಟಿ, ಕಾನೂನು, ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್ ಮತ್ತಿತರ ಗಣ್ಯರು ದೀಪ ಬೆಳಗಿಸಿ, ಉದ್ಘಾಟಿಸಿದರು.

ಹಾವೇರಿಯಲ್ಲಿ ನಡೆದ 72ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಹಿರಿಯರು ಕಟ್ಟಿ ಬೆಳೆಸಿರುವ ಸಹಕಾರ ಕ್ಷೇತ್ರವನ್ನು ಮತ್ತಷ್ಟು ಬಲಿಷ್ಠವಾಗಿ ಬೆಳೆಸುವಲ್ಲಿ ನಾವೆಲ್ಲರೂ ಭಾಗಿಯಾಗಬೇಕು. ಈ ಸಹಕಾರ ಚಳವಳಿಯನ್ನು ಅಭಿವೃದ್ಧಿ ಪಥದಲ್ಲಿ ಯಶಸ್ವಿಯಾಗಿ ಎಳೆದೊಯ್ಯಲು ಪಕ್ಷಾತೀತ ಹಾಗೂ ಜಾತ್ಯಾತೀತವಾಗಿ ನಿಷ್ಠಾವಂತ ಸಹಕಾರಿಯಾಗಿ ಶ್ರಮಿಸಬೇಕಿದೆ ಎಂದರು.

3 ಲಕ್ಷ ಕೋಟಿ ಬಂಡವಾಳ: ಸಹಕಾರ ಕ್ಷೇತ್ರವು ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಆಶಯದಂತೆ ಸೇವೆ ಸಲ್ಲಿಸುತ್ತಿದೆ. ರಾಜ್ಯದಲ್ಲಿ 47 ಸಾವಿರ ಸಹಕಾರ ಸಂಘಗಳಿದ್ದು, 3 ಲಕ್ಷ ಕೋಟಿ ದುಡಿಯುವ ಬಂಡವಾಳವಿದೆ. 1.40 ಲಕ್ಷ ಕೋಟಿ ಠೇವಣಿ ಇದೆ. 2.70 ಕೋಟಿ ಸದಸ್ಯ ಬಳಗವಿದೆ. 36 ಲಕ್ಷ ರೈತರಿಗೆ 27 ಸಾವಿರ ಕೋಟಿ ರೂ. ಸಾಲ ನೀಡಲಾಗಿದೆ. ಪಟ್ಟಣ ಸಹಕಾರಿ ಬ್ಯಾಂಕುಗಳು, ಕೃಷಿಯೇತರ ಸಹಕಾರಿ ಬ್ಯಾಂಕುಗಳು ಸಾಲ ನೀಡುತ್ತಿವೆ. ರಾಜ್ಯದಲ್ಲಿ 1 ಕೋಟಿ ಸೇರಿದಂತೆ ದೇಶದಲ್ಲಿ ನಿತ್ಯ ಐದು ಕೋಟಿ ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ. ಸಹಕಾರ ಸಂಘದ ಮೂಲಕ ಹಾಲು ಉತ್ಪಾದಕರು ನೆಮ್ಮದಿಯ ಜೀವನ ನಡೆಸುತ್ತಿದ್ದಾರೆ ಎಂದು ತಿಳಿಸಿದರು.

ಸಹಕಾರಕ್ಕೂ ಹಣ ಬಲ: ಸಂಸ್ಥೆಯ ಅಧ್ಯಕ್ಷ ಹಾಗೂ ಅಧಿಕಾರಿ ಮೇಲೆ ವಿಶ್ವಾಸವಿಟ್ಟು ಸಾರ್ವಜನಿಕರು ಠೇವಣಿ ಇಡುತ್ತಿದ್ದಾರೆ. ಜನರ ಠೇವಣಿ ಹಣ ಇಲ್ಲವಾಗಿದ್ದರೆ ನಬಾರ್ಡ್‌ನಿಂದ ದೊರಕುವ ಶೇ.18ರಷ್ಟು ಅನುದಾನದಲ್ಲಿ ಕ್ಷೇತ್ರವನ್ನು ಯಶಸ್ವಿಯಾಗಿ ನಿರ್ವಹಿಸಲು ಸಾಧ್ಯವಾಗುವುದಿಲ್ಲ. ಹಿಂದೆ ಸಹಕಾರ ಸಂಘಗಳ ನಿರ್ದೇಶಕರು ಯಾವುದೇ ಭತ್ಯೆ ಪಡೆಯದೆ ಸದಸ್ಯರು ಹಾಗೂ ಸಂಘದ ಹಿತಕ್ಕಾಗಿ ಕೆಲಸ ಮಾಡುತ್ತಿದ್ದರು. ಸಾಲ ಸೌಲಭ್ಯ ದೊರಕಿಸಿಕೊಡುವುದರ ಜೊತೆಗೆ ಸಾಲ ಮರುಪಾವತಿ ಬಗ್ಗೆಯೂ ನಿಗಾ ವಹಿಸುತ್ತಿದ್ದರು. ಆದರೆ ಈಗ ಹಣದ ಪ್ರಭಾವ ಸಹಕಾರ ಕ್ಷೇತ್ರವನ್ನೂ ಹೊಕ್ಕಿದೆ. 1991ರಲ್ಲಿ ಜಾಗತಿಕ ಉದಾರೀಕರಣದ ಪರಿಣಾಮದಿಂದ ತತ್ತರಿಸಿದ್ದರೂ ನಂತರ ಮತ್ತೆ ಶಕ್ತಿಯುತವಾಯಿತು. ಆದರೆ ಈಗ ಡೈರಿಯಿಂದ ಹಿಡಿದು ಬ್ಯಾಂಕ್ ಚುನಾವಣೆವರೆಗೂ ರಾಜಕೀಯ ಶುರುವಾಗಿದೆ. ಏನಾದರೂ ಮಾಡಿ ಅಧಿಕಾರ ಹಿಡಿಯಬೇಕೆಂದು ಮತದಾರರಿಗೆ 10–20 ಸಾವಿರ ನೀಡಿರುವ ಉದಾಹರಣೆಯೂ ಇದೆ ಎಂದು ಆತಂಕ ವ್ಯಕ್ತಪಡಿಸಿದರು.

ಸೇವೆ ಲಾಭಕ್ಕಲ್ಲ: ಸಹಕಾರ ಕ್ಷೇತ್ರವನ್ನು ಉಳಿಸಿ–ಬೆಳೆಸಲು ಮುಂದೆ ಯಾವ ರೀತಿ ಯೋಜನೆ ಅಗತ್ಯವಿದೆ ಎಂಬುದರ ಬಗ್ಗೆ ಒಗ್ಗಟ್ಟಿನಿಂದ ಚರ್ಚಿಸಿ, ತೀರ್ಮಾನಿಸಬೇಕು. ದುಡ್ಡು ಹೊಡೆಯುವವರನ್ನು ಅಧಿಕಾರದಲ್ಲಿ ಕೂರಿಸಿದರೆ ಜನರ ಠೇವಣಿ ಹಣ ಉಳಿಯುತ್ತದೆಯೇ? ಅವರಿಗೆ ಸಾಲ ನೀಡಲು ಸಾಧ್ಯವೇ? ಎಂದು ಯೋಚಿಸಬೇಕು. ನಾವು ಸಹಕಾರ ಕ್ಷೇತ್ರದಲ್ಲಿರುವುದು ಲಾಭದಾಸೆಗಲ್ಲ, ಜನರ ಸೇವೆ ಮಾಡಲು ಎಂಬುದನ್ನು ಮರೆಯಬಾರದು. ಲಾಭ ಬಂದರೆ ಅದು ಎಲ್ಲರಿಗೂ ಹಂಚಿಕೆಯಾಗುತ್ತದೆ, ಆದರೆ ನಷ್ಟವಾದರೆ ಸಂಸ್ಥೆಗಳೇ ಮುಚ್ಚುತ್ತವೆ. ಆದ್ದರಿಂದ ಸಹಕಾರಿಗಳೆಲ್ಲಾ ಪ್ರಾಮಾಣಿಕರಾಗಿರುವ ಪ್ರತಿಜ್ಞೆ ಮಾಡಬೇಕು ಎಂದು ಮನವಿ ಮಾಡಿದರು.

ಧರ್ಮದ ಹಾದಿಯಲ್ಲಿರಿ: ನಾನು ಮಹಾಮಂಡಳದ ಅಧ್ಯಕ್ಷನಾದ ಮೇಲೆ ಡಾ. ನಂಜುಂಡಪ್ಪ ವರದಿಯಂತೆ ಉತ್ತರ ಕರ್ನಾಟಕದ ಬೆಳಗಾವಿಯಲ್ಲಿ ಮಹಾಮಂಡಳದ ವತಿಯಿಂದ ತರಬೇತಿ ಕೇಂದ್ರ ಪ್ರಾರಂಭಿಸಿದೆ. ಇಂದು ಹಾವೇರಿ ಜಿಲ್ಲಾ ಯೂನಿಯನ್‌ನಲ್ಲೂ ನೂತನ ತರಬೇತಿ ಕೇಂದ್ರವನ್ನು ಉದ್ಘಾಟಿಸಲಾಗಿದೆ. ಸಹಕಾರ ಕ್ಷೇತ್ರಕ್ಕಾಗಿ ಪ್ರಾಮಾಣಿಕ ಸೇವೆ ಸಲ್ಲಿಸಿದರೆ, ನಿಮ್ಮ ಮಕ್ಕಳು ಹಾಗೂ ಕುಟುಂಬಕ್ಕೆ ದೇವರು ಒಳ್ಳೆಯದನ್ನೇ ಮಾಡುತ್ತಾನೆ. ಧರ್ಮದ ಹಾದಿಯಲ್ಲಿ ನಡೆದು ಬಂದವರ ಮನೆಯಲ್ಲಿ ತಲೆಮಾರುಗಳಿಂದ ದೀಪ ಬೆಳಗುತ್ತಿದೆ. ಮೋಸ ಮಾಡಿ ಬೆಳೆದವರ ತಲೆಮಾರುಗಳೇ ಉಳಿದಿಲ್ಲ ಎಂದರು.

ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸಭಾಪತಿ ಬಸವರಾಜ್ ಹೊರಟ್ಟಿ, ವಿಧಾನಸಭೆ ಉಪಾಧ್ಯಕ್ಷ ರುದ್ರಪ್ಪ ಲಮಾಣಿ, ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್, ಶಾಸಕ ಬಸವರಾಜ್ ಶಿವಣ್ಣನವರ್, ಹಾವೇರಿ ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಘಾಜೀಗೌಡರು ಸೇರಿದಂತೆ ಮಹಾಮಂಡಳದ ನಿರ್ದೇಶಕರು, ಜಿಲ್ಲಾ ಸಹಕಾರ ಯೂನಿಯನ್ ಹಾಗೂ ಹಾಲು ಒಕ್ಕೂಟದ ಪದಾಧಿಕಾರಿಗಳು ಹಾಗೂ ನಿರ್ದೇಶಕರು, ಸಹಕಾರ ಇಲಾಖೆ ಅಧಿಕಾರಿಗಳು ಭಾಗವಹಿಸಿದ್ದರು.

ಸಹಕಾರ ಸೇವೆಯಿಂದ ಪುಣ್ಯ ಪ್ರಾಪ್ತಿ

ದೇವರು ಕೊಟ್ಟ ಮಾನವ ಜನ್ಮ ದೊಡ್ಡದು. ಈ ಜನ್ಮದಲ್ಲಿ ಪುಣ್ಯ ಮಾಡಿ ಹೋಗಬೇಕು. ಸಹಕಾರ ಕ್ಷೇತ್ರದ ಸೇವೆಯೂ ಪುಣ್ಯದ ಕೆಲಸ. ಹತ್ತಾರು ಬಡವರಿಗೆ ಮನೆ ಕಟ್ಟಲು ಸಾಲ ನೀಡಿ, ಅವರ ಕಣ್ಣೀರು ಒರೆಸುವುದು, ಹೈನುಗಾರಿಕೆ ಸೇರಿದಂತೆ ಎಲ್ಲಾ ವೃತ್ತಿಗಳಿಗೂ ಚೈತನ್ಯ ತುಂಬುವ ಪುಣ್ಯದ ಕೆಲಸ ಸಹಕಾರಿಗಳಿಂದ ಮಾತ್ರ ಸಾಧ್ಯವೇ ಹೊರತು ಯಾವ ಸರ್ಕಾರಗಳಿಂದಲೂ ಅಲ್ಲ. ಎಲ್ಲರ ಆಪತ್ಕಾಲಕ್ಕೂ ನೆರವಾಗುವ ಸಹಕಾರ ಸಂಘಟನೆಯನ್ನು ಗಟ್ಟಿಗೊಳಿಸಿ, ಮುಂದಿನ ತಲೆಮಾರಿಗೆ ಹಸ್ತಾಂತರಿಸೋಣ. ಸಹಕಾರ ಕ್ಷೇತ್ರದ ಮಹತ್ವದ ಬಗ್ಗೆ ಯುವಜನ ಹಾಗೂ ಮಹಿಳೆಯರಿಗೆ ಜಾಗೃತಿ ಮೂಡಿಸಿ, ಆರ್ಥಿಕ ಸಮಾನತೆ ಸಾಧಿಸಲು ಪ್ರಯತ್ನಿಸೋಣ. ಈ ನಿಟ್ಟಿನಲ್ಲಿ ಸಹಕಾರ ಸಪ್ತಾಹ ಸಹಕಾರಿಯಾಗಿದೆ.

–ಜಿ.ಟಿ.ದೇವೇಗೌಡರು, ಶಾಸಕ

ಆನ್‌ಲೈನ್ ಬೆಟ್ಟಿಂಗ್: ಬೆಂಗಳೂರು ಸೇರಿ ದೇಶದ ಮೂರು ಕಡೆಗಳಲ್ಲಿ ಇ.ಡಿ ದಾಳಿ

ನವದೆಹಲಿ, ನ.18– ಹಣ ಅಕ್ರಮ ವರ್ಗಾವಣೆ ಪ್ರಕರಣದ ತನಿಖೆಯ ಭಾಗವಾಗಿ ಆನ್‌ಲೈನ್ ಗೇಮಿಂಗ್ ವೇದಿಕೆಗಳಾದ ವಿಂಝೋ ಹಾಗೂ ಗೇಮ್ಸ್‌ಕ್ರಾಫ್ಟ್‌ಗೆ ಸೇರಿದ ಸ್ಥಳಗಳಲ್ಲಿ ಜಾರಿ ನಿರ್ದೇಶನಾಲಯ (ಇ.ಡಿ) ಮಂಗಳವಾರ ದಾಳಿ ನಡೆಸಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ. ಬೆಂಗಳೂರಿನ ಐದು, ದೆಹಲಿಯ ನಾಲ್ಕು ಹಾಗೂ ಗುರುಗ್ರಾಮದ ಎರಡು ಕಡೆ ಸೇರಿ ಒಟ್ಟು 11 ಕಡೆ ದಾಳಿ ನಡೆಸಲಾಗಿದೆ ಎಂದು ಅವರು ಹೇಳಿದ್ದಾರೆ. ವಿಂಝೋ ಆ್ಯಪ್ ಹಾಗೂ ಗೇಮ್ಸ್‌ಕ್ರಾಫ್ಟ್ ಎನ್ನುವ ಎರಡು ಆನ್‌ಲೈನ್ ಗೇಮಿಂಗ್ ಕಂಪನಿಗಳ ಮೇಲೆ ಬೆಂಗಳೂರು ವಲಯ ಕಚೇರಿಯ ಅಧಿಕಾರಿಗಳು ದಾಳಿ ಮಾಡಿ ಶೋಧ ನಡೆಸುತ್ತಿದ್ದಾರೆ ಎಂದು ಇ.ಡಿ ಮೂಲಗಳು ತಿಳಿಸಿವೆ. ಈ ಬಗ್ಗೆ ಮಾಹಿತಿ ಬಯಸಿ ಈ ಕಂಪನಿಗಳನ್ನು ಸಂಪರ್ಕಿಸುವ ಪ್ರಯತ್ನ ಕೈಗೂಡಲಿಲ್ಲ. ಈ ಎರಡು ಗೇಮಿಂಗ್ ಕಂಪನಿಗಳ ಕಚೇರಿ, ಸಿಒಒ ಹಾಗೂ ಸಿಎಫ್‌ಒಗಳ ಮನೆಗಳ ಮೇಲೂ ದಾಳಿ ನಡೆದಿದೆ.

ಇಂದಿನಿಂದ ಮೈಸೂರು ಚಳಿಗಾಲದ ರೇಸ್

● 15 ದಿನಗಳು ವಿವಿಧ ದಿನಾಂಕಗಳಲ್ಲಿ ನಡೆಯುವ ರೇಸ್ ● ಮಾ.1ರಂದು ಇಂಡಿಯನ್ ಟರ್ಫ್ ಇನ್ವಿಟೇಷನ್ ಕಪ್ ರೇಸ್‌ನೊಂದಿಗೆ ಸಮಾಪ್ತಿ ● ಒಟ್ಟು ಸ್ಟೇಕ್‌ಮನಿ 4.55 ಕೋಟಿ ರೂ.



ಸಾಂದರ್ಭಿಕ ಚಿತ್ರ

ಮೈಸೂರು,ನ.18(ಪಿಎಂ)–ಮೈಸೂರು ರೇಸ್ ಕ್ಲಬ್‌ನಿಂದ ಮೈಸೂರು ಚಳಿಗಾಲದ 2025–26ರ ರೇಸ್‌ಗಳು ನ.19ರಂದು ಪ್ರಾರಂಭವಾಗಲಿವೆ. ಮೈಸೂರಿನ ರೇಸ್‌ಕೋರ್ಸ್‌ನಲ್ಲಿ ವಿವಿಧ ದಿನಗಳಲ್ಲಿ ನಡೆಯುವ ರೇಸ್‌ಗಳು 2026ರ ಮಾ.1ರಂದು ಜರುಗಲಿರುವ ಇಂಡಿಯನ್ ಟರ್ಫ್ ಇನ್ವಿಟೇಷನ್ ಕಪ್ (ಗ್ರೇಡ್ 1) ರೇಸ್‌ನೊಂದಿಗೆ ಮುಕ್ತಾಯಗೊಳ್ಳಲಿದೆ.

ರೇಸಿಂಗ್ ಮೂಲಸೌಕರ್ಯ ಉತ್ತಮವಾಗಿದ್ದು, ರೇಸಿಂಗ್ ಟ್ರ್ಯಾಕ್ ಅನ್ನು ಅತ್ಯಂತ ಜಾಗರೂಕತೆಯಿಂದ ಸಜ್ಜುಗೊಳಿಸಲಾಗಿದೆ. ಇಂಡಿಯನ್ ಟರ್ಫ್ ಇನ್ವಿಟೇಷನ್ ಕಪ್ ವಾರಾಂತ್ಯದ ರೇಸ್‌ಗಳ ಹೊರತುಪಡಿಸಿ, ಕಪ್‌ಗಳು ಹಾಗೂ ಟ್ರೋಫಿಗಳನ್ನು ಒಳಗೊಂಡಂತೆ ಈ ಚಳಿಗಾಲದ ರೇಸ್‌ನಲ್ಲಿ ಒಟ್ಟು ಪ್ರಕಟಿಸಿದ ಸ್ಟೇಕ್‌ಮನಿ (ಹಣ) 4,55,00,000 (4.55 ಕೋಟಿ) ಆಗಿದೆ.

ಚಳಿಗಾಲದ ರೇಸ್‌ನಲ್ಲಿ ನಡೆಯುತ್ತಿರುವ ಎರಡು ಪ್ರತಿಷ್ಠಿತ ಮಿಲಿಯನ್ ರೇಸ್‌ಗಳಲ್ಲಿ ದೇಶದಾದ್ಯಂತ ಉನ್ನತ ಶ್ರೇಣಿಯ ಅಶ್ವ ಪ್ರತಿಭೆಗಳು ಭಾಗವಹಿಸುವುದು ವಿಶೇಷವಾಗಿದೆ. ಮೈಸೂರು ರೇಸ್ ಕ್ಲಬ್‌ಗೆ ಈಗಾಗಲೇ 400 ಕುದುರೆಗಳು ಆಗಮಿಸಿದ್ದು, ಇತರ ರೇಸಿಂಗ್ ಕೇಂದ್ರಗಳಿಂದ ಹೆಚ್ಚುವರಿ ಕುದುರೆಗಳು ಭಾಗವಹಿಸುವ ನಿರೀಕ್ಷೆ ಇದೆ. ಹೊಸದಾಗಿ ಪರವಾನಗಿ ಪಡೆದ ವೃತ್ತಿಪರರು ಸೇರಿದಂತೆ ಸುಮಾರು 38 ಸ್ಥಳೀಯ ತರಬೇತುದಾರರು ವಿಸಿಟಿಂಗ್ ತರಬೇತುದಾರರ ಜೊತೆಗೆ ಭಾಗವಹಿಸಲಿದ್ದಾರೆ. ಭಾರತೀಯ ರೇಸಿಂಗ್ ವ್ಯಾಪ್ತಿಯ ಪ್ರಮುಖ ಜಾಕಿಗಳು ಈ ರೇಸ್‌ನಲ್ಲಿ ಪಾಲ್ಗೊಳ್ಳುವ ನಿರೀಕ್ಷೆ ಸಹ ಇದೆ.

ಮದ್ರಾಸ್ ರೇಸ್ ಕ್ಲಬ್ ಇತ್ತೀಚೆಗೆ ಗಿಂಡಿಯದಲ್ಲಿರುವ ರೇಸ್ ಕೋರ್ಸ್‌ನಲ್ಲಿ ರೇಸಿಂಗ್ ಚಟುವಟಿಕೆಗಳನ್ನು ಸ್ಥಗಿತಗೊಳಿಸಿದೆ. ಹಾಗಾಗಿ ಅಲ್ಲಿನ ಕೆಲ ತರಬೇತುದಾರರು ಮೈಸೂರು ರೇಸ್ ಕ್ಲಬ್ ನಿಯಮಗಳ ಅಡಿಯಲ್ಲಿ ಮೈಸೂರು ರೇಸ್ ಕ್ಲಬ್‌ನಲ್ಲಿ ತರಬೇತುದಾರರ ಪರವಾನಗಿ ಪಡೆದಿದ್ದಾರೆ. ಚೆನ್ನೈನ ಕೆಲವು ಕುದುರೆಗಳು ಮೈಸೂರು ರೇಸ್ ಕ್ಲಬ್‌ಗೆ ಈಗಾಗಲೇ ಆಗಮಿಸಿದ್ದು, ಒಟ್ಟು 100 ಕುದುರೆಗಳು ಚೆನ್ನೈನಿಂದ ಮೈಸೂರಿಗೆ ಬರುವ ನಿರೀಕ್ಷೆಯಿದೆ. ಸಾರ್ವಜನಿಕ ಪ್ರವೇಶ ದರವನ್ನು ದಿನಕ್ಕೆ 200 ರೂ. ನಿಗದಿ ಮಾಡಿದ್ದು, ಆಫ್–ಕೋರ್ಸ್ ಬೆಟ್ಟಿಂಗ್ ಪ್ರವೇಶವನ್ನು ದಿನಕ್ಕೆ 100 ರೂ. ನಿಗದಿ ಮಾಡಲಾಗಿದೆ. ಗ್ರಾಹಕರ ಅನುಕೂಲಕ್ಕಾಗಿ ಸಾಕಷ್ಟು ಟೋಟಲೀಸೇಟರ್ ಟರ್ಮಿನಲ್‌ಗಳು ಕಾರ್ಯನಿರ್ವಹಿಸಲಿವೆ.

ಕ್ಲಬ್‌ನ ವೆಬ್‌ಸೈಟ್‌ನಲ್ಲಿ (www.mysoreracedub.com) ಲೈವ್ ರೇಸಿಂಗ್ ವೀಕ್ಷಿಸಬಹುದು. ಮೈಸೂರು ರೇಸ್ ಕ್ಲಬ್ ಫೇಸ್‌ಬುಕ್ ಹಾಗೂ ಟ್ವಿಟರ್ ಹೊಂದಿದೆ. ಮೈಸೂರು ರೇಸ್ ಕ್ಲಬ್ ಸ್ಟೀವರ್ಡ್‌ಗಳಿಂದ ಈ ಸಾಲಿನ ಮೈಸೂರು ಚಳಿಗಾಲದ ರೇಸ್‌ಗಳಲ್ಲಿ ಟಿಪ್‌ಸ್ಟರ್ಸ್ ಟ್ಯಾಲಿ ಟ್ರೋಫಿ ಮುಂದುವರೆಸಲು ನಿರ್ಧರಿಸಲಾಗಿದೆ. ಈ ಸಂಬಂಧ ನಿಯಮ ಹಾಗೂ ನಿಬಂಧನೆಗಳನ್ನು ರೂಪಿಸಲಾಗಿದೆ ಎಂದು ಮೈಸೂರು ರೇಸ್ ಕ್ಲಬ್ ಲಿಮಿಟೆಡ್‌ನ ವ್ಯವಸ್ಥಾಪನಾ ಸಮಿತಿ ಹಾಗೂ ಸ್ಟೀವರ್ಡ್‌ಗಳ ಪರವಾಗಿ ಕ್ಲಬ್‌ನ ಅಧ್ಯಕ್ಷರೂ ಆದ ಹಿರಿಯ ಸ್ಟೀವರ್ಡ್ ಜಿ.ವೆಂಕಟೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರೇಸಿಂಗ್ ವೇಳಾಪಟ್ಟಿ

ನ.19ರಂದು ರಾಜ್ಯೋತ್ಸವ ಟ್ರೋಫಿ ಹಾಗೂ ಎಸ್.ಎಂ.ಅಟ್ಟಾವೊಲ್ಲಾಹಿ ಮೆಮೊರಿಯಲ್ ಟ್ರೋಫಿ ನಡೆಯಲಿದೆ. ಅಂತೆಯೇ ನ.26ರಂದು ಡಾ.ಎಂ.ಎಸ್. ದೊರೆಸ್ವಾಮಿ ಮೆಮೋರಿಯಲ್ ಟ್ರೋಫಿ, ಡಿ.3ರಂದು ದಿ ಡಾ.ಆರ್.ರಾಜೇಂದ್ರ ಪ್ರಸಾದ್ ಮೆಮೋರಿಯಲ್ ಟ್ರೋಫಿ, ಡಿ.10ರಂದು ದಿ ಡಿ.ವಿ.ವಿಶ್ವನಾಥ್ ಮೆಮೋರಿಯಲ್ ಟ್ರೋಫಿ, ಡಿ.17ರಂದು ದಿ ವಿಧಾತ್ರಿ ಮೋಟಾರ್ಸ್ ಕಪ್, ಡಿ.24ರಂದು ದಶರಥರಾಮ ಶೆಟ್ಟಿ ಮೆಮೋರಿಯಲ್ ಟ್ರೋಫಿ, ಡಿ.31ರಂದು ಎಕ್ವೈನ್ ವೆಟರ್ನರೀಸ್ ಟ್ರೋಫಿ, 2026ರ ಜ.7ರಂದು ದಿ ಚಾಮುಂಡಿ ಮಿಲಿಯನ್, ಜ.15ರಂದು ಏರ್ ಫೋರ್ಸ್ ಟ್ರೋಫಿ, ಜ.22ರಂದು ದಿ ಎಂ.ಗೋವಿಂದಪ್ಪ ಮೆಮೋರಿಯಲ್ ಟ್ರೋಫಿ, ಜ.28ರಂದು ದಿ ಚನ್ನಬಸವಣ್ಣ ಮೆಮೋರಿಯಲ್ ಟ್ರೋಫಿ, ಫೆ.4ರಂದು ದಿ ಡಾ.ಈಶ್ವರಿ ಜಿ.ಕೆ.ಬಾಲಕೃಷ್ಣನ್ ಮೆಮೋರಿಯಲ್ ಟ್ರೋಫಿ, ಫೆ.11ರಂದು ದಿ ಶ್ರೀಕಂಠೀರವ ನರಸಿಂಹರಾಜ ಒಡೆಯರ್ ಮೆಮೋರಿಯಲ್ ಮಿಲಿಯನ್, ಫೆ.28 ಹಾಗೂ ಮಾ.1ರಂದು ಇಂಡಿಯನ್ ಟರ್ಫ್ ಕಪ್ ಇನ್ವಿಟೇಷನ್ ವೀಕೆಂಡ್ ರೇಸ್‌ಗಳು ನಡೆಯಲಿವೆ (ರೇಸ್ ದಿನಾಂಕಗಳು ಬದಲಾವಣೆಗೆ ಒಳಪಟ್ಟಿರುತ್ತವೆ).

ಕನ್ನಡ ರಾಜ್ಯೋತ್ಸವ; ಸಾಂಸ್ಕೃತಿಕ ರಸಸಂಜೆ



ಕನ್ನಡ ರಾಜ್ಯೋತ್ಸವ ಮತ್ತು ಸಾಂಸ್ಕೃತಿಕ ರಸಸಂಜೆ ಕಾರ್ಯಕ್ರಮವನ್ನು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಉದ್ಘಾಟಿಸಿದರು.


ಮೈಸೂರು, ನ.18(ಎಸ್‌ಪಿಎನ್)– ಮೈಸೂರು ಚಾಮರಾಜ ಜೋಡಿ ರಸ್ತೆಯ ಶ್ರೀ ಕೃಷ್ಣದೇವರಾಯ ಸಂಘದ ವತಿಯಿಂದ ಕನ್ನಡ ರಾಜ್ಯೋತ್ಸವ ಮತ್ತು ಸಾಂಸ್ಕೃತಿಕ ರಸಸಂಜೆ ಕಾರ್ಯಕ್ರಮವನ್ನು ಮಂಗಳವಾರ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮಾತೃ ಭಾಷೆ ಬಗ್ಗೆ ಪ್ರೀತಿ ಇರಲಿ. ವ್ಯವಹಾರಕ್ಕಾಗಿ ಇಂಗ್ಲಿಷ್ ಸೇರಿದಂತೆ ಇತರೆ ಭಾಷೆಯನ್ನು ಕಲಿಯುವಂತೆ ಸಲಹೆ ನೀಡಿದರು.

ಈ ವೇಳೆ ಶ್ರೀ ಕೃಷ್ಣದೇವರಾಯ ಸಂಘದ ಅಧ್ಯಕ್ಷ ಶಂಕರ್, ಪದಾಧಿಕಾರಿಗಳಾದ ನಾಗೇಶ್, ಮಂಜುನಾಥ್, ರಮೇಶ್(ಕ್ಯಾತೆ), ವಿಶ್ವನಾಥ್(ವಿಶ್ವ), ರಮೇಶ್, ಶಶಿಕಿರಣ್, ರವಿ ಚಂದ್ರ ಸುಧಾ, ಪುಟ್ಬಾಲ್ ಮಧು, ಉತ್ತನಹಳ್ಳಿ ಶಿವಣ್ಣ, ಓಂಕಾರ್ ಚಂದ್ರು ಉಪಸ್ಥಿತರಿದ್ದರು.

ಮೆದುಳು ತಿನ್ನುವ ಅಮೀಬಾ: ಶಬರಿಮಲೆ ಭಕ್ತರಿಗೆ ರಾಜ್ಯ ಆರೋಗ್ಯ ಇಲಾಖೆ ಎಚ್ಚರಿಕೆ

ಬೆಂಗಳೂರು, ನ.18– ಕೇರಳದಲ್ಲಿ ಮೆದುಳು ತಿನ್ನುವ ಅಮೀಬಾ ನೇಗ್ಲೇರಿಯಾ ಫೌಲೇರಿಯಿಂದ ಉಂಟಾಗುವ ಅಮೀಬಿಕ್ ಮೆನಿಂಗೊಎನ್ಸೆಫಾಲಿಟಿಸ್ ಪ್ರಕರಣಗಳು ಕಂಡು ಬಂದಿರುವ ಹಿನ್ನೆಲೆಯಲ್ಲಿ ರಾಜ್ಯದ ಶಬರಿಮಲೆ ಯಾತ್ರಿಕರಿಗೆ ರಾಜ್ಯದ ಆರೋಗ್ಯ ಇಲಾಖೆ ಮಂಗಳವಾರ ಸಲಹಾ ಮಾರ್ಗಸೂಚಿಯನ್ನು ಹೊರಡಿಸಿದೆ.



ಶಬರಿಮಲೆ ಯಾತ್ರಿಕರು ತಮ್ಮ ಆರೋಗ್ಯದ ಬಗ್ಗೆ ಜಾಗರೂಕರಾಗಿರಲು ಮತ್ತು ಸೋಂಕು ತಡೆಯಲು ಅಗತ್ಯ ಮುನ್ನೆಚ್ಚರಿಕೆ, ಸುರಕ್ಷತಾ ಕ್ರಮಗಳನ್ನು ಪಾಲಿಸುವ ಕುರಿತು ಸಲಹೆಗಳನ್ನು ನೀಡಲಾಗಿದೆ. ನೇಗ್ಲೇರಿಯಾ ಫೌಲೇರಿ ಒಂದು ಸ್ವತಂತ್ರವಾಗಿ ಬದುಕುವ ಅಮೀಬಾ. ಬೆಚ್ಚಗಿನ ಸಿಹಿನೀರು ಹಾಗೂ ಮಣ್ಣಿನಲ್ಲಿ ಕಂಡುಬರುತ್ತದೆ. ನಿಂತ ನೀರು, ಕೊಳ/ಈಜು ಕೊಳಗಳು ಹಾಗೂ ಕೆರೆಗಳಲ್ಲಿ ವಾಸ ಮಾಡುತ್ತೆ. ಈ ಸೋಂಕು ವ್ಯಕ್ತಿಯಿಂದ ವ್ಯಕ್ತಿಗೆ ಅಥವಾ ಕಲುಷಿತಗೊಂಡ ನೀರನ್ನು ಕುಡಿಯುವುದ ರಿಂದ ಹರಡುವುದಿಲ್ಲ. ನೆಗ್ಲೇರಿಯಾ ಫೌಲರಿ ಅತ್ಯಂತ ವಿಷಕಾರಿ ಸೂಕ್ಷ್ಮ ಜೀವಿ. ನೀರಿನಿಂದ ಮೂಗಿಗೆ ಪ್ರವೇಶಿಸಿದಾಗ ಅದು ಮೆದುಳನ್ನು ತಲುಪಲಿದೆ. ಅಮೀಬಿಕ್ ಮೆನಿಂಗೊ ಎನ್ಸೆಫಲೈಟಿಸ್‌ಎನ್ನುವ ಅಪರೂಪದ ಗಂಭೀರ/ಮಾರಣಾಂತಿಕ ಖಾಯಿಲೆಯನ್ನು ಉಂಟುಮಾಡುತ್ತದೆ. ಯಾತ್ರೆಯ ಸಂದರ್ಭದಲ್ಲಿ ನಿಂತ ನೀರಿನಲ್ಲಿ ಸ್ನಾನ ಮಾಡುವಾಗ ನೀರು ಪ್ರವೇಶಿಸದಂತೆ ಮೂಗಿನ ಕ್ಲಿಪ್‌ಗಳನ್ನು ಬಳಸಿ. ಮೂಗನ್ನು ಬಿಗಿಯಾಗಿ ಮುಚ್ಚಿ ಹಿಡಿಯುವಂತೆ ಮುನ್ನೆಚ್ಚರಿಕೆ ನೀಡಲಾಗಿದೆ. ನೀರಿನ ಸಂಪರ್ಕದ ಏಳು ದಿನಗಳ ಒಳಗೆ ಜ್ವರ, ತೀವ್ರ ತಲೆನೋವು, ವಾಕರಿಕೆ, ವಾಂತಿ, ಕುತ್ತಿಗೆ ಬಿಗಿತ, ಗೊಂದಲ, ಮಾನಸಿಕ ಸ್ಥಿತಿಗತಿಗಳಲ್ಲಿ ಬದಲಾವಣೆ ಹಾಗೂ ವ್ಯಕ್ತಿಯ ವರ್ತನೆಯಲ್ಲಿ ಅಸ್ವಸ್ಥತೆ ಲಕ್ಷಣಗಳು ಕಾಣಿಸಿಕೊಂಡರೆ ನಿರ್ಲಕ್ಷಿಸದೆ ತುರ್ತು ಆರೈಕೆ ಪಡೆಯಲು ಸಮೀಪದ ಸರ್ಕಾರಿ ಆಸ್ಪತ್ರೆ, ವೈದ್ಯರನ್ನು ಸಂಪರ್ಕಿಸುವಂತೆ ಸೂಚನೆ ನೀಡಲಾಗಿದೆ.

ಇಂಜಿನಿಯರ್ ಸುಲಿಗೆ; ಪ್ರಮುಖ ಆರೋಪಿ ಬಂಧನ

●ಮತ್ತಿಬ್ಬರಿಗಾಗಿ ಶೋಧ ●ಬಂಧಿತ ಮಹಾ ಖತರ್ನಾಕ್

ಮೈಸೂರು, ನ.18– ಇಂಜಿನಿಯರ್ ಮೇಲೆ ಹಲ್ಲೆ ನಡೆಸಿ, ಕಾರು ಸಹಿತ ಬೆಲೆಬಾಳುವ ವಸ್ತುಗಳನ್ನು ದೋಚಿ ಪರಾರಿಯಾಗಿದ್ದ ಪ್ರಕರಣದಲ್ಲಿ ಪ್ರಮುಖ ಆರೋಪಿಯನ್ನು ಮೈಸೂರಿನ ಮಂಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಹಾಸನ ಜಿಲ್ಲೆ, ಬೇಲೂರು ಮೂಲದ ಯಶವಂತ್(30)ನನ್ನು ಇಂದು ಬೆಂಗಳೂರಿನಲ್ಲಿ ಬಂಧಿಸಿದ್ದು, ಕದ್ದೊಯ್ದಿದ್ದ ಕಾರು ಇನ್ನಿತರ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಯಶವಂತ್ ಜೊತೆ ದುಷ್ಕೃತ್ಯದಲ್ಲಿ ಭಾಗಿಯಾಗಿದ್ದ ಇನ್ನಿಬ್ಬರ ಪತ್ತೆಗೆ ಪೊಲೀಸರು ಶೋಧ ಮುಂದುವರೆಸಿದ್ದಾರೆ.

ರೈಲ್ವೆ ನಿಲ್ದಾಣದ ಬಳಿ ನ.12ರ ಮಧ್ಯರಾತ್ರಿ ಟೀ ಕುಡಿಯಲು ಹೋಗಿದ್ದ ಇಂಜಿನಿಯರ್ ಆಕಾಶ್ ಆದಿತ್ಯ ಅವರ ಕಾರಿನಲ್ಲೇ ಸಬರ್ಬನ್ ಬಸ್ ನಿಲ್ದಾಣದವರೆಗೆ ಡ್ರಾಪ್ ತೆಗೆದುಕೊಂಡು, ಅಲ್ಲಿ ಮದ್ಯ ಖರೀದಿಸಿದ ನಂತರ ಮತ್ತೆ ರೈಲ್ವೆ ನಿಲ್ದಾಣದವರೆಗೂ ಬಂದಿದ್ದ ಮೂವರು ಅಪರಿಚಿತರು ವರಸೆ ಬದಲಿಸಿದ್ದರು. ಆಕಾಶ್ ಅವರನ್ನು ಬೆದರಿಸಿ, ಜೆ.ಕೆ. ಮೈದಾನಕ್ಕೆ ಕರೆದೊಯ್ದು ಹಲ್ಲೆ ಮಾಡಿ ಬೆಳ್ಳಿ ಸರ, ಕೈಕಡಗ, ಪರ್ಸ್ ಜೊತೆಗೆ ಕಾರನ್ನೂ ಕದ್ದೊಯ್ದಿದ್ದರು. ಸದಾ ವಾಹನ, ಜನಸಂಚಾರವಿರುವ ಸ್ಥಳದಲ್ಲೇ ನಡೆದಿದ್ದ ಈ ಪ್ರಕರಣ ಭೇದಿಸುವುದು ಪೊಲೀಸರಿಗೂ ಸವಾಲಾಗಿತ್ತು.

ನೆರವಾದ ಜಿಪಿಎಸ್: ಆರೋಪಿಗಳೂ ಮೊಬೈಲ್ ಇಟ್ಟುಕೊಂಡಿರಲಿಲ್ಲ. ಆಕಾಶ್ ಅವರಿಂದ ಕಿತ್ತುಕೊಂಡಿದ್ದ ಮೊಬೈಲ್ ಕೂಡ ಕೆಲವೇ ಹೊತ್ತಿನಲ್ಲಿ ಸ್ವಿಚ್ಡ್ ಆಫ್ ಆಗಿತ್ತು ಅದೃಷ್ಟವಶಾತ್ ಕಾರಿನಲ್ಲಿ ಜಿಪಿಎಸ್ ಇರುವುದನ್ನು ಆರೋಪಿಗಳು ಗಮನಿಸಿರಲಿಲ್ಲ. ಕಾರಿನ ಜಿಪಿಎಸ್ ಆಧಾರದಲ್ಲಿ ಕಾರ್ಯಾಚರಣೆ ಆರಂಭಿಸಿದ ಪೊಲೀಸರು, ಬೆಂಗಳೂರಿನಲ್ಲಿ ಕದ್ದ ಕಾರಿನಲ್ಲಿ ಸ್ವಚ್ಛಂದವಾಗಿ ಓಡಾಡುತ್ತಿದ್ದ ಪ್ರಮುಖ ಆರೋಪಿ ಯಶವಂತ್‌ನ ಹೆಡೆಮುರಿ ಕಟ್ಟಿದ್ದಾರೆ.

ಆರೋಪಿಯದ್ದು ಇದೇ ಛಾಳಿ: ಆರೋಪಿ ಯಶವಂತ್‌ನದ್ದು ಇದೇ ಛಾಳಿ. ರೈಲಿನಲ್ಲಿ ಮೈಸೂರು, ಬೆಂಗಳೂರು, ಹುಬ್ಬಳ್ಳಿ–ಧಾರವಾಡ, ಹೀಗೆ ಎಲ್ಲೆಂದರಲ್ಲಿಗೆ ಹೋಗಿ ಮೊಬೈಲ್, ಲ್ಯಾಪ್‌ಟಾಪ್, ಪರ್ಸ್ ಕಳ್ಳತನ ಮಾಡುತ್ತಿದ್ದ. ಹೀಗೆಯೇ ನ.12ರಂದು ರಾತ್ರಿ ಮೈಸೂರಿಗೆ ಬಂದು ಹೊಂಚು ಹಾಕುತ್ತಿದ್ದ ಯಶವಂತ್‌ಗೆ ರೈಲ್ವೆ ನಿಲ್ದಾಣದ ಬಳಿ ಇಬ್ಬರ ಪರಿಚಯವಾಗಿದೆ. ಅವರಿಗೂ ಮದ್ಯ ಕೊಡಿಸಿದ ಯಶವಂತ್, ಕಳ್ಳತನಕ್ಕೆ ಪ್ಲಾನ್ ಮಾಡಿದ್ದಾನೆ. ಇದಕ್ಕೆ ಉಳಿದಿಬ್ಬರೂ ಒಪ್ಪಿದ್ದಾರೆ. ಅದೇ ವೇಳೆ ರೈಲ್ವೆ ನಿಲ್ದಾಣದ ಬಳಿ ಟೀ ಕುಡಿಯುತ್ತಿದ್ದ ಆಕಾಶ್‌ಗೆ ಬಲೆ ಬೀಸಿದ್ದಾರೆ. ಏನೂ ತಿಳಿಯದವರಂತೆ ಸರ್, ಇಲ್ಲಿ ಎಣ್ಣೆ ಎಲ್ಲಿ ಸಿಗುತ್ತದೆ ಎಂದು ಕೇಳಿದ್ದಾರೆ. ಇವರ ಯೋಜನೆ ತಿಳಿಯದ ಆಕಾಶ್, ಮೂವರನ್ನೂ ಕಾರಿನಲ್ಲಿ ಸವಾರಿ ಮಾಡಿಸಿ, ನಂತರ ತಾವೇ ಖೆಡ್ಡಾಕ್ಕೆ ಬಿದ್ದಿದ್ದಾರೆ ಎಂದು ಪೊಲೀಸ್ ಮೂಲಗಳಿಂದ ತಿಳಿದುಬಂದಿದೆ.

ಅಪ್ರಾಪ್ತನಿಗೆ ಸ್ಕೂಟರ್ ಕೊಟ್ಟ ಪೋಷಕರಿಗೆ 25 ಸಾವಿರ ದಂಡ

ಮೈಸೂರು, ನ.18– ಅಪ್ರಾಪ್ತನಿಗೆ ಸ್ಕೂಟರ್ ನೀಡಿದ್ದ ತಪ್ಪಿಗೆ ಮೈಸೂರಿನ ವ್ಯಕ್ತಿಯೊಬ್ಬರು ಬರೋಬ್ಬರಿ 25 ಸಾವಿರ ದಂಡ ತೆತ್ತಿದ್ದಾರೆ.

ಹಿನಕಲ್ ನಿವಾಸಿಯೊಬ್ಬರ 17 ವರ್ಷದ ಪುತ್ರ, ಜ್ಯುಪಿಟರ್ ಸ್ಕೂಟರ್‌ನಲ್ಲಿ ಸವಾರಿ ಮಾಡುವಾಗ ವಿಜಯನಗರ 4ನೇ ಹಂತದ ಸಿಗ್ನಲ್ ಬಳಿ ವಿವಿಪುರಂ ಸಂಚಾರ ಠಾಣೆ ಪೊಲೀಸರಿಗೆ ಸಿಕ್ಕಿಬಿದ್ದಿದ್ದ. ಆತನಿಗೆ ತಿಳುವಳಿಕೆ ನೀಡಿದ ಪೊಲೀಸರು, ವಾಹನ ಮಾಲೀಕರನ್ನು ಆರೋಪಿ ಮಾಡುವಂತೆ ನ್ಯಾಯಾಲಯಕ್ಕೆ ಮನವಿ ಮಾಡಿದ್ದರು. ಈ ಹಿನ್ನೆಲೆಯಲ್ಲಿ ಎರಡನೇ ಜೆಎಂಎಫ್‌ಸಿ ನ್ಯಾಯಾಲಯದ ನ್ಯಾಯಾಧೀಶರು, ಅಪ್ರಾಪ್ತನಿಗೆ ವಾಹನ ನೀಡಿದ ಆರೋಪಿಗೆ 25 ಸಾವಿರ ದಂಡ ವಿಧಿಸಿದೆ.

ಪೋಷಕರೇ ಎಚ್ಚರ: ಅಪ್ರಾಪ್ತ ಮಕ್ಕಳಿಗೆ ವಾಹನ ಓಡಿಸಲು ಕೊಡುವುದು ಕಾನೂನು ಬಾಹಿರ. ಇಂತಹವರ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಾಗುವುದರ ಜೊತೆಗೆ ಭಾರೀ ದಂಡ ತೆರಬೇಕಾಗುತ್ತದೆ. ಪೋಷಕರು ತಮ್ಮ ಮಕ್ಕಳನ್ನು ಶಾಲಾ–ಕಾಲೇಜಿಗೆ ಕರೆದುಕೊಂಡು ಹೋಗಿ ಬರಲು ಸಾಧ್ಯವಾಗದಿದ್ದಾಗ ಅವರಿಗೇ ಸ್ಕೂಟರ್ ಅಥವಾ ಬೈಕ್ ಕೊಟ್ಟು ಕಳುಹಿಸುತ್ತಾರೆ. ಮನೆಗೆ ಹತ್ತಿರದಲ್ಲಿದೆ, ಆ ರಸ್ತೆಯಲ್ಲಿ ಕ್ಯಾಮರಾ ಇಲ್ಲ, ಪೊಲೀಸರೂ ಇರುವುದಿಲ್ಲ ಎಂಬ ಲೆಕ್ಕಾಚಾರ ಹಾಕಿ, ನಿಶ್ಚಿಂತೆಯಲ್ಲಿರುತ್ತಾರೆ. ಆದರೆ ಮೂರ್ನಾಲ್ಕು ಮಂದಿ ಎಲ್ಲೆಂದರಲ್ಲಿ ವೇಗವಾಗಿ ಅಡ್ಡಾಡುವುದು ಗಮನಕ್ಕೆ ಬಂದಿರುವುದಿಲ್ಲ. ಈ ರೀತಿಯಲ್ಲಿ ತಗಲಾಕಿಕೊಂಡಾಗಲೇ ವಾಸ್ತವ ಗೊತ್ತಾಗುವುದು. ಕಾನೂನು ದೃಷ್ಟಿಯಿಂದ ಮಾತ್ರವಲ್ಲದೆ ಮಕ್ಕಳ ಸುರಕ್ಷತೆ ನಿಟ್ಟಿನಲ್ಲೂ ಅಪ್ರಾಪ್ತ ವಯಸ್ಸಿನಲ್ಲಿ ವಾಹನ ನೀಡುವುದು ತಪ್ಪು. 18 ವರ್ಷ ತುಂಬಿದ ಬಳಿಕ ಡಿಎಲ್ ಪಡೆದುಕೊಂಡೇ ವಾಹನ ಓಡಿಸಲು ಅವಕಾಶ ನೀಡುವುದು ಒಳಿತು.

ಉಕ್ಕು ಸಚಿವರಾದ ಕೂಡಲೇ ಮಂಜೂರಾತಿ ನೀಡಿದ್ದ ಯೋಜನೆ ಅನುಷ್ಠಾನ

ರೂರ್ಕೆಲಾ ಉಕ್ಕು ಸ್ಥಾವರದಲ್ಲಿ 9 ಸಾವಿರ ಕೋಟಿ ಮೊತ್ತದ ಬೃಹತ್ ಆಧುನೀಕರಣ ಯೋಜನೆಗೆ ಕುಮಾರಸ್ವಾಮಿ ಚಾಲನೆ

ರೂರ್ಕೆಲಾ(ಒಡಿಶಾ): ವಿಕಸಿತ ಭಾರತ ಸಾಕಾರಕ್ಕೆ ಉಕ್ಕು ಕ್ಷೇತ್ರ ಮಹತ್ವದ ಕೊಡುಗೆ ನೀಡುತ್ತಿದೆ ಎಂದು ಕೇಂದ್ರದ ಉಕ್ಕು ಮತ್ತು ಬೃಹತ್ ಕೈಗಾರಿಕೆ ಸಚಿವ ಹೆಚ್.ಡಿ.ಕುಮಾರಸ್ವಾಮಿ ಹೇಳಿದರು.

ಕೇಂದ್ರ ಸರ್ಕಾರದ ಉಕ್ಕು ಸಚಿವಾಲಯ ಅಧೀನದ ಭಾರತೀಯ ಉಕ್ಕು ಪ್ರಾಧಿಕಾರದ (SAIL) ಮೇಲ್ವಿಚಾರಣೆಯಲ್ಲಿ ಕಾರ್ಯನಿರ್ವಹಿಸುವ ರೂರ್ಕೆಲಾ ಉಕ್ಕು ಸ್ಥಾವರದಲ್ಲಿ ಸುಮಾರು 9,000 ಕೋಟಿ ವೆಚ್ಚದ ಬೃಹತ್ ಆಧುನೀಕರಣ ಮತ್ತು ವಿಸ್ತರಣಾ ಕಾರ್ಯಕ್ರಮಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ಇವೆಲ್ಲವೂ ಪ್ರಧಾನಿ ನರೇಂದ್ರ ಮೋದಿ ಅವರ ವಿಕಸಿತ ಭಾರತದ ಕನಸನ್ನು ಸಾಕಾರಗೊಳಿಸುವ ಕೈಗಾರಿಕಾ ದೃಷ್ಟಿಕೋನದೊಂದಿಗೆ ಕಾರ್ಯಗತವಾಗುತ್ತಿದೆ ಎಂದು ತಿಳಿಸಿದರು.

ವೈಜಾಗ್ ಉಕ್ಕು ಕಾರ್ಖಾನೆಗೆ ಕಾಯಕಲ್ಪ, ಬೊಕಾರೊ ಉಕ್ಕು ಸ್ಥಾವರದಲ್ಲಿ 20,000 ಕೋಟಿ ಮೊತ್ತದ ವಿಸ್ತರಣಾ ಯೋಜನೆ ನಂತರ ಇದೀಗ ರೂರ್ಕೆಲಾ ಉಕ್ಕು ಸ್ಥಾವರದಲ್ಲಿ ಬೃಹತ್ ಮೊತ್ತದ ಆಧುನೀಕರಣ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಕಾರ್ಖಾನೆಯ ಉತ್ಪಾದನಾ ಸಾಮರ್ಥ್ಯವನ್ನು ಗರಿಷ್ಠಗೊಳಿಸುವುದರೊಂದಿಗೆ ಉತ್ಪಾದನಾ ಮೌಲ್ಯ ಸರಪಳಿಯನ್ನು ಬಲಪಡಿಸುವುದು ಈ ಯೋಜನೆಯ ಉದ್ದೇಶವಾಗಿದೆ. ವಿಕಸಿತ ಭಾರತ ಸಾಕಾರಗೊಳಿಸುವ ನಿಟ್ಟಿನಲ್ಲಿ ಉಕ್ಕು ಕಾರ್ಖಾನೆಗಳಿಗೆ ಶಕ್ತಿ ತುಂಬಲಾಗುತ್ತಿದೆ ಎಂದರು.



ಒಡಿಶಾದ ರೂರ್ಕೆಲಾ ಉಕ್ಕು ಸ್ಥಾವರದಲ್ಲಿ ಆಧುನೀಕರಣ ಹಾಗೂ ವಿಸ್ತರಣಾ ಯೋಜನೆಗೆ ಚಾಲನೆ ನೀಡಿದ ಉಕ್ಕು ಸಚಿವ ಹೆಚ್.ಡಿ.ಕುಮಾರಸ್ವಾಮಿ, ಅಲ್ಲಿನ ಕಾರ್ಯ ಚಟುವಟಿಕೆ ವೀಕ್ಷಿಸಿದರು.

ಭಾರತೀಯ ಉಕ್ಕು ಕ್ಷೇತ್ರದ ಅಧಾರ ಸ್ತಂಭಗಳಲ್ಲಿ ಒಂದಾದ ರೂರ್ಕೆಲಾ ಉಕ್ಕು ಸ್ಥಾವರದಲ್ಲಿ ಇನ್ನೂ 9,513 ಕೋಟಿ ಮೊತ್ತದ ಇತರೆ ವಿಸ್ತರಣಾ ಮತ್ತು ಅಭಿವೃದ್ಧಿ ಯೋಜನೆಗಳು ಜಾರಿಯ ಹಂತದಲ್ಲಿವೆ. ಹೊಸ ಮೆಲ್ಟಿಂಗ್ ಶಾಪ್, ಕೋಲ್ಡ್ ರೋಲಿಂಗ್ ಗಿರಣಿ, ಉತ್ಪನ್ನ ಪರೀಕ್ಷೆ ಮತ್ತು ಪ್ರಮಾಣೀಕರಣ ಪ್ರಯೋಗಾಲಯ ಮತ್ತು ರಕ್ಷಣಾ ದರ್ಜೆಯ ಉಕ್ಕಿಗಾಗಿ ಕೋಲ್ಡ್ ಪ್ಲೇಟ್ ಲೆವೆಲರ್‌ಗಳ ಅಭಿವೃದ್ಧಿ ವೇಗಗತಿಯಲ್ಲಿ ನಡೆದಿದೆ. ಈಗಾಗಲೇ ಉತ್ಪಾದನಾ ಸಾಮರ್ಥ್ಯ ಮಾತ್ರವಲ್ಲದೆ, ತಂತ್ರಜ್ಞಾನ, ದಕ್ಷತೆ, ಸುಸ್ಥಿರತೆ ಮತ್ತು ಉತ್ಪನ್ನ ಸಾಮರ್ಥ್ಯದಲ್ಲೂ ನಮ್ಮ ಗುರಿ ಸ್ಪಷ್ಟವಾಗಿದೆ. ಮುಂದಿನ ದಿನಗಳಲ್ಲೂ ಕಾರ್ಖಾನೆಯು ಆಧುನಿಕ, ಅತ್ಯುತ್ತಮ ಸಾಮರ್ಥ್ಯದೊಂದಿಗೆ ಕಾರ್ಯ ನಿರ್ವಹಿಸಿ, ಭವಿಷ್ಯಕ್ಕೆ ಉಕ್ಕಿನ ಉತ್ಪಾದನೆಯ ಕೇಂದ್ರಬಿಂದುವಾಗಿ ಹೊರಹೊಮ್ಮಬೇಕು ಎಂದು ಆಶಿಸಿದರು.

ಕಚ್ಚಾ ಉಕ್ಕಿನ ಸಾಮರ್ಥ್ಯವನ್ನು ವಾರ್ಷಿಕ 3.8 ಮೆಟ್ರಿಕ್ ಟನ್‌ನಿಂದ 4.2 ಮೆಟ್ರಿಕ್ ಟನ್‌ಗೆ ಹೆಚ್ಚಿಸುವ ಗುರಿ ಹೊಂದಲಾಗಿದೆ. ಪೆಲೆಟ್ ಪ್ಲಾಂಟ್‌ನ ಹೊರೆ ಮತ್ತು ಗುಣಮಟ್ಟವನ್ನು ಸುಧಾರಿಸುವ ಉದ್ದೇಶದಿಂದ ಕೋಕ್ ದರವನ್ನು ಕಡಿಮೆಗೊಳಿಸಿ ಊದು ಕುಲುಮೆ(ಬ್ಲಾಸ್ಟ್ ಫರ್ನೇಸ್)ಗಳ ಉತ್ಪಾದಕತೆಯನ್ನು ಹೆಚ್ಚಿಸಲು ಆಧುನಿಕ ತಂತ್ರಜ್ಞಾನವನ್ನು ಅಳವಡಿಸಲಾಗಿದೆ. ಸ್ವಚ್ಛ ಮತ್ತು ಇಂಧನದ ಕ್ಷಮತೆ ನೀಡಬಲ್ಲ ಕೋಕ್ ಉತ್ಪಾದನೆಗಾಗಿ ಉಪ ಉತ್ಪನ್ನ ನಿರ್ವಹಣಾ ವ್ಯವಸ್ಥೆಗಳೊಂದಿಗೆ ಸಂಯೋಜಿಸಲಾಗಿದೆ ಎಂದು ತಿಳಿಸಿದರು.

ತಾಂತ್ರಿಕ ನೈಪುಣ್ಯತೆ ಮತ್ತು ಕ್ಷಮತೆಯಲ್ಲಿ ಯಾವುದೇ ರಾಜಿ ಇಲ್ಲ. ವೆಚ್ಚ ಸ್ಪರ್ಧಾತ್ಮಕತೆ, ದಕ್ಷತೆ ಮತ್ತು ಸುಸ್ಥಿರ ಉತ್ಪಾದನೆಯನ್ನು ಸುಧಾರಿಸಿದಾಗ ಮಾತ್ರ ಸಾಮರ್ಥ್ಯ ವಿಸ್ತರಣೆ ಪರಿಪೂರ್ಣವಾಗುತ್ತದೆ. ಕಾರ್ಖಾನೆಯು ಸಂಪೂರ್ಣ ಸ್ಪಷ್ಟತೆ ಮತ್ತು ನಿರ್ದಿಷ್ಟ ಗುರಿಯೊಂದಿಗೆ ಅಧಿನೀಕರಣದತ್ತ ಸಾಗುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಅವರ ದೂರದೃಷ್ಟಿ ಮತ್ತು ಬೆಂಬಲದಿಂದ ಉಕ್ಕು ಕ್ಷೇತ್ರದಲ್ಲಿ ಇಷ್ಟೆಲ್ಲ ಅಭಿವೃದಿ, ಪರಿವರ್ತನೆ ಸಾಧ್ಯವಾಗಿದೆ ಎಂದು ಕುಮಾರಸ್ವಾಮಿ ಹರ್ಷ ವ್ಯಕ್ತಪಡಿಸಿದರು. ಕೇಂದ್ರದ ಬುಡಕಟ್ಟು ವ್ಯವಹಾರಗಳ ಸಚಿವ ಜುವಾಲ್ ಓರಾಮ್, ಭಾರತೀಯ ಉಕ್ಕು ಪ್ರಾಧಿಕಾರದ ಅಧ್ಯಕ್ಷರು ಹಾಜರಿದ್ದರು.

ನಕ್ಕರೆ ಅದೇ ಸ್ವರ್ಗ

ಗುಂಡ : 10 ರೂಪಾಯಿಗೆ ಎಷ್ಟು ಮೊಟ್ಟೆ ಕೊಡ್ತೀರಾ?
ಅಂಗಡಿಯವ : 10ಕ್ಕೆ ಎರಡು ಗುರು
ಗುಂಡ : ಏನ್ ಗುರು ಪಕ್ಕದ ಅಂಗಡಿಯವನು 10 ರೂಪಾಯಿಗೆ ಮೂರು ಮೊಟ್ಟೆ ಕೊಡ್ತಾನೆ.
ಅಂಗಡಿಯವ : ಅಯ್ಯೋ ಅವನ ಕೋಳಿ ಕ್ಯಾರೆಕ್ಟರ್ ಸರಿ ಇಲ್ಲ ಗುರು!

ಮೈಸೂರು ಮಿತ್ರ
ಬುಧವಾರ, 19 ನವೆಂಬರ್ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಜ್ಞಾನದಿಂದ ಹೇಳಿದವರ ಮಾತು ಕೇಳದಿದ್ದರೂ ಪರವಾಗಿಲ್ಲ. ಆದರೆ ಅನುಭವದಿಂದ ಹೇಳಿದವರ ಮಾತು ಖಚಿತವಾಗಿ ಕೇಳಲೇಬೇಕು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಪ್ರಯತ್ನಕ್ಕೆ ಪರಮೇಶ್ವರನೂ ಸಹಾಯ ಮಾಡುವನು.

ನಿಮ್ಮ ಪತ್ರಗಳು

ಎಂದೆಂದಿಗೂ ಮರೆಯಬಾರದ ಮೈಸೂರು ಮಹಾರಾಣಿಯರು

ಮಾನ್ಯರೆ,



ಐದೂವರೆ ಶತಮಾನಗಳ ಮೈಸೂರು ರಾಜರ ಇತಿಹಾಸದಲ್ಲಿ ಹಲವಾರು ರಾಣಿಯರು ಮಹತ್ವದ ಪಾತ್ರ ವಹಿಸಿದ್ದಾರೆ. ಆದರೆ ಅವರಿಗೆ ಇತಿಹಾಸವೇ ಅನ್ಯಾಯ ಮಾಡಿದೆ. ಅವರ ಪಾತ್ರಗಳ ಕೊಡುಗೆಯನ್ನು ಸರಿಯಾಗಿ ಗುರುತಿಸಿಯೇ ಇಲ್ಲ. ಕೊಡಬೇಕಾದ ಮಹತ್ವವನ್ನು ಕೊಟ್ಟೇ ಇಲ್ಲ. ಇದು ಆಶ್ಚರ್ಯವಾದರೂ ನಿಜವಾದ ಸತ್ಯ. ರಾಣಿ ದೇವಜಾಮ್ಮಣ್ಣಿ, ರಾಣಿ ಹೊನ್ನಾಜಮಣ್ಣಿ, ರಾಣಿ ತಿಮ್ಮಾಜಮಣ್ಣಿ, ಮಹಾಮಾತೃಶ್ರೀ ಲಕ್ಷ್ಮಮಣ್ಣಿ ಇವರುಗಳು ನೀಡಿದ ಕೊಡುಗೆಗೆ ಇತಿಹಾಸದ ಪುಟಗಳಲ್ಲಿ ಮಹತ್ವ ಸಿಗದೆ ಹೋಗಿರುವುದು ವಿಷಾದದ ಸಂಗತಿ.

ಮೈಸೂರಿನ ಮಹಾರಾಣಿ ವಾಣೀವಿಲಾಸ ಸನ್ನಿಧಾನದ ಕೆಂಪನಂಜಮಣ್ಣಿಯವರು 1895 ಫೆಬ್ರವರಿ 1 ರಿಂದ 1902ರ ಆಗಸ್ಟ್ 8 ರವರೆಗೆ ರಾಜ್ಯದ ಜವಾಬ್ದಾರಿಯನ್ನು ಹೊತ್ತು ಸಮರ್ಥವಾಗಿ ನಿರ್ವಹಿಸಿದ್ದು, ಇವರ ಅವಧಿಯಲ್ಲಿ ಶಿವನಸಮುದ್ರ ಜಲವಿದ್ಯುತ್ ಯೋಜನೆ, ಮಾರೀಕಣಿವೆ ಜಲಾಶಯ ನಿರ್ಮಾಣ, ಬೆಂಗಳೂರಿನ ವಿಕ್ಟೋರಿಯ ಆಸ್ಪತ್ರೆ, ಕೋಲಾರದ ಚಿನ್ನದ ಗಣಿಯ ಅಭಿವೃದ್ಧಿ ಹಾಗೂ ವಿಜ್ಞಾನಕ್ಕೂ ಪ್ರೋತ್ಸಾಹ ನೀಡಿದ್ದರು. ಇವುಗಳ ಜೊತೆಗೆ ತಮ್ಮ ಕೈನಿಂದ ಬೆಳಗೊಳದ ವಾಣೀವಿಲಾಸ ನೀರು ಸರಬರಾಜು ಕಾರ್ಯಾಗಾರದ ನಿರ್ಮಾಣಕ್ಕೆ 20000 ರೂ. ದೇಣಿಗೆ ನೀಡಿ ಮೈಸೂರು ಜನತೆಗೆ 20000 ಸಾವಿರ ಗ್ಯಾಲನ್ ನೀರನ್ನು ಉಚಿತವಾಗಿ ನೀಡಬೇಕು ಎಂದು ಒಂದು ಷರತ್ತು ಹಾಕಿದ್ದುದ್ದು ಇತಿಹಾಸ. ಇವರ ಸೇವೆಯನ್ನು ಪರಿಗಣಿಸಿ ಬ್ರಿಟಿಷ್ ಸಾಮ್ರಾಜ್ಞಿ 19 ಕುಶಾಲ ತೋಪುಗಳ ಗೌರವವನ್ನೂ, "ಇಂಪೀರಿಯಲ್ ಆರ್ಡರ್ ಆಫ್ ದಿ ಕ್ರೌನ್ ಆಫ್ ಇಂಡಿಯಾ" ಪದಕವನ್ನು ಕೊಟ್ಟು ಗೌರವಿಸಿದೆ. ಇವರ ಹೆಸರಿನಲ್ಲಿ ಇರುವ ಸಂಸ್ಥೆಗಳು, ಕಟ್ಟಡಗಳು, ರಸ್ತೆಗಳು, ಶಾಲೆಗಳು ಇಂದು ಸ್ಮಾರಕವಾಗಿ ನಿಂತು ಸದಾ ನೆನಪಿಗೆ ತರುತ್ತವೆ. ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ತಮ್ಮ ತಾಯಿ ಕೈಗೊಂಡಿದ್ದ ಕಾರ್ಯವನ್ನು ಸಮರ್ಥವಾಗಿ ಮುನ್ನಡೆಸಿ ರಾಜರ್ಷಿಯಾಗಿ ಕೀರ್ತಿ ಪಡೆದರು. ವಾಣೀವಿಲಾಸ ಸನ್ನಿದಾನದ ಮಹಾರಾಣಿ ಕೆಂಪನಂಜಮ್ಮಣ್ಣಿಯವರ ಸಾಹಸದ ಬದುಕು, ಬದುಕಿನ ಸಂದೇಶ ಎಂದೆಂದಿಗೂ ಆದರ್ಶವಾಗಿ ನಿಲ್ಲಬೇಕು ಹಾಗೂ ಇವರುಗಳು ಎಂದೆಂದಿಗೂ ಮರೆಯಬಾರದ ಮೈಸೂರು ಮಹಾರಾಣಿಯರು ಎಂದು ಮೈಸೂರಿನ ಹಿರಿಯ ಪತ್ರಕರ್ತರಾದ ಗೌರಿ ಸತ್ಯ ಅವರ 'ಮೈಸೂರು ಮಿತ್ರ' ಸಾಪ್ತಾಹಿಕ ಪುರವಣಿಯ ಅಂಕಣ ಮನಮುಟ್ಟುವಂತಿದೆ.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

ರೈತರಿಗೆ ಪರಿಹಾರ ಅನಿವಾರ್ಯ

ಮಾನ್ಯರೆ,

ತುಂಗಭದ್ರಾ ಜಲಾನಯನ ಪ್ರದೇಶದ ಸಾವಿರಾರು ರೈತರು ಈ ವರ್ಷ ಗಂಭೀರ ನೀರಿನ ಬಿಕ್ಕಟ್ಟಿನಿಂದಾಗಿ ಎರಡನೇ ಬೆಳೆ ಬೆಳೆಯುವ ಸಾಧ್ಯತೆಯನ್ನು ಕಳೆದುಕೊಂಡಿದ್ದಾರೆ. ಜಲಾಶಯದ ಗೇಟ್‌ಗಳ ದುರಸ್ತಿ ವಿಳಂಬ, ನೀರಾವರಿ ನಿರ್ವಹಣೆಯ ಅಸಮರ್ಪಕತೆ ಮತ್ತು ಯೋಜನಾ ಕೊರತೆಯೇ ಇಂದಿನ ಸ್ಥಿತಿಗೆ ಮುಖ್ಯ ಕಾರಣಗಳಾಗಿವೆ. ಬೆಳೆ ನಾಶವಾಗಿರುವ ಹಿನ್ನೆಲೆಯಲ್ಲಿ ರೈತರು ಆರ್ಥಿಕವಾಗಿ ಭಾರೀ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಈ ಸಂದರ್ಭದಲ್ಲಿ ಸರ್ಕಾರವು ಎಕರೆಗೆ ಕನಿಷ್ಠ 25,000 ರೂ. ಪರಿಹಾರ ನೀಡಬೇಕು. ಪರಿಹಾರ ಕೇವಲ ಸಹಾಯವಲ್ಲ. ರೈತರ ಜೀವನ ಸ್ಥಿರತೆ ಕಾಪಾಡುವ ನೈತಿಕ ಜವಾಬ್ದಾರಿಯೂ ಆಗಿದೆ. ಕೃಷಿ ನಮ್ಮ ರಾಜ್ಯದ ಆರ್ಥಿಕತೆಯ ಬೆನ್ನೆಲುಬು ಆಗಿರುವುದರಿಂದ ರೈತರ ರಕ್ಷಣೆಗೆ ದೃಢವಾದ ನೀತಿಗಳು ತಕ್ಷಣ ಜಾರಿಗೆ ಬರಬೇಕು. ಅದರೊಂದಿಗೆ, ಜಲಾಶಯದ ಗೇಟ್‌ಗಳ ತುರ್ತು ದುರಸ್ತಿ, ಕಾಲುವೆಗಳ ಸ್ವಚ್ಛತೆ ಹಾಗೂ ನೀರಾವರಿ ಯೋಜನೆಗಳ ನವೀಕರಣಕ್ಕೆ ವಿಶೇಷ ನಿಧಿ ಬಿಡುಗಡೆ ಅಗತ್ಯವಾಗಿದೆ. ಇದೇ ರೀತಿಯಲ್ಲಿ, ಭವಿಷ್ಯದಲ್ಲಿ ಇಂತಹ ಸಂಕಷ್ಟಗಳು ಮರುಕಳಿಸದಂತೆ ವಿಜ್ಞಾನಾಧಾರಿತ ನೀರಿನ ನಿರ್ವಹಣೆ ಮತ್ತು ರೈತರೊಂದಿಗೆ ನಿಯಮಿತ ಸಂವಾದ ಜಾರಿ ಮಾಡಬೇಕು.ಸರ್ಕಾರವು ರೈತರ ನೋವನ್ನು ಗಂಭೀರವಾಗಿ ಪರಿಗಣಿಸಿ ತಕ್ಷಣ ಕ್ರಮ ಕೈಗೊಳ್ಳಬೇಕು.

–ಡಾ. ಎಚ್.ಕೆ. ವಿಜಯಕುಮಾರ್, ಮೈಸೂರು.

ದುಸ್ಥಿತಿಯಲ್ಲಿರುವ ಬಸ್ ಸ್ಟ್ಯಾಂಡ್ ಅಭಿವೃದ್ಧಿಪಡಿಸಿ

ಮಾನ್ಯರೆ,

ಮೈಸೂರಿನಿಂದ ಎಚ್.ಡಿ. ಕೋಟೆಗೆ ಬರಬೇಕಾದರೆ ಎಂಎಂ ಮುಖ್ಯ ರಸ್ತೆಯಲ್ಲಿರುವ ಎಚ್.ಮಟಕೇರೆ ಗ್ರಾಮವು ಒಂದು ಪ್ರಸಿದ್ಧವಾದ ಸ್ಥಳವಾಗಿದೆ. ಈ ಗ್ರಾಮದಲ್ಲಿ ಪುರಾತನ ಕಾಲದ ಒಂದು ದೇವಾಲಯವಿದೆ. ಅದುವೇ ಶ್ರೀ ರಾಮಲಿಂಗೇಶ್ವರ ಸ್ವಾಮಿ ದೇವಾಲಯ. ಈ ದೇವಾಲಯದಲ್ಲಿ ಪ್ರತಿ ವರ್ಷವು ಜಾತ್ರೆ ನಡೆಯುತ್ತದೆ. ಈ ದೇವಾಲಯವು ಮುಜರಾಯಿ ಇಲಾಖೆಗೆ ಒಳಪಟ್ಟಿರುತ್ತದೆ. ಈ ದೇವಾಲಯದಲ್ಲಿ ಮದುವೆ ಮುಂತಾದ ಕಾರ್ಯಕ್ರಮಗಳು ದಿನನಿತ್ಯ ನಡೆಯುತ್ತವೆ. ಈ ದೇವಸ್ಥಾನಕ್ಕೆ ಹೆಚ್ ಮಟಕೇರೆ ಗೇಟ್‌ನಿಂದ ಸುಮಾರು ಎರಡು ಕಿ.ಮೀ. ಆಗುತ್ತದೆ. ಅದರೆ ಭಕ್ತಾದಿಗಳು ಹಾಗೂ ಸಾರ್ವಜನಿಕರು ಹೋಗಬೇಕಾದರೆ ಎಂಎಂ ಮುಖ್ಯ ರಸ್ತೆಯಲ್ಲಿರುವ ಹೆಚ್. ಮಟಕೆರೆ ಗೇಟ್ ಹತ್ತಿರ ಒಂದು ಹಳೆಯದಾದ ಬಸ್ಸು ನಿಲ್ದಾಣವಿದೆ. ಈ ಬಸ್ಸು ನಿಲ್ದಾಣದಲ್ಲಿ ಗಿಡಗಂಟಿಗಳು ಬೆಳೆದು ಬಸ್ ನಿಲ್ದಾಣದ ಒಳಗಡೆಯಿಂದ ದುರ್ವಾಸನೆ ಬರುತ್ತಿದೆ. ಹಾಗೆಯೇ ಈ ಬಸ್ ನಿಲ್ದಾಣದ ಗೋಡೆಗಳು, ಮೇಲ್ಛಾವಣಿ ಕುಸಿದು ಬೀಳುವ ಸಂಭವವಿದೆ. ಮಳೆಗಾಲ, ಬೇಸಿಗೆ ಕಾಲ ಬಂದರೆ ಪ್ರಯಾಣಿಕರು ಈ ಬಸ್ ನಿಲ್ದಾಣದಲ್ಲಿ ನಿಲ್ಲುವುದಕ್ಕೂ ಆಗುವುದಿಲ್ಲ. ಅಕ್ಕ ಪಕ್ಕದ ಬೇಕರಿಗಳಲ್ಲಿ ಹಾಗೂ ಮನೆಗಳಲ್ಲಿ ನಿಲ್ಲುವ ಪರಿಸ್ಥಿತಿ ನಿರ್ಮಾಣವಾಗಿದೆ. ಸಂಬಂಧಪಟ್ಟ ಸಾರಿಗೆ ಅಧಿಕಾರಿಗಳು ಬಸ್ ನಿಲ್ದಾಣವನ್ನು ದುರಸ್ತಿಗೊಳಿಸಬೇಕಾಗಿ ಈ ಮೂಲಕ ಮನವಿ.

–ಸಿದ್ದಲಿಂಗೇಗೌಡ, ಹೈರಿಗೆ ಗ್ರಾಮ, ಹೆಚ್. ಡಿ. ಕೋಟೆ ತಾ.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

ವಚನನಿಧಿ ಜಗದ ಸಿರಿ

ಹನ್ನೆರಡನೆಯ ಶತಮಾನ ಕನ್ನಡ ಸಾಹಿತ್ಯದ ಪರ್ವಕಾಲ. ಬಸವಾದಿ ಶರಣರು ಸಮಾಜಮುಖಿಯಾದ ವೈಚಾರಿಕ, ಸಾಮಾಜಿಕ, ಧಾರ್ಮಿಕ ಕ್ರಾಂತಿಯನ್ನು ಮಾಡಿ ವಚನ ಸಾಹಿತ್ಯವನ್ನು ಸೃಷ್ಟಿಸಿದ ಕಾಲ. ಆ ಸಾಹಿತ್ಯವನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿ ಅದರ ಸಾರವನ್ನು ಗ್ರಹಿಸಿರುವ ದಾರ್ಶನಿಕ ಕವಿ ಶ್ರೀ ಕೆ.ಸಿ. ಶಿವಪ್ಪನವರು 'ಮುದ್ದುರಾಮನ ಬೆಡಗು' ಎಂಬ ಚೌಪದಿ ಗ್ರಂಥದಲ್ಲಿ 'ವಚನ ನಿಧಿ ಜಗದ ಸಿರಿ' ಎಂಬ ಅಧ್ಯಾಯದಲ್ಲಿ ವಚನ ಸಾಹಿತ್ಯದ ಬಗೆಗೆ ಏನು ಹೇಳಿದ್ದಾರೆಂದು ನೋಡೋಣ.

ಬಿಡಿಯಾಗಿ ನೋಡಿದರೆ ವಚನ ಮುಕ್ತಕ ಮುತ್ತು
ಸರಗೊಳಿಸಿದರೆ ಇದುವೆ ಮಾಣಿಕ್ಯಹಾರ
ಮುಕ್ತಧೋರಣೆಯಿಂದ ಇದು ಆತ್ಮ ಸಾಹಿತ್ಯ
ವಚನನಿಧಿ ಜಗದ ಸಿರಿ ಮುದ್ದುರಾಮ

ಒಂದೊಂದು ವಚನವೂ ಸ್ವತಂತ್ರವಾಗಿ ಅರ್ಥವನ್ನು ಕೊಡುತ್ತದೆ. ಹಾಗೆ ಬಿಡಿಯಾಗಿ ನೋಡಿದಾಗ ಅದು ಮುಕ್ತಕ. ಮುಕ್ತಕ ಎಂಬ ಶಬ್ದಕ್ಕೆ ಸಂದರ್ಭಮುಕ್ತವಾಗಿ ಸ್ವತಂತ್ರ ಪದ್ಯದಂತೆ ಅರ್ಥವನ್ನು ಕೊಡುವ ಪದ್ಯ ಎಂಬ ಅರ್ಥವಿರುವುದರಿಂದ ವಚನಗಳು ಮುಕ್ತಕಗಳು. ಮುಕ್ತಕ ಎಂಬ ಪದವು ಮುಕ್ತಾ ಎಂಬ ಪದದಿಂದ ಬಂದಿದೆ. ಅದಕ್ಕೆ ಮುತ್ತು (Pearl) ಎಂಬ ಅರ್ಥವೂ ಇದೆ. ಆದ್ದರಿಂದ ಮುತ್ತಿನಂತಹ ಮಾತುಗಳಾದ ವಚನಗಳು ಮುತ್ತುಗಳು. ಅವುಗಳನ್ನು ಸರದಂತೆ ಪೋಣಿಸಿದರೆ ಮಾಣಿಕ್ಯದ ಹಾರದಂತೆ ಶೋಭಿಸುತ್ತವೆ. ಮುಕ್ತರು ಎಂದರೆ ಪ್ರಾಪಂಚಿಕ ಬಂಧನವನ್ನು ಕಳೆದುಕೊಂಡು ಮುಕ್ತಿಯನ್ನು ಪಡೆದವರು. ಅವರ ದೃಷ್ಟಿಕೋನದಿಂದ ನೋಡಿದಾಗ ವಚನಗಳು ಆತ್ಮ ಸ್ವರೂಪವನ್ನು ತಿಳಿಸುವ ಅಧ್ಯಾತ್ಮ ಸಾಹಿತ್ಯ. ಹೀಗೆ ವಚನಗಳ ನಾನಾರ್ಥವನ್ನು ಕವಿ ಶಿವಪ್ಪನವರು ತಿಳಿಸಿದ್ದಾರೆ.

ವಚನದ ಬಗೆಗೆ ಅವರು ಹೇಳುವ ಮಾತು–
ಓದುಗರ ಮೆಚ್ಚುಗೆಗೆ ಪ್ರಿಯವಾಗಲಿಕೆ ವಚನ
ಇರಬೇಕು ಎಂಥದೋ ಸತ್ತ್ವಸಿರಿ ಅಲ್ಲಿ.
ಅಂತರಂಗದ ಸೊಲ್ಲು ಅನುಕಂಪ ಮಾರ್ದನಿಯೊ
ದಯೆತಾಣವೋ ವಚನ ಮುದ್ದುರಾಮ

ಎಂಟು ನೂರು ವರ್ಷಗಳ ಹಿಂದೆ ರಚಿಸಲ್ಪಟ್ಟ ವಚನಗಳು ಇಂದೂ ಎಂದರೆ ಇಪ್ಪತ್ತೊಂದನೆಯ ಶತಮಾನದಲ್ಲೂ ಜನಪ್ರಿಯತೆಯನ್ನು ಉಳಿಸಿಕೊಂಡಿವೆ ಎಂಬುದರಲ್ಲಿ ಸಂಶಯವಿಲ್ಲ. ಈಗಲೂ ವಚನಗಳ ಅಧ್ಯಯನ, ವ್ಯಾಖ್ಯಾನ, ಅನುವಾದಗಳು ನಡೆಯುತ್ತಿವೆ. ಹೀಗಾಗ ಬೇಕಾದರೆ ಅವುಗಳಲ್ಲಿ ಏನೋ ಸತ್ತ್ವ, ಏನೋ ತತ್ತ್ವ ಇರಬೇಕು. ಇಲ್ಲದಿದ್ದರೆ ಅವು ಎಂದೋ ಮರೆಯಾಗಿ ಬಿಡುತ್ತಿದ್ದವು. ಆ ಸತ್ತ್ವ ಯಾವುದೆಂದರೆ, ವಚನ ತುಟಿಯ ಮೇಲಿನ ಮಾತಲ್ಲ, ಅದು ಅಂತರಂಗದ ಸೊಲ್ಲು, ಹೃದಯಾಂತರಾಳದ ನುಡಿ. ಅಷ್ಟೇ ಅಲ್ಲ, ವಚನಗಳು ಅನುಕಂಪೆಯ ಮಾರ್ದನಿ, ಜಗತ್ತಿನ ಶೋಷಿತರನ್ನು ದುಃಖಿತರನ್ನೂ ಬಡವರನ್ನೂ ಕಂಡು ಉಕ್ಕಿದ, ಹೊಮ್ಮಿದ ಪ್ರತಿಧ್ವನಿ. ದಯೆಯ ಸ್ಥಾನವಚನ. ದಯೆಯಿಲ್ಲದ ಧರ್ಮವಿಲ್ಲ ಎಂಬುದು ವಚನಗಳ ಸಾರ.

ಮತ್ತೆ ಶಿವಪ್ಪನವರು ಹೇಳುತ್ತಾರೆ –
ಜೀವಜಾಲದ ಸೊಬಗು ವಚನ ಸೂಳ್ನುಡಿ ಮೆರಗು
ಅರಿವೆ ಅನುಭಾವ ಈ ಬೆಡಗು ಮಾತಿನಲಿ.
ವಚನಸಿರಿ ನಿರ್ವಚನ ಅನುಭವದ ಮಂಟಪದಿ
ಮಾತು ಜ್ಯೋತಿರ್ಲಿಂಗ ಮುದ್ದುರಾಮ.

ಸೂಳ್ನುಡಿ ಎಂದರೆ ಸುಭಾಷಿತ. ವಚನಗಳೆಂಬ ಸೂಳ್ನುಡಿಗಳ ಮೆರಗು. ಜೀವ ಜಾಲದ ಸೊಬಗು. ಈ ವಚನವೆಂಬ ಬೆಡಗು ಮಾತಿ ನಲ್ಲಿ, ಅರಿವು ಎಂದರೆ ಜ್ಞಾನವು ಅನುಭಾವವಾಗಿದೆ. ವಚನಗಳ ಸಿರಿಯ, ಎಂದರೆ ಲಕ್ಷ್ಮಿಯ, ನಿರ್ವಚನ ಅಥವಾ ನಿರುಕ್ತ ನಡೆದಿದ್ದು ಅನುಭವ ಮಂಟಪದಲ್ಲಿ. ಅಲ್ಲಿ ಆದ ತೀರ್ಮಾನವೇನೆಂದರೆ 'ಮಾತು ಜ್ಯೋತಿರ್ಲಿಂಗ' ಎಂಬುದಾಗಿದೆ. ಅಲ್ಲಮ ಪ್ರಭು ಹೇಳುತ್ತಾರೆ–

"ಮಾತೆಂಬುದು ಜ್ಯೋತಿರ್ಲಿಂಗ, ಸ್ವರವೆಂಬುದು ಪರತತ್ತ್ವ
ತಾಳೋಷ್ಠ ಸಂಪುಟವೆಂಬುದು ನಾದಬಿಂದು ಕಳಾತೀತ.
ಗುಹೇಶ್ವರನ ಶರಣರು ನುಡಿದು ಸೂತಕಿಗಳಲ್ಲ ಕೇಳಾ ಮರುಳೆ"

ಆ ವಚನದ ಸಾರ ಈ ಚೌಪದಿಯಲ್ಲಡಗಿದೆ. ಮುದ್ದುರಾಮನ ಇನ್ನೊಂದು ಮುದ್ದಾದ ಚೌಪದಿ ಇಂತಿದೆ–

ವಚನವಾರಿಧಿಯಲ್ಲಿ ಮೆಲ್ಲ ಮುಳುಗಿದರೊಮ್ಮೆ
ಸೂಕ್ತ ಮಾಣಿಕ್ಯ ಹೊತ್ತು ಬರುವೆ ನೀ ಮೇಲೆ
ವಾಕು ರಸಪಾಕಿಂದ, ಶಬ್ದ ಸಂಭ್ರಮ ಸುತ್ತ
ಮಾತು ಮುತ್ತಿನಹಾರ ಮುದ್ದುರಾಮ.

ವಚನ ವಾಙ್ಮಯ ನಿಜವಾಗಿ ಒಂದು ವಾರಿಧಿ, ಎಂದರೆ ಕಡಲು. ಅದರಲ್ಲಿ ಮಾನವನು ತನ್ಮಯನಾಗಿ ಮುಳುಗಬೇಕು. ಹಾಗೆ ಎಷ್ಟೋ ಬಾರಿ ಮುಳುಗಿ ಏಳುತ್ತಿದ್ದರೆ, ಒಮ್ಮೆ ಸೂಕ್ತವಾದ ಮಾಣಿಕ್ಯ, ಅಥವಾ ಸೂಕ್ತರೂಪವಾದ ಮಾಣಿಕ್ಯ ಲಭ್ಯವಾಗುತ್ತದೆ. ಅದನ್ನು ಹೊತ್ತು ನೀನು ಮೇಲಕ್ಕೆ ಬರಬಹುದು. ವಾಕು ಎಂದರೆ ಮಾತು ರಸಪಾಕ, ಅದರ ಸುತ್ತಲೂ ಶಬ್ದ ಸಂಭ್ರಮ. ಅದರಿಂದ ಮಾತು ಮುತ್ತಿನ ಹಾರವಾಗಬಲ್ಲುದು.

ಬಸವಣ್ಣನವರ ವಿಶ್ವಪ್ರಸಿದ್ಧ ವಚನವಿಂತಿದೆ–
ನುಡಿದಡೆ ಮುತ್ತಿನ ಹಾರದಂತಿರಬೇಕು.
ನುಡಿದಡೆ ಮಾಣಿಕ್ಯದ ದೀಪ್ತಿಯಂತಿರಬೇಕು.
ನುಡಿದಡೆ ಸ್ಫಟಿಕದ ಶಲಾಕೆಯಂತಿರಬೇಕು.
ನುಡಿದಡೆ ಲಿಂಗಮೆಚ್ಚಿ ಅಹುದಹುದೆನಬೇಕು.
ನುಡಿಯೊಳಗಾಗಿ ನಡೆಯದಿದ್ದಡೆ
ಕೂಡಲ ಸಂಗಮದೇವನೆಂತೊಲಿವನಯ್ಯಾ॥

ಇದರ ಅರ್ಥವನ್ನೇ ಮುದ್ದುರಾಮ 'ಮಾತು ಮುತ್ತಿನಹಾರ' ಎಂದು ತಿಳಿಸಿದ್ದಾನೆ. ಮುತ್ತಿನ ಹಾರದಷ್ಟು ಬೆಲೆಯುಳ್ಳದ್ದು ಮಾತೆಂಬುದನ್ನರಿಯಬೇಕು.

ವಚನಗಳ ಬಗೆಗೆ ಮುದ್ದುರಾಮನ ಇನ್ನೊಂದು ಚೌಪದಿ–
ನಡೆಯೆ ಸುಂದರವಿರದೆ ನುಡಿ ವಚನವಾದೀತೆ?
ಸೂಳ್ನುಡಿಯ ಆಯಾಮವೇ ಆತ್ಮಸಾಕ್ಷಿ.
ಖ್ಯಾತಿಲಾಭಕೆ ಜೋತ ಮಾತು ಮಲಿನತೆ ರೂಪ
ವಚನ ಜೀವನ ವಿದ್ಯೆ ಮುದ್ದುರಾಮ॥

ನಡೆ–ನುಡಿಗಳಲ್ಲಿ ಸಾಮರಸ್ಯವಿರಬೇಕು. ನುಡಿಯಲ್ಲಿ ಬಂಗಾರ, ನಡೆಯಲ್ಲಿ ಹಿತ್ತಾಳೆ ಆದರೆ ಅಂತಹವನ ಮಾತು ಕೇವಲ ಮಾತು, ವಚನವಲ್ಲ. ನಡೆ ಸುಂದರವಾಗಿಲ್ಲದಿದ್ದರೆ ನುಡಿಯ ಬೆಡಗು ಕೃತ್ರಿಮ ಚಿನ್ನದ ಒಡವೆಯಂತೆ ಮೌಲ್ಯರಹಿತ. ಸೂಳ್ನುಡಿ, ಸೂಕ್ತಿ, ಸುಭಾಷಿತ ಇವುಗಳಿಗೆ ಬೆಲೆ ಬರುವುದು ಆತ್ಮಸಾಕ್ಷಿಗೆ ವಿರುದ್ಧವಲ್ಲದಾಗ ಮಾತ್ರ.

ಯಮೋ ವೈವಸ್ವತೋ ರಾಜಾ ಯಸ್ತವೈಷ ಹೃದಿಸ್ಥಿತಃ।
ತೇನ ಚೇದವಿವಾದಸ್ತೇ ಮಾ ಗಂಗಾಂ ಮಾಕುರೂನ್ ಗಮಃ॥

ಎಂಬ ಶ್ಲೋಕವಿದೆ. ಯಮ, ವೈವಸ್ವತ ಎಂಬ ರಾಜನು ನಿನ್ನ ಹೃದಯದಲ್ಲೇ ನೆಲೆಸಿದ್ದಾನೆ. ಆ ಆತ್ಮಸಾಕ್ಷಿಯೊಡನೆ ವಿವಾದ, ವಿರೋಧ ಇಲ್ಲದ ಹಾಗೆ ನಿನ್ನ ನಡೆ ಇದ್ದರೆ, ನೀನು ಗಂಗಾಸ್ನಾನವನ್ನೂ ಮಾಡಬೇಕಾಗಿಲ್ಲ. ಕುರುಕ್ಷೇತ್ರ ಯಾತ್ರೆಯನ್ನೂ ಮಾಡಬೇಕಾಗಿಲ್ಲ ಎಂದು ಶ್ಲೋಕದ ತಾತ್ಪರ್ಯ. ಆತ್ಮಸಾಕ್ಷಿಗೆ ವಿರೋಧವಿಲ್ಲದವನ ನಡೆ ಅವನ ಮಾತಿಗೆ ಬೆಲೆಯನ್ನು ತಂದುಕೊಡುತ್ತದೆ. ಖ್ಯಾತಿ ಲಾಭಕ ಜೋತ ಮಾತು ಮಲಿನತೆಯ ರೂಪ. ಪ್ರಸಿದ್ಧಿ ಬರಲಿ, ಪತ್ರಿಕೆಗಳ ಮುಖಪುಟದಲ್ಲಿ ನನ್ನ ಚಿತ್ರ ಬರಲಿ ಎಂಬ ಆಶೆಯಿಂದ ಅಥವಾ ಆ ವ್ಯಕ್ತಿಯನ್ನು ಹೊಗಳಿದರೆ ಇಷ್ಟು ಧನಲಾಭ ಎಂಬ ಆಶೆಯಿಂದ ಆಡಿದ ಮಾತು ಮಲಿನತೆಯ ರೂಪ. ಹಾಗೆ ಮಾತನಾಡಲು ಹೋಗಬಾರದು. ವಚನ ಶುದ್ಧ ಜೀವನದ ವಿದ್ಯೆ. ಅದನ್ನೇ ಅಪೇಕ್ಷಿಸಬೇಕು. ಅನೇಕರು ಪುಸ್ತಕಗಳಿಗೆ ಪೂಜೆ ಮಾಡುವುದು, ಆರತಿ ಬೆಳಗುವುದು ಸರಸ್ವತಿಯ ಪೂಜೆ ಎಂದು ಕೊಂಡಿದ್ದಾರೆ. ಓಲೆಗರಿಗಳಿಗೆ ಹೂವುಗಳಿಂದ ಅರ್ಚನೆ ಮಾಡಿದರೆ ಫಲವೇನು? ಮುದ್ದುರಾಮ ಹೇಳುತ್ತಾನೆ–

ಓಲೆ ಕಟ್ಟನು ತಂದು ಪೂಜೆ ಮಣೆ ಮೇಲಿಟ್ಟು
ಧೂಪದಾರತಿಯೆತ್ತಿ ಕೈಮುಗಿದರೇನು?
ತಿರುಳಕೆನೆ ವಚನವನು ಓದಿ ಅರಿ ಅನುಭಾವ
ಚಿತ್ತಚಿತ್ರವೊ ವಚನ ಮುದ್ದುರಾಮ॥

ಇಂದು ಬರೆಯಲು ಕಾಗದವನ್ನು ಉಪಯೋಗಿಸುವಂತೆ ಹಿಂದೆ ತಾಳೆಗರಿಗಳನ್ನು ಬಳಸುತ್ತಿದ್ದರು. ತಾಳೆ ಮರದ ಎಲೆಗಳೇ ತಾಳೆಪತ್ರಗಳು ಅಥವಾ ತಾಳೆಗರಿಗಳು. ಅವುಗಳನ್ನು ಕನ್ನಡದಲ್ಲಿ ಓಲೆ ಎಂದು ಹೇಳುತ್ತಾರೆ. ಆ ಓಲೆಗಳ ಕಟ್ಟುಗಳು ಎಷ್ಟೋ ಮಠಗಳಲ್ಲಿ, ದೇವಾಲಯಗಳಲ್ಲಿ, ಮನೆಗಳಲ್ಲಿ ಇರುತ್ತಿದ್ದುವು. ಕಾಗದದಲ್ಲಿ ಮುದ್ರಿತವಾದ ಪುಸ್ತಕಗಳು ಬಂದ ಮೇಲೆ ಓಲೆಗಳನ್ನು ಓದುವ ಕಲೆ ಮರೆಯಾಯಿತು. ಅವುಗಳಲ್ಲಿ ಕನ್ನಡದ ಗ್ರಂಥಗಳಿರಬಹುದು. ಸಂಸ್ಕೃತ ಶ್ಲೋಕಗಳಿರಬಹುದು, ಮನೆಯವರಿಗೆ ತಿಳಿಯದು. ಆದರೆ ವರ್ಷಕ್ಕೆ ಒಮ್ಮೆ ಬರುವ ಸರಸ್ವತೀ ಹಬ್ಬದಂದು ಓಲೆಯ ಗರಿಯ ಕಟ್ಟನ್ನು ತೆಗೆದು ಧೂಳನ್ನು ಒರೆಸಿ ಪೂಜೆ ಮಣೆಯ ಮೇಲಿಟ್ಟು ಹೂವು ಗಳಿಂದ ಅರ್ಚಿಸಿ ಧೂಪದ ಆರತಿಯನ್ನೆತ್ತಿ ಕೈ ಮುಗಿಯುತ್ತಾರೆ. ಇದರಿಂದ ಯಾವ ಪ್ರಯೋಜನವಿದೆ? ಹಣ್ಣಿನ ತಿರುಳಿನಂತೆ, ಹಾಲಿನ ಕೆನೆಯಂತೆ ಸಾರಿಷ್ಠವಾದ ವಚನಗಳನ್ನು ಶ್ರದ್ಧೆಯಿಂದ ಓದಿ ಅದರ ಅರ್ಥವನ್ನು, ತಾತ್ಪರ್ಯವನ್ನು ತಿಳಿದುಕೊಳ್ಳುವುದೇ ಮುಖ್ಯ. ವಚನವನ್ನು ಓದಿ ಅದರ ಅನುಭಾವವನ್ನು ಅರಿತುಕೋ, ಆ ಅರಿವು ಮುಖ್ಯ ಪ್ರಯೋಜನ ವಚನ ಯಾವುದು? ಚಿತ್ತ ಚಿತ್ರವಚನ. ಹಾಗೆಂದರೆ ಮನವೆಂಬ ಹಾಳೆಯಲ್ಲಿ ಬರೆದ ಚಿತ್ರದಂತಿರುವುದು ವಚನ.

ವಚನ ಎಂಬ ಶಬ್ದಕ್ಕೆ ಕೊಟ್ಟ ಮಾತು (promise) ಎಂಬ ಅರ್ಥವೂ ಇದೆ. ಅದನ್ನು ಮನಸ್ಸಿನಲ್ಲಿಟ್ಟುಕೊಂಡು ಮುದ್ದುರಾಮ ಹೀಗೆಂದಿದ್ದಾನೆ–

ವಚನವೆಂದರೆ ಏನು? ನೀ ಕೊಟ್ಟ ಮಾತು ಅದು
ದೇವಪದತಳದಲ್ಲಿ ನೇರ ಸತ್ಯ ನುಡಿ.
ಹುಸಿಯಾದ ನುಡಿಯಲ್ಲಿ ಇಲ್ಲ ವಚನದ ನೆನಹು;
ವಚನ ಜೀವನಸಾರ ಮುದ್ದುರಾಮ.

ಭಗವಂತನ ಪಾದತಳದಲ್ಲಿ ನಾವಾಗಿ ಇದು ಸತ್ಯವೆಂದು ಆಡಿದ, ಪ್ರತಿಜ್ಞೆ ಮಾಡಿಕೊಟ್ಟ ಮಾತು ವಚನ. ಅದಕ್ಕೆ ತಪ್ಪಿ ನಾವು ನಡೆದರೆ ನಾವು ವಚನಭ್ರಷ್ಟರು. ನಾವೇ ನಂಬದೆ ಆಡಿದ ಹುಸಿ ನುಡಿ ಎಂದೂ ವಚನ ಎನಿಸಲಾರದು. ಇಂತಹ ಸಂದರ್ಭದಲ್ಲಿ ರಾಮನನ್ನು ಹರಿಶ್ಚಂದ್ರನನ್ನೂ ನೆನೆಸಿಕೊಳ್ಳಬೇಕು. ಕೊಟ್ಟ ಮಾತಿಗೆ ತಪ್ಪಲಾರೆನು ಎಂದ ಪುಣ್ಯಕೋಟಿ ಹಸುವನ್ನೂ ಸ್ಮರಿಸಬೇಕು. ಅಂತಹ ಮಾತು ಜೀವನಸಾರ, ಎಂದರೆ ಬದುಕಿನ ಕೆನೆ. ವಚನಗಳನ್ನು ಓದುವಾಗ, ವಚನಗಳನ್ನು ಆಡುವಾಗ ಅವುಗಳ ಮಹತ್ತ್ವ ಮನಸ್ಸಿನಲ್ಲಿ ಇರಬೇಕು.

ಕೇಂದ್ರ ಸರ್ಕಾರದ 'ಅಮೃತ ಮಿತ್ರ' ಯೋಜನೆಯಡಿ ಮಹಿಳಾ ಸ್ವ-ಸಹಾಯ ಸಂಘಗಳಿಗೆ ಮೈಸೂರು ಪಾಲಿಕೆ ವ್ಯಾಪ್ತಿಯ 10 ಉದ್ಯಾನವನಗಳ ನಿರ್ವಹಣೆ ಹೊಣೆ

ವಾರ್ಷಿಕ 60 ಲಕ್ಷ ರೂ. ವೆಚ್ಚದ ನಿರ್ವಹಣೆಗೆ ಆರು ಸ್ವ-ಸಹಾಯ ಸಂಘಗಳ ಆಯ್ಕೆ





ಮೈಸೂರು, ನ.18(ಎಂಕೆ)–ಕೇಂದ್ರ ಸರ್ಕಾರದ ಅಮೃತ ಮಿತ್ರ ಯೋಜನೆಯಡಿ ಮೈಸೂರು ನಗರಪಾಲಿಕೆ ವ್ಯಾಪ್ತಿಯ 10 ಉದ್ಯಾನವನಗಳು ಮತ್ತು ಅವುಗಳ ನಿರ್ವಹಣೆಗಾಗಿ 6 ಮಹಿಳಾ ಸ್ವ-ಸಹಾಯ ಸಂಘ (ಗುಂಪು)ಗಳನ್ನು ಆಯ್ಕೆ ಮಾಡಲಾಗಿದೆ.

ಸ್ಥಳೀಯ ಸಂಸ್ಥೆಗಳ ವಿವಿಧ ಕಾರ್ಯ ಚಟುವಟಿಕೆಗಳ ಯಶಸ್ವಿ ಅನುಷ್ಠಾನಕ್ಕೆ ಮಹಿಳಾ ಸ್ವಸಹಾಯ ಸಂಘಗಳನ್ನು ತೊಡಗಿಸಿಕೊಳ್ಳುವ ಯೋಜನೆ ಇದಾಗಿದ್ದು, ಮೈಸೂರಿನ ಪ್ರಮುಖ 10 ಪಾರ್ಕ್‌ಗಳ ನಿರ್ವಹಣಾ ಜವಾಬ್ದಾರಿಯನ್ನು ನೀಡಲು ನಗರಪಾಲಿಕೆ ಮುಂದಾಗಿದೆ.

ವಾರ್ಡ್ ನಂ.9ರ ವ್ಯಾಪ್ತಿಯ ಹೈದರಾಲಿ ಉದ್ಯಾನವನ, ವಾರ್ಡ್ ನಂ.10ರ ವ್ಯಾಪ್ತಿಯ ಅಲ್ ಬದರ್ ಮಸೀದಿ ಎದುರಿನ ಉದ್ಯಾನವನ, ಖುದಾದತ್ ಮಸೀದಿ ಹಿಂಭಾಗದ ಉದ್ಯಾನವನ, ಆಂಡಾಲಸ್ ಶಾಲೆ ಹಿಂಭಾಗದ ಉದ್ಯಾನವನ, ವಾರ್ಡ್ ನಂ.11ರ ವ್ಯಾಪ್ತಿಯ ಲಿಟಲ್ ಇನ್ಫಂಟ್ ಶಾಲೆ ಹತ್ತಿರದ ಉದ್ಯಾನವನ ಮತ್ತು ಶಾಂತಿನಗರ ಶಾಲೆ ಎದುರಿನ ತ್ರಿಕೋನಾಕಾರದ ಉದ್ಯಾನವನ, ವಾರ್ಡ್ ನಂ.29ರ ವ್ಯಾಪ್ತಿಯ ಶಿವಾಜಿ ಉದ್ಯಾನವನ, ವಾರ್ಡ್ ನಂ.34ರ ವ್ಯಾಪ್ತಿಯ ಸಾತಗಳ್ಳಿ ಬಂಡೆಕಲ್ಲು ಉದ್ಯಾನವನ ಮತ್ತು ರಾಜೀವ್ ಗಾಂಧಿ ಉದ್ಯಾನವನ ಹಾಗೂ ವಾರ್ಡ್ ನಂ.64ರ ವ್ಯಾಪ್ತಿಯ ಮಧುವನ ಪಾರ್ಕ್‌ಗಳನ್ನು ಆಯ್ಕೆ ಮಾಡಲಾಗಿದೆ. 1 ವರ್ಷದ ಅವಧಿಗೆ ಸುಮಾರು 60 ಲಕ್ಷ ರೂ.ವೆಚ್ಚದಲ್ಲಿ ಪಾಲಿಕೆಯ 10 ಉದ್ಯಾನವನಗಳ ನಿರ್ವಹಣಾ ಜವಾಬ್ದಾರಿಯನ್ನು 6 ಮಹಿಳಾ ಸ್ವ-ಸಹಾಯ ಸಂಘಗಳಿಗೆ ನೀಡಲಾಗುತ್ತಿದ್ದು, ಉದ್ಯಾನವನಗಳ ವಿಸ್ತೀರ್ಣದ ಆಧಾರದ ಮೇಲೆ ಜವಾಬ್ದಾರಿ ಹಂಚಲು ಚಿಂತನೆ ನಡೆಸಲಾಗುತ್ತಿದೆ ಎಂದು ಪಾಲಿಕೆ ತೋಟಗಾರಿಕೆ ವಿಭಾಗದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಪಿ.ಕೆ.ಮೋಹನ್‌ಕುಮಾರ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಗುತ್ತಿಗೆ ಆಧಾರದ ಮೇಲೆ ಮೈಸೂರಿನ ಉದ್ಯಾನವನಗಳನ್ನು ನಿರ್ವಹಣೆ ಮಾಡಲಾಗುತ್ತಿದೆ. ನಿರ್ವಹಣೆ ಗಮನಿಸಿ ಗುತ್ತಿಗೆದಾರರಿಗೆ ಬಿಲ್ ಪಾವತಿ ಮಾಡಲಾಗುವುದು. ಇದರ ನಡುವೆ ಕೇಂದ್ರ ಸರ್ಕಾರದ ಅಮೃತ ಮಿತ್ರ ಯೋಜನೆಯಡಿ ಮಹಿಳಾ ಸ್ವ-ಸಹಾಯ ಸಂಘಗಳನ್ನು ತೊಡಗಿಸಿಕೊಂಡು ಉದ್ಯಾನವನಗಳನ್ನು ನಿರ್ವಹಿಸುವ ದೃಷ್ಟಿಯಿಂದ ಪ್ರಮುಖ 10 ಪಾರ್ಕ್‌ಗಳನ್ನು ಹಾಗೂ ನಿರ್ವಹಣೆಗಾಗಿ ಪಾಲಿಕೆ ನಿಯಮಗಳಿಗೆ ಒಪ್ಪಿದ 6 ಸ್ವ-ಸಹಾಯ ಸಂಘಗಳನ್ನು ಆಯ್ಕೆ ಮಾಡಲಾಗಿದ್ದು, ಸದ್ಯದಲ್ಲಿಯೇ ನಿರ್ವಹಣೆ ಜವಾಬ್ದಾರಿ ನೀಡಲಾಗುವುದು ಎಂದರು.

ವ್ಯಾಯಾಮ ಸಲಕರಣೆಗಳ ನಿರ್ವಹಣೆ: ಮೈಸೂರಿನ ಹಲವು ಪಾರ್ಕ್‌ಗಳಲ್ಲಿ ಅಳವಡಿಸಿರುವ ವ್ಯಾಯಾಮ ಸಲಕರಣೆಗಳ ನಿರ್ವಹಣೆ ಮತ್ತು ಮರು ಜೋಡಣೆ ಸಂಬಂಧ ಹಾಗಾಗ ಪರಿಶೀಲನೆ ನಡೆಸಿ, ಗುತ್ತಿಗೆದಾರರ ಮೂಲಕ ನಿರ್ವಹಣೆ ಮಾಡಲಾಗುತ್ತಿದೆ. ಸದ್ಯದಲ್ಲಿಯೇ ಟೆಂಡರ್ ಕರೆದು ಹಾಳಾಗಿರುವ ವ್ಯಾಯಾಮ ಸಲಕರಣೆಗಳನ್ನು ಮರು ಜೋಡಿಸುವ ಕಾರ್ಯ ಚಟುವಟಿಕೆಗಳು ಆರಂಭವಾಗಲಿವೆ ಎಂದು ತಿಳಿಸಿದರು.

ಇಂದು ಅಭಿನಂದನಾ ಕಾರ್ಯಕ್ರಮ...

'ನಮ್ಮ ಮೈಸೂರು–ನಮ್ಮ ಕೊಡುಗೆ' ಶೀರ್ಷಿಕೆಯಡಿ ಸಿಎಸ್‌ಆರ್ ಮತ್ತು ದತ್ತು ಯೋಜನೆಯಡಿ ಉದ್ಯಾನವನಗಳ ನಿರ್ವಹಣೆ ಹಾಗೂ ಸೌಂದರ್ಯೀಕರಣಕ್ಕೆ ಸಹಕರಿಸುತ್ತಿರುವ ಖಾಸಗಿ ಸಂಸ್ಥೆಗಳು ಮತ್ತು ಖಾಸಗಿ ವ್ಯಕ್ತಿಗಳಿಗೆ ನಗರ ಪಾಲಿಕೆ ವತಿಯಿಂದ ನಾಳೆ(ನ.19) ಅಭಿನಂದನಾ ಸಮಾರಂಭವನ್ನು ಆಯೋಜಿಸಲಾಗಿದೆ. ಪಾಲಿಕೆ ಕೇಂದ್ರ ಕಚೇರಿಯ ಜಯಚಾಮರಾಜೇಂದ್ರ ಸಭಾಂಗಣದಲ್ಲಿ ಬೆಳಗ್ಗೆ 11 ಗಂಟೆಗೆ ಅಭಿನಂದನಾ ಕಾರ್ಯಕ್ರಮ ನಡೆಯಲಿದ್ದು, ಪಾಲಿಕೆಯೊಂದಿಗೆ ಉದ್ಯಾನವನ ನಿರ್ವಹಣೆಗೆ ಮತ್ತು ಸೌಂದರ್ಯೀಕರಣಕ್ಕೆ ಆಸಕ್ತ ಸಂಸ್ಥೆಗಳು ಮತ್ತು ವ್ಯಕ್ತಿಗಳು ಪಾಲಿಕೆಯ ತೋಟಗಾರಿಕೆ ವಿಭಾಗವನ್ನು ಸಂಪರ್ಕಿಸಬಹುದಾಗಿದೆ.



56 ಹೊಸ ಸೇರ್ಪಡೆ ಸೇರಿ 585 ಪಾರ್ಕ್‌ಗಳು...!



"ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ) ವ್ಯಾಪ್ತಿಯಲ್ಲಿದ್ದ 56 ಉದ್ಯಾನವನಗಳು ಹೊಸದಾಗಿ ನಗರಪಾಲಿಕೆಗೆ ಸೇರ್ಪಡೆಯಾಗಿದ್ದು, ಪಾಲಿಕೆ ವ್ಯಾಪ್ತಿಯಲ್ಲೀಗ ಒಟ್ಟು 585 ಪಾರ್ಕ್‌ಗಳಿವೆ. ಅವುಗಳಲ್ಲಿ 332 ಪಾರ್ಕ್‌ಗಳನ್ನು ನಿರ್ವಹಣೆ ಮಾಡಲಾಗುತ್ತಿದೆ. ಸಿಎಸ್‌ಆರ್ ಯೋಜನೆಯಡಿ 22 ಪಾರ್ಕ್‌ಗಳ ನಿರ್ವಹಣೆ ನಡೆಯುತ್ತಿದ್ದರೆ, ಕೆಲವರು ದತ್ತು ಪಡೆದು ಪಾರ್ಕ್‌ಗಳನ್ನು ನಿರ್ವಹಣೆ ಮಾಡುತ್ತಿದ್ದಾರೆ.

–ಪಿ.ಕೆ.ಮೋಹನ್‌ಕುಮಾರ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ನಗರಪಾಲಿಕೆ ತೋಟಗಾರಿಕೆ ವಿಭಾಗ

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ನ.21 'ಗಾಂಧೀ ಪ್ರಣೀತ ಧರ್ಮದರ್ಶಿತ್ವ', 'ಬುದ್ಧ ನಾಗಾರ್ಜುನರ ಶೂನ್ಯಯಾನ' ಇಂಗ್ಲಿಷ್ ಅನುವಾದಿತ ಕೃತಿಗಳ ಬಿಡುಗಡೆ

ಮೈಸೂರು,ನ.18(ಜಿಎ)–ಪ್ರಗತಿಪರ ಸಂಘಟನೆಗಳ ಒಕ್ಕೂಟ, ಗಾಂಧಿ ವಿಚಾರ ಪರಿಷತ್, ಮೈಸೂರು ವಿವಿ ವಿದ್ಯಾರ್ಥಿಗಳು ಹಾಗೂ ಸಂಶೋಧಕರ ಆಶ್ರಯದಲ್ಲಿ ನ.21 ರಂದು ಬೆಳಗ್ಗೆ 10ಕ್ಕೆ ಮಾನಸ ಗಂಗೋತ್ರಿ ವಿಜ್ಞಾನ ಭವನದಲ್ಲಿ ಪ.ಮಲ್ಲೇಶ್ ವಿರಚಿತ 'ಗಾಂಧೀ ಪ್ರಣೀತ ಧರ್ಮದರ್ಶಿತ್ವ' ಮತ್ತು 'ಬುದ್ಧ ನಾಗಾರ್ಜುನರ ಶೂನ್ಯಯಾನ' ಪುಸ್ತಕಗಳ ಇಂಗ್ಲಿಷ್ ಅನುವಾದಿತ ಕೃತಿಗಳ ಬಿಡುಗಡೆ ಹಾಗೂ ಸಮಕಾಲೀನ ವಿಷಯ ಕುರಿತ ವಿಚಾರ ಸಂಕಿರಣ ಆಯೋಜಿಸಲಾಗಿದೆ ಎಂದು ರಂಗಾಯಣದ ಮಾಜಿ ನಿರ್ದೇಶಕ ಸಿ.ಬಸವಲಿಂಗಯ್ಯ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು 10.30ಕ್ಕೆ 'ಸಮಕಾಲೀನ ಸಂಘರ್ಷ–ಸವಾಲು' ಕುರಿತ ಗೋಷ್ಠಿಯನ್ನು ಸಾಮಾಜಿಕ ಕಾರ್ಯಕರ್ತ ಭನ್ವರ್ ಮೇಘವಂಶಿ ಉದ್ಘಾಟಿಸಲಿದ್ದಾರೆ. ರಂಗಾಯಣ ಮಾಜಿ ನಿರ್ದೇಶಕ ಡಾ.ಹೆಚ್.ಜನಾರ್ಧನ್ (ಜನ್ನಿ), ಮಾನವ ಹಕ್ಕುಗಳ ಹೋರಾಟಗಾರರಾದ ಶ್ವೇತಾ ಭಟ್, ಪ್ರಗತಿಪರ ಚಿಂತಕಿ ಸವಿತಾ ಪ.ಮಲ್ಲೇಶ್, ಚಲನಚಿತ್ರ ನಿರ್ದೇಶಕ ಎಂ.ಡಿ.ಸಿದ್ದಿಕ್ ಮತ್ತಿತರರು ಭಾಗವಹಿಸಲಿದ್ದಾರೆ. ನಂತರ 11.45ಕ್ಕೆ 'ಸಮ ಸಮಾಜಕ್ಕಿರುವ ಅಡೆತಡೆಗಳು' ಕುರಿತ ಗೋಷ್ಠಿ, 12.30ಕ್ಕೆ 'ಹೊಸ ತಲೆಮಾರಿನ ಆತಂಕಗಳು' ಗೋಷ್ಠಿ, ಮಧ್ಯಾಹ್ನ 2.30ಕ್ಕೆ 'ಚುನಾವಣೆಯಿಂದ ಬದಲಾವಣೆ' ಗೋಷ್ಠಿ, ಸಂಜೆ 4ಗಂಟೆಗೆ 'ಸಮಕಾಲೀನ ಸಂಘರ್ಷ' ಕುರಿತ ಗೋಷ್ಠಿಗಳು ನಡೆಯಲಿವೆ ಎಂದು ತಿಳಿಸಿದರು.

ಸಂಜೆ 6ಗಂಟೆಗೆ 'ಗಾಂಧೀ ಪ್ರಣೀತ ಧರ್ಮದರ್ಶಿತ್ವ' ಮತ್ತು 'ಬುದ್ಧ ನಾಗಾರ್ಜುನರ ಶೂನ್ಯಯಾನ' ಕೃತಿಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಬಿಡುಗಡೆಗೊಳಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಭಾಪತಿ ಡಾ.ಯು.ಟಿ.ಖಾದರ್, ಶಾಸಕ ಬಿ.ಆರ್.ಪಾಟೀಲ್, ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಆಗಮಿಸಲಿದ್ದಾರೆ. ಕೃತಿ ಕುರಿತು ಸಾಹಿತಿಗಳಾದ ಡಾ.ನಟರಾಜ್ ಹುಳಿಯಾರ್, ಡಾ.ಮೂಡ್ನಾಕೂಡು ಚಿನ್ನಸ್ವಾಮಿ ಮಾತನಾಡಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಜಗನ್ನಾಥ್, ಅಭಿರುಚಿ ಗಣೇಶ್, ಸವಿತಾ ಪ.ಮಲ್ಲೇಶ್, ಎ.ಎಸ್.ವೇಣುಗೋಪಾಲ್, ಗೋಪಾಲ್ ಉಪಸ್ಥಿತರಿದ್ದರು.

ಮೈಸೂರಲ್ಲಿ ಆತ್ಮಹತ್ಯೆ ಮಾಡಿಕೊಂಡ ಮಹಿಳೆ ಶವ ಸಾಗಿಸುತ್ತಿದ್ದ ಪ್ರಕರಣಕ್ಕೆ ಟ್ವಿಸ್ಟ್

ಕೊಡಗಿನ ದಟ್ಟ ಕಾಡಿನಲ್ಲಿ ಎಸೆದು ಕೈ ತೊಳೆದುಕೊಳ್ಳಲು ಪತಿ ಇತರರ ಪ್ಲಾನ್



ನನ್ನಿದೇವಿ



ಪೊಲೀಸರ ವಶದಲ್ಲಿರುವ ಆರೋಪಿಗಳು

ಮೈಸೂರು, ನ. 18 (ಆರ್‌ಕೆ)– ಮೈಸೂರಿನಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡ ಮಹಿಳೆ ಮೃತದೇಹವನ್ನು ಕೊಡಗಿನ ದಟ್ಟ ಅರಣ್ಯದಲ್ಲಿ ಬಿಸಾಡಿ, ಇಡೀ ಪ್ರಕರಣ ಮುಚ್ಚಿ ಹಾಕಲು ಸ್ನೇಹಿತರಿಬ್ಬರೊಂದಿಗೆ ಕಾರಿನಲ್ಲಿ ಪತಿ ಕೊಂಡೊಯ್ಯುತ್ತಿದ್ದ ಎಂಬುದು ಪೊಲೀಸ್ ತನಿಖೆಯಲ್ಲಿ ಬಹಿರಂಗವಾಗಿದೆ.

ಮೈಸೂರಿನಿಂದ ಮಡಿಕೇರಿಗೆ ಕುಶಾಲನಗರ ಮಾರ್ಗ ಹೋಗುವ ಬದಲು ವೀರಾಜಪೇಟೆ ಮಾರ್ಗವಾಗಿ ಹೋಗುತ್ತಿದ್ದಾಗ ಹರಿಯಾಣ ನೋಂದಣಿ ಮಾರುತಿ ಅಲ್ಟೋ ಕಾರ (ಎಚ್‌ಆರ್–26, ಸಿಇ–9273) ಅನ್ನು ಮಾಲ್ದಾರೆ–ಲಿಂಗಾಪುರ ಚೆಕ್ ಪೋಸ್ಟ್ ಬಳಿ ಶನಿವಾರ ಮಧ್ಯರಾತ್ರಿ ಅಧಿಕಾರಿಗಳು ತಪಾಸಣೆ ಮಾಡಿದಾಗ, ಕಾರಿನಲ್ಲಿ ಮಹಿಳೆ ಮೃತದೇಹ ಪತ್ತೆಯಾಗಿತ್ತು. ಇದರೊಂದಿಗೆ ಪತಿಯ ಪ್ಲಾನ್ ಉಲ್ಟಾ ಹೊಡೆದಿತ್ತು.

ಮೂಲತಃ ಹರಿಯಾಣ ರಾಜ್ಯದ ಸಿರ್ಸ ಜಿಲ್ಲೆಯ ಭಾಂಬೂ ಗ್ರಾಮದವರಾದ ಮೈಸೂರಿನ ಸೂರ್ಯ ಬೇಕರಿ ಬಳಿ ಕುಂಬಾರ ಕೊಪ್ಪಲು ನಿವಾಸಿ ನನ್ನಿದೇವಿ (45) ಕಳೆದ ಶುಕ್ರವಾರ ರಾತ್ರಿ 8 ಗಂಟೆ ಸುಮಾರಿಗೆ ನೇಣು ಬಿಗಿದುಕೊಂಡಿದ್ದರು. ತಕ್ಷಣ ಪತಿ ರಾಕೇಶ್ ಕುಮಾರ್ ಆಕೆಯ ರಕ್ಷಣೆಗೆ ಮುಂದಾದ ಮನೆ ಮಾಲೀಕ ಭಜನ್ ಲಾಲ್ ಅವರ ಕಾರು ಪಡೆದು ಆಸ್ಪತ್ರೆಗೆ ಕರೆದೊಯ್ಯುವಾಗ ಮಾರ್ಗ ಮಧ್ಯೆಯೇ ಅಸುನೀಗಿರುವುದನ್ನು ವೈದ್ಯರು ದೃಢಪಡಿಸಿದ್ದರಿಂದ ಪೊಲೀಸರಿಗೆ ಹೆದರಿ ರಾಕೇಶ್ ಕುಮಾರ್ ತನ್ನ ಸ್ನೇಹಿತರಾದ ವಿಕಾಸ್ ಮತ್ತು ಸತ್ವೀರ್ ನೆರವಿನೊಂದಿಗೆ ಪತ್ನಿಯ ಮೃತದೇಹವನ್ನು ಮಡಿಕೇರಿಯತ್ತ ಕೊಂಡೊಯ್ಯುತ್ತಿದ್ದ. ಈಗ ಆ ಮೂವರೂ ಪೊಲೀಸರ ವಶದಲ್ಲಿದ್ದಾರೆ.

ಆತ್ಮಹತ್ಯೆ: ಪ್ರಕರಣ ದಾಖಲಿಸಿಕೊಂಡಿರುವ ಸಿದ್ದಾಪುರ ಠಾಣೆ ಸಬ್‌ಇನ್ಸ್‌ಪೆಕ್ಟರ್ ಮಂಜುನಾಥ ಅವರು ಮೈಸೂರಿಗೆ ಬಂದು ಮಹಜರು ನಡೆಸಿದಾಗ ನನ್ನಿದೇವಿ ನೇಣು ಬಿಗಿದುಕೊಂಡಿದ್ದು, ಮನೆ ಮಾಲೀಕ ಭಜನ್ ಲಾಲ್ ಅವರಿಗೆ ಮಾಹಿತಿ ನೀಡಿ, ಆಸ್ಪತ್ರೆ ಕರೆದೊಯ್ಯುತ್ತೇನೆಂದು ಅವರ ಕಾರನ್ನು ಪಡೆದಿದ್ದಾನೆ. ಒಂದು ವೇಳೆ ಆಕೆ ಮೃತಪಟ್ಟಿದ್ದರೆ ಪೊಲೀಸರಿಗೆ ವಿಷಯ ತಿಳಿಸಿ ಕಾನೂನು ಪ್ರಕ್ರಿಯೆ ನಂತರ ಅಂತ್ಯಕ್ರಿಯೆ ನಡೆಸಬೇಕೆಂದು ಮನೆ ಮಾಲೀಕ ಸಲಹೆ ನೀಡಿದ್ದ. ಅಕ್ಕ–ಪಕ್ಕದವರ ವಿಚಾರಣೆ ಮಾಡಿದಾಗ ಈ ವಿಚಾರ ತಿಳಿಯಿತೆಂದು ಮಂಜುನಾಥ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.


ಮಡಿಕೇರಿ ಕಡೆಗೆ: ಆಸ್ಪತ್ರೆಗೆ ಪತ್ನಿ ಕರೆದೊಯ್ಯಲು ಮನೆ ಮಾಲೀಕನಿಂದ ಕಾರು ಪಡೆದ ರಾಕೇಶ್ ಕುಮಾರ್ ಆಕೆ ಮೃತಪಟ್ಟಿದ್ದಾಳೆಂದು ವೈದ್ಯರು ದೃಢಪಡಿಸುತ್ತಿದ್ದಂತೆ ಅದೇ ಕಾರಿನಲ್ಲಿ ಸತ್ವೀರ್ ಮತ್ತು ವಿಕಾಸ್‌ನೊಂದಿಗೆ ಮಡಿಕೇರಿ ಕಡೆಗೆ ಶುಕ್ರವಾರ ರಾತ್ರಿ ಪ್ರಯಾಣ ಬೆಳೆಸಿದ್ದಾರೆ. ಕಾರಿನ ಹಿಂಬದಿ ಆಸನದಲ್ಲಿ ಪತ್ನಿಯ ಮೃತದೇಹವನ್ನು ಅನುಮಾನ ಬಾರದಂತೆ ಇರಿಸಿಕೊಂಡು ಹೋಗುವಾಗ ಮಾಲ್ದಾರೆ–ಲಿಂಗಾಪು ಅರಣ್ಯ ಚೆಕ್ ಪೋಸ್ಟ್ ಬಳಿ ಅರಣ್ಯ ಅಧಿಕಾರಿಗಳಿಗೆ ಶನಿವಾರ ಮಧ್ಯರಾತ್ರಿ ಸಿಕ್ಕಿಬಿದ್ದರು.

ಹುಣಸೂರು–ಮಾಲ್ದಾರೆ ಮಾರ್ಗದ ದಟ್ಟ ಅರಣ್ಯ ಪ್ರದೇಶದಲ್ಲಿ ಯಾರಿಗೂ ತಿಳಿಯದಂತೆ ಮೃತದೇಹವನ್ನು ಬಿಸಾಡಿ ಬರಬೇಕೆಂಬ ಉದ್ದೇಶದಿಂದ ರಾಕೇಶ್ ಕುಮಾರ್ ಮತ್ತು ಸ್ನೇಹಿತರು ಪ್ಲಾನ್ ಮಾಡಿ, ಮಾರ್ಗ ಮಧ್ಯೆ ಮೃತದೇಹವನ್ನು ಕಾರಿನಲ್ಲೇ ಇರಿಸಿ, ರಸ್ತೆ ಪಕ್ಕದ ವೈನ್ ಸ್ಟೋರ್‌ವೊಂದರಲ್ಲಿ ಮದ್ಯ ಖರೀದಿಸಿ ಕಂಠ ಪೂರ್ತಿ ಕುಡಿದಿದ್ದಾರೆ. ಮದ್ಯದ ಅಮಲಿನಲ್ಲಿದ್ದಾಗ ಚೆಕ್ ಪೋಸ್ಟ್‌ನಲ್ಲಿ ಮಧ್ಯ ರಾತ್ರಿ ಸುಮಾರು 1.30 ಗಂಟೆ ವೇಳೆಗೆ ಸಿಕ್ಕಿಬಿದ್ದರು.

ಎರಡನೇ ಪತಿ: ಹರಿಯಾಣದಲ್ಲಿ ಪತಿ ರಾಮ್ ಕುಮಾರನೊಂದಿಗೆ ಸಾಂಸಾರಿಕ ಜೀವನ ನಡೆಸುತ್ತಿದ್ದ ನನ್ನಿದೇವಿಯನ್ನು ಒಲಿಸಿಕೊಂಡು ಆಕೆಯನ್ನು ಕಳೆದ ಆರು ತಿಂಗಳ ಹಿಂದೆ ಮೈಸೂರಿಗೆ ಕರೆ ತಂದು ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದ ರಾಕೇಶ್ ಕುಮಾರ್ ಮರಗೆಲಸ ಮಾಡಿಕೊಂಡಿದ್ದ. ಮನೆ ಮಾಲೀಕ ಭಜನ್ ಲಾಲ್ ಅವರು ಮಾಡುತ್ತಿದ್ದ ಗುತ್ತಿಗೆ ಕಾಮಗಾರಿಗಳಲ್ಲೂ ಆತ ನೆರವಾಗುತ್ತಿದ್ದರಿಂದ, ಅವನಿಗೆ ಕಾರು ಕೊಟ್ಟು ಸಹಾಯ ಮಾಡಿದ್ದನೆಂಬುದು ಪೊಲೀಸ್ ತನಿಖೆಯಿಂದ ತಿಳಿದು ಬಂದಿದೆ.

ಯುಡಿಆರ್ ರೀತ್ಯಾ ಪ್ರಕರಣ ದಾಖಲಿಸಿಕೊಂಡಿರುವ ಸಿದ್ದಾಪುರ ಪೊಲೀಸರು, ನನ್ನಿದೇವಿ ಮೃತದೇಹವನ್ನು ಮಡಿಕೇರಿ ಜಿಲ್ಲಾಸ್ಪತ್ರೆಯ ಶವಾಗಾರದಲ್ಲಿ ಇರಿಸಲಾಗಿದ್ದು, ಹರಿಯಾಣದಿಂದ ಆಕೆಯ ಸಂಬಂಧಿಕರು ಬಾರದಿದ್ದಲ್ಲಿ ಅವರ ಸಮ್ಮತಿ ಪತ್ರ ಪಡೆದು ಇಂದು ಅಥವಾ ನಾಳೆ (ನ. 19) ಮರಣೋತ್ತರ ಪರೀಕ್ಷೆ ನಡೆಸಿದ ನಂತರ ಅಂತ್ಯ ಕ್ರಿಯೆಗೆ ವ್ಯವಸ್ಥೆ ಮಾಡಲಾಗುವುದು. ಸದ್ಯ ಪತಿ ರಾಕೇಶ್ ಕುಮಾರ್ ಹಾಗೂ ಸ್ನೇಹಿತರಿಬ್ಬರು ನಮ್ಮ ವಶದಲ್ಲಿದ್ದಾರೆಂದು ಸಬ್ ಇನ್ಸ್‌ಪೆಕ್ಟರ್ ಮಂಜುನಾಥ ತಿಳಿಸಿದ್ದಾರೆ.

ಮಾಜಿ ಶಾಸಕ ಎಲ್.ನಾಗೇಂದ್ರರಿಗೆ ಸನ್ಮಾನ...



ಪಡುವಾರಹಳ್ಳಿಯ ಮಲ್ಲೆ ಮಹದೇಶ್ವರ ದೇವಸ್ಥಾನದಲ್ಲಿ ಕಡೇ ಕಾರ್ತಿಕ ಮಾಸದ ವಿಶೇಷ ಪೂಜೆಯಲ್ಲಿ ಪಾಲ್ಗೊಂಡಿದ್ದ ನಗರ ಬಿಜೆಪಿ ಅಧ್ಯಕ್ಷರೂ ಆದ ಮಾಜಿ ಶಾಸಕ ಎಲ್.ನಾಗೇಂದ್ರ ಅವರನ್ನು ಗ್ರಾಮದ ಯಜಮಾನರು ಸನ್ಮಾನಿಸಿದರು.

ಅಭಿನಂದನೆ...



ಶ್ರೀ ಕನಕದಾಸ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿಯ 2025–30ನೇ ಸಾಲಿನ ನಿರ್ದೇಶಕರ ಚುನಾವಣೆಯಲ್ಲಿ ಜಯಶೀಲರಾದ ನೂತನ ನಿರ್ದೇಶಕರನ್ನು ಅಭಿನಂದಿಸಲಾಯಿತು. ಮಾಜಿ ಕಾರ್ಪೋರೇಟರ್ ಲೋಕೇಶ್ ಪಿಯಾ, ಬಿಜೆಪಿ ಮುಖಂಡರಾದ ಬೈರತಿ ಲಿಂಗರಾಜು, ವಾಲೆ ರವಿ, ವಿಜಯ್‌ನಾಯಕ್ ಇದ್ದರು.


ತಿಂಗಳಲ್ಲಿ 15 ಹುಲಿ ಸುರಕ್ಷಿತ ಸೆರೆ!

ಮೈಸೂರು,ನ.18(ಎಂಟಿವೈ)– ಮೂರು ಮರಿಗಳೊಂದಿಗೆ ಇಂದು ಸೆರೆ ಹಿಡಿದ ಹುಲಿ ಸೇರಿದಂತೆ ತಿಂಗಳ ಅವಧಿಯಲ್ಲಿ 15 ಹುಲಿಗಳನ್ನು ಸುರಕ್ಷಿತವಾಗಿ ಸೆರೆ ಹಿಡಿಯಲಾಗಿದೆ. ಸರಗೂರು ತಾಲೂಕಿನ ಬಡಗಲಪುರ, ಮುಳ್ಳೂರು, ಬೆಣ್ಣೆಗೆರೆ, ಕೂಡಗಿ–ಕುರ್ಣೆಗಾಲ, ಕೂಡಗಿ, ಹಳೆ ಹೆಗ್ಗುಡಿಲು ಸೇರಿದಂತೆ ವಿವಿಧ ಕಾಡಂಚಿನ ಗ್ರಾಮಗಳಲ್ಲಿ ಉಪಟಳ ನೀಡುತ್ತಿದ್ದ ಹುಲಿಗಳನ್ನು ಸೆರೆ ಹಿಡಿಯುವಲ್ಲಿ ಅರಣ್ಯ ಇಲಾಖೆ ಯಶಸ್ವಿಯಾಗಿದೆ.

ದಾಳಿ ನಡೆಸಿದ್ದ ಹುಲಿಗಳು: ಸರಗೂರು ತಾಲೂಕಿನ ಬಡಗಲಪುರ ಗ್ರಾಮದ ಬಳಿ ಅ.16ರಂದು ದಾಳಿ ನಡೆಸಿ ಮಹದೇವೇಗೌಡ(48) ಎಂಬುವರ ಮೇಲೆ ಹುಲಿ ದಾಳಿ ನಡೆಸಿ ಗಂಭೀರವಾಗಿ ಗಾಯಗೊಳಿಸಿದ್ದ 6 ವರ್ಷದ ಹೆಣ್ಣು ಹುಲಿ, ಅ.31ರಂದು ಕೂಡಗಿ ಗ್ರಾಮದ ಬಳಿ ದೊಡ್ಡನಿಂಗಯ್ಯ ಹಾಗೂ ನ.7ರಂದು ಹಳೆ ಹೆಗ್ಗುಡಿಲು ಗ್ರಾಮದ ಬಳಿ ದಂಡನಾಯಕ ಎಂಬುವರ ಮೇಲೆ ದಾಳಿ ಮಾಡಿ ಹತ್ಯೆಗೈದಿದ್ದ 12–13 ವರ್ಷದ ಗಂಡು ಹುಲಿಯನ್ನು ಸೆರೆ ಹಿಡಿಯಲಾಗಿತ್ತು. ಅ.26ರಂದು ಮುಳ್ಳೂರು ಸಮೀಪದ ಬೆಣ್ಣೆಗೆರೆ ಬಳಿ ರಾಜಶೇಖರ್ ಅವರ ಮೇಲೆ ದಾಳಿ ನಡೆಸಿ ಕೊಂದಿದ್ದ ಹುಲಿಯನ್ನು ಮೂರು ಮರಿಗಳೊಂದಿಗೆ ಇಂದು ಸೆರೆ ಹಿಡಿಯಲಾಗಿದೆ.

ರೋಚಕ ಕಾರ್ಯಾಚರಣೆ: ಮುಳ್ಳೂರು–ಬೆಣ್ಣೆಗೆರೆ ಬಳಿ ಇಂದು ನಡೆದ ಹುಲಿ ಸೆರೆ ಕಾರ್ಯಾಚರಣೆ ರೋಚಕವಾಗಿತ್ತು ರಾತ್ರಿಯಿಡೀ ಕಣ್ಗಾವಲಿಟ್ಟು ಮುಂಜಾನೆ ವೇಳೆಗೆ ತಾಯಿ ಹುಲಿ ಸೆರೆ ಹಿಡಿದು, ಬೆಳಗ್ಗೆ 9.30ರ ವೇಳೆಗೆ ಮರಿಗಳನ್ನು ರಕ್ಷಿಸಲಾಗಿದೆ.

ಬೆಣ್ಣೆಗೆರೆಯ ರಾಜಶೇಖರ್ ಮೇಲೆ ದಾಳಿ ಮಾಡಿದ್ದ ಸ್ಥಳದ ಕೆಲವೇ ಮೀಟರ್ ದೂರದಲ್ಲೇ ತಾಯಿ ಹುಲಿ ತನ್ನ ಮರಿಗಳೊಂದಿಗೆ ಬೀಡು ಬಿಟ್ಟಿತ್ತು. ಡ್ರೋನ್ ಕ್ಯಾಮರಾಗೆ ಕೆಲವೊಮ್ಮೆ ಕಂಡರೂ ದಟ್ಟವಾದ ಪೊದೆಯೊಳಗೆ ನುಸುಳಿ ಭೂಗತವಾಗುತ್ತಿತ್ತು. ಕಳೆದ ರಾತ್ರಿ 7 ಗಂಟೆಗೆ ಮರಿಯನ್ನು ಬಿಟ್ಟು ಹೊರಗೆ ಬಂದ ತಾಯಿ ಹುಲಿ ಬೇಟೆಗಾಗಿ ಹವಣಿಸುತ್ತಿದ್ದಾಗ ಕೂಂಬಿಂಗ್ ತಂಡ ಸಾಕಾನೆಗಳಾದ ಮಹೇಂದ್ರ, ಭೀಮ, ಪ್ರಶಾಂತ, ಸುಗ್ರೀವ ಆನೆಗಳೊಂದಿಗೆ ಹಿಂಬಾಲಿಸಿತ್ತು. ಸುಮಾರು ಆರು ಕಿ.ಮಿ ದೂರ ಸಂಚರಿಸಿದ ಹುಲಿ, ಮಾರ್ಗ ಮಧ್ಯೆ ಬೇಟೆಯಾಡುವ ವಿಫಲ ಯತ್ನ ನಡೆಸಿ, ವಿಶ್ರಾಂತಿ ಪಡೆಯುತ್ತಿತ್ತು. ಮುಂಜಾನೆ 5 ಗಂಟೆಗೆ ಸೆರೆ ಕಾರ್ಯಾಚರಣೆ ಚುರುಕುಗೊಳಿಸಿದ ಅರಣ್ಯ ಇಲಾಖೆ ಸಿಬ್ಬಂದಿ, ಹುಲಿಯನ್ನು ಸುತ್ತುವರೆದು ಅರವಳಿಕೆ ಮದ್ದು ನೀಡಿ ಯಶಸ್ವಿಯಾಗಿ ಸೆರೆ ಹಿಡಿದಿದ್ದಾರೆ.



ಫೈಲ್ ಚಿತ್ರ

ಅರವಳಿಕೆ ಕೋವಿ ಹಿಡಿದಿದ್ದ ಸಿಎಫ್: ರಾತ್ರಿಯಿಡೀ ಹುಲಿ ಮೇಲೆ ನಿಗಾ ಇಟ್ಟಿದ್ದ ತಂಡದೊಂದಿಗೆ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಎಸ್.ಪ್ರಭಾಕರನ್ ಅವರು ಖುದ್ದಾಗಿ ಕಾರ್ಯಾಚರಣೆ ನೇತೃತ್ವ ವಹಿಸಿದ್ದರು. ಮಹೇಂದ್ರ ಆನೆ ಮೇಲೆ ಅರವಳಿಕೆ ಚುಚ್ಚುಮದ್ದು ನೀಡುವ ಕೋವಿ ಹಿಡಿದು ಕಾದಿದ್ದರು. ಕಡೆಗೆ ಭೀಮ ಆನೆ ಮೇಲಿದ್ದ ಪಶುವೈದ್ಯ ಡಾ.ವಾಸಿಂ ಮಿರ್ಜಾ, ಹುಲಿಗೆ ಅರವಳಿಕೆ ನೀಡುವಲ್ಲಿ ಯಶಸ್ವಿಯಾದರು.

ಮಲ್ಲನಮೂಲೆ ಮಠದ ಶ್ರೀಗಳಿಗೆ ಶ್ರದ್ಧಾಂಜಲಿ



ಇತ್ತೀಚೆಗೆ ನಿಧನರಾದ ಮಲ್ಲನಮೂಲೆ ಮಠದ ಶ್ರೀ ಚನ್ನಬಸವ ಸ್ವಾಮೀಜಿಗೆ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಮೈಸೂರು,ನ.18(ಎಸ್‌ಪಿಎನ್)– ಇತ್ತೀಚೆಗೆ ನಿಧನರಾದ ಮಲ್ಲನಮೂಲೆ ಮಠದ ಶ್ರೀ ಚನ್ನಬಸವ ಸ್ವಾಮೀಜಿ ಅವರಿಗೆ ಮೈಸೂರು ಅಗ್ರಹಾರದ ಶಿವಸನ್ನಿಧಿ ಗೆಳೆಯ ಬಳಗದ ಕಚೇರಿ ಆವರಣದಲ್ಲಿ ಗವಿ ಸಿದ್ದೇಶ್ವರ ದೇವಾಲಯದ ಟ್ರಸ್ಟ್ ಹಾಗೂ ಶಿವ ಸನ್ನಿಧಿ ಗೆಳೆಯರ ಸಹಯೋಗದೊಂದಿಗೆ ಏರ್ಪಡಿಸಿದ್ದ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಶ್ರೀಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ, ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಲಿಂಗಾಯತ ಮುಖಂಡ ಕಲ್ಮಳ್ಳಿ ನಟರಾಜು ನುಡಿನಮನ ಸಲ್ಲಿಸುತ್ತಾ, ಮೈಸೂರು–ಚಾಮರಾಜನಗರ ಭಾಗದ ಗ್ರಾಮೀಣ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವಲ್ಲಿ ಶ್ರೀಗಳ ಪಾತ್ರ ದೊಡ್ಡದು. ಕಪಿಲಾ ನದಿ ತೀರದಲ್ಲಿರುವ ಮಲ್ಲನಮೂಲೆ ಮಠಕ್ಕೆ ಹಲವು ವರ್ಷಗಳ ಇತಿಹಾಸವಿದೆ. ಈ ಪೀಠದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುವ ಚನ್ನಬಸವ ಸ್ವಾಮೀಜಿ ಅವರ ಸಾಧನೆ ಅವಿಸ್ಮರಣೀಯ ಎಂದರು.

ಮರಿಮಲ್ಲಪ್ಪ ಪ್ರೌಢಶಾಲೆಯ ಸಹಶಿಕ್ಷಕ ಶಿವಕುಮಾರ್ ಆರ್.ಬೆಳಚವಾಡಿ ನುಡಿನಮನ ಸಲ್ಲಿಸುತ್ತಾ, ಶರಣರ ವಾಣಿಯಂತೆ ಬದುಕಿನುದ್ದಕ್ಕೂ ನೊಂದವರ, ಅಸಹಾಯಕರ ನೋವಿಗೆ ದನಿಯಾಗಿದ್ದವರು ಶ್ರೀ ಚನ್ನಬಸವ ಸ್ವಾಮೀಜಿಯವರು. ಇವರ ನಿಧನದಿಂದ ಮೈಸೂರು ಭಾಗದ ಶರಣ ಅನುಯಾಯಿಗಳಿಗೆ ತುಂಬಲಾರದ ನಷ್ಟವಾಗಿದೆ ಎಂದರು.

ಈ ವೇಳೆ ಕಾರ್ಯಕ್ರಮದಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾ ಘಟಕದ ನಿರ್ದೇಶಕ ಪರಮೇಶ್, ಬಸವೇಶ್ವರ ಸಹಕಾರ ಸಂಘದ ರುದ್ರಸ್ವಾಮಿ ದೇವನೂರು, ವೀರಶೈವ ಲಿಂಗಾಯತ ನೌಕರರ ಸಂಘದ ಕಾರ್ಯದರ್ಶಿ ನಂದೀಶ್, ಎಲ್‌ಐಸಿ ಅಭಿವೃದ್ಧಿ ಅಧಿಕಾರಿ ಪ್ರಭುಸ್ವಾಮಿ, ನಿವೃತ್ತ ಬ್ಯಾಂಕ್ ಅಧಿಕಾರಿ ಕೆ.ಬಸವಣ್ಣ, ಶಿಕ್ಷಕರಾದ ಮುಳ್ಳೂರು ಶಿವಕುಮಾರ್, ಗಂಗಾಧರ್, ಜಗದೀಶ್, ರೇವಣ್ಣ, ಪ್ರಕಾಶ್, ಸುತ್ತೂರು ಮಹೇಶ್, ಹಿರಿಯೂರು ವೀರಭದ್ರ ಸ್ವಾಮಿ ಸೇರಿದಂತೆ ಇತರರಿದ್ದರು.

ನ.20 'ಬಂಗಾರದ ಮನುಷ್ಯ' ನಾಟಕ ಕೃತಿ ಬಿಡುಗಡೆ

ಮೈಸೂರು,ನ.18(ಜಿಎ)–ಪತ್ರಕರ್ತ, ಲೇಖಕ ಗಣೇಶ ಅಮೀನಗಡ ಅವರ 'ಬಂಗಾರದ ಮನುಷ್ಯ' ನಾಟಕ ಕೃತಿ ಬಿಡುಗಡೆ ಹಾಗೂ ಅವರ ರಚನೆಯ 'ಕೌದಿ' ಏಕವ್ಯಕ್ತಿ ನಾಟಕದ 50ನೇ ಪ್ರದರ್ಶನವನ್ನು ನ.20ರಂದು ಸಂಜೆ 6.30 ಗಂಟೆಗೆ ನಗರದ ಕಲಾಮಂದಿರ ಆವರಣದಲ್ಲಿರುವ ಕಿರು ರಂಗಮಂದಿರದಲ್ಲಿ ಆಯೋಜಿಸಲಾಗಿದೆ ಎಂದು ಕದಂಬ ರಂಗ ವೇದಿಕೆ ಅಧ್ಯಕ್ಷ ರಾಜಶೇಖರ ಕದಂಬ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕದಂಬ ರಂಗ ವೇದಿಕೆ ಆಯೋಜಿಸಿರುವ ಈ ಕಾರ್ಯಕ್ರಮದಲ್ಲಿ ಟಿ.ಕೆ.ರಾಮರಾವ್ ಅವರ ಕಾದಂಬರಿ ಆಧರಿಸಿ 'ಬಂಗಾರದ ಮನುಷ್ಯ' ನಾಟಕವಾಗಿ ಗಣೇಶ ಅಮೀನಗಡ ರಚಿಸಿದ್ದಾರೆ. ಅಂದು ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಬಿಡುಗಡೆಗೊಳಿಸುವರು. ಕೃತಿ ಯನ್ನು ಲೇಖಕ ಡಾ.ಎನ್.ಎಂ.ಗಿರಿಜಾಪತಿ ಪರಿಚಯಿಸುವರು. ಮುಖ್ಯ ಅತಿಥಿಗಳಾಗಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಭಾಗವಹಿಸುವರು.

ಪುಸ್ತಕ ಬಿಡುಗಡೆ ನಂತರ ಕೌದಿ ನಾಟಕ ಪ್ರದರ್ಶನಗೊಳ್ಳಲಿದೆ. ಇದು ಈಗಾಗಲೇ ಉತ್ತರ ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕದಲ್ಲಿ ಯಶಸ್ವಿಯಾಗಿ ಪ್ರದರ್ಶನಗೊಂಡಿದೆ. ಮೈಸೂರಿನಲ್ಲಿ ಮೊದಲ ಬಾರಿ ಪ್ರದರ್ಶನಗೊಳ್ಳುತ್ತಿದೆ. ಒಂದು ಗಂಟೆ ಅವಧಿಯ ಈ ನಾಟಕವನ್ನು ಕಲಬುರಗಿಯ ಭಾಗ್ಯಶ್ರೀ ಪಾಳಾ ಪ್ರಸ್ತುತಪಡಿಸುವರು. ವಿನ್ಯಾಸ, ಸಂಗೀತ ಹಾಗೂ ನಿರ್ದೇಶನ ಜಗದೀಶ್ ಆರ್.ಜಾಣಿ ಅವರದು ಎಂದು ವಿವರಿಸಿದರು.

ಲೇಖಕ ಗಣೇಶ ಅಮೀನಗಡ ಮಾತನಾಡಿ, ಚಳಿಗಾಲದಲ್ಲಿ ಬೆಚ್ಚಗಿಡುವ ಹಾಗೂ ಬೇಸಿಗೆಯಲ್ಲಿ ತಂಪಾಗಿಡುವ ಕೌದಿಯ ಮಹತ್ವದ ಜೊತೆಗೆ ಕೌದಿ ಹೊಲಿಯುವವರ ಸಂಕಟ, ಸಮಸ್ಯೆ ಹಾಗೂ ಸವಾಲುಗಳ ಅನಾವರಣದ ನಾಟಕವಿದು ಎಂದರು. ಸುದ್ದಿಗೋಷ್ಠಿಯಲ್ಲಿ ರಂಗಕರ್ಮಿ ಡಿ.ತಿಪ್ಪಣ್ಣ, ಅಶ್ವಥ್ ಕದಂಬ, ಹಿರಿಯ ಲೇಖಕ ರಘುಪತಿ ತಾಮ್ಹನ್ ಕರ್ ಉಪಸ್ಥಿತರಿದ್ದರು.

ಶಕ್ತಿ ಯೋಜನೆಯ ಬಾಕಿ 44,166 ಲಕ್ಷ ರೂ. ಬಿಡುಗಡೆ

ಮೈಸೂರು, ನ.18(ಎಸ್‌ಪಿಎನ್)– ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳಿಗೆ ನವಂಬರ್–2025ರವರೆಗೆ ಬಾಕಿ ಉಳಿದಿದ್ದ ಶಕ್ತಿ ಯೋಜನೆಯ 44,166.66 ಲಕ್ಷ ಮೊತ್ತವನ್ನು ಷರತ್ತುಗಳಿಗೊಳಪಟ್ಟು ಶೇಕಡವಾರು ಅನುಪಾತದನ್ವಯ ರಾಜ್ಯ ಸರ್ಕಾರ ಸೋಮವಾರ ಬಿಡುಗಡೆಗೆ ಅನುಮತಿಸಿದೆ.

ಕರಾರಸಾ ನಿಗಮಕ್ಕೆ ಸಹಾಯಧನ ಶೀರ್ಷಿಕೆಯಡಿ 12170.17 ರೂ., ಎಸ್‌ಸಿಎಸ್‌ಪಿ ಯೋಜನೆಯ 3428.21 ರೂ, ಟಿಎಸ್‌ಪಿ ಯೋಜನೆಯ 1,542.70 ರೂ ಸೇರಿದಂತೆ ಒಟ್ಟು 17,141.08 ರೂ. ಅನುದಾನ ಬಿಡುಗಡೆಗೊಳಿಸಿದೆ ಬೆಂಮಸಾಸಂಸ್ಥೆಗೆ ಸಹಾಯಧನ ಯೋಜನೆಯಡಿ 5,371.68 ರೂ, ಎಸ್‌ಸಿಎಸ್‌ಪಿ ಯೋಜನೆಯ 1513.15 ರೂ, ಟಿಎಸ್‌ಪಿ ಯೋಜನೆಯ 680.92 ರೂ. ಸೇರಿದಂತೆ ಒಟ್ಟು 7,565.75 ರೂ ಅನುದಾನ ನೀಡಲಾಗಿದೆ. ವಾಕರಸಾಸಂಸ್ಥೆಗೆ ಸಹಾಯಧನ ಯೋಜನೆಯ 7645.16 ರೂ., ಎಸ್‌ಸಿಎಸ್‌ಪಿ ಯೋಜನೆಯ 2153.57 ರೂ., ಟಿಎಸ್‌ಪಿ ಅನುದಾನ 969.10 ರೂ ಒಟ್ಟು 10,767.83 ಅನುದಾನ ಬಿಡುಗಡೆಗೊಳಿಸಿದೆ.


ಕಕರಸಾ ನಿಗಮಕ್ಕೆ ಸಹಾಯಧನ ಯೋಜನೆಯಡಿ 6,171.32 ರೂ., ಎಸ್‌ಸಿಎಸ್‌ಪಿ ಯೋಜನೆಯ 17,38.40 ರೂ, ಟಿಎಸ್‌ಪಿ ಯೋಜನೆಯ 782.28 ರೂ, ಸೇರಿದಂತೆ ಒಟ್ಟು 8692 ಅನುದಾನ ಬಿಡುಗಡೆಗೊಂಡಿದ್ದು, ಎಸ್‌ಸಿಎಸ್‌ಪಿ ಯೋಜನೆಯ 8,833.33 ರೂ., ಟಿಎಸ್‌ಪಿಯ ಒಟ್ಟು ಮೊತ್ತ 3,975ರೂ ಅನುದಾನ ಬಳಕೆಗೆ ಸಾಮಾಜಿಕ ಮಾಧ್ಯಮದಲ್ಲಿ ವಿರೋಧ ವ್ಯಕ್ತಪಡಿಸಲಾಗಿದೆ.

ನಾಲ್ಕು ನಿಗಮದ ಸಾರಿಗೆ ಸಂಸ್ಥೆಗಳ ನವಂಬರ್–2025ರ ಮಾಹೆಯ ವಾಸ್ತವಿಕ ವೆಚ್ಚದ ಕ್ರೋಢೀಕೃತ ವಿವರಗಳನ್ನು ವಿಭಾಗವಾರು ಕೇಂದ್ರ ಸಮಿತಿಗೆ ಸಲ್ಲಿಸಬೇಕು. ಸದರಿ ಅನುದಾನದ ಬಿಡುಗಡೆಯು ಶಕ್ತಿ ಸ್ಮಾರ್ಟ್ ಕಾರ್ಡ್‌ಗಳನ್ನು ಅರ್ಹರಿಗೆ ಕೂಡಲೇ ವಿತರಿಸಬೇಕು ಎಂದು ಸಾರಿಗೆ ಇಲಾಖೆ ಅಧೀನ ಕಾರ್ಯದರ್ಶಿ ರಂಗಪ್ಪ ಕರಿಗಾರ ಆದೇಶಿಸಿದ್ದಾರೆ.

ನಾಳೆ ಉಚಿತ ಕಣ್ಣಿನ ತಪಾಸಣೆ, ಶಸ್ತ್ರಚಿಕಿತ್ಸಾ ಶಿಬಿರ

ಮೈಸೂರು,ನ.18–ಅಮೃತಾಂಶು ಟ್ರಸ್ಟ್, ಸುಯೋಗ್ ಆಸ್ಪತ್ರೆ, ಜಿಲ್ಲಾ ಅಂಧತ್ವ ನಿಯಂತ್ರಣ ಸಂಸ್ಥೆ, ಮೈಸೂರು ಜಿಲ್ಲಾ ಸಂಚಾರಿ ನೇತ್ರ ತಪಾಸಣಾ ಘಟಕ ಮತ್ತು ಕೆ.ಆರ್.ಆಸ್ಪತ್ರೆ ಸಂಯುಕ್ತಾಶ್ರಯದಲ್ಲಿ ನ.20ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 1ರವರೆಗೆ 2767, ಪಾಂಚಜನ್ಯ, 5ನೇ ಮುಖ್ಯರಸ್ತೆ, ಚಾಮುಂಡಿಪುರಂನಲ್ಲಿ ಉಚಿತ ಕಣ್ಣಿನ ತಪಾಸಣೆ, ಶಸ್ತ್ರಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಶಿಬಿರದಲ್ಲಿ ಕಣ್ಣಿನ ಪೊರೆ, ಹತ್ತಿರ ಮತ್ತು ದೂರದೃಷ್ಟಿ, ಗ್ಲೂಕೋಮಾ, ವಾರೆಕಣ್ಣು, ನೀರು ಸೋರುವಿಕೆ, ರಾತ್ರಿ ಕುರುಡುತನ ಸಮಸ್ಯೆಗಳನ್ನು ಪರೀಕ್ಷಿಸಲಾಗುವುದು. ಹೆಚ್ಚಿನ ಮಾಹಿತಿಗೆ ಮೊ. 9945270646, 974264110 ಸಂಪರ್ಕಿಸಬಹುದು.

ಡಿವೈಎಸ್‌ಪಿ ಶ್ರೀಕಾಂತ್‌ಗೆ ಸನ್ಮಾನ...



ಮೈಸೂರು ಜಿಲ್ಲಾ ಪೊಲೀಸ್ ಸಿಇಎನ್ ಕ್ರೈಂ ಪೊಲೀಸ್ ಠಾಣೆಗೆ ಡಿವೈಎಸ್‌ಪಿ ಆಗಿ ಅಧಿಕಾರ ವಹಿಸಿಕೊಂಡ ಆರ್.ಶ್ರೀಕಾಂತ್ ಅವರಿಗೆ ಮಂಜುನಾಯಕ ಸ್ನೇಹ ಬಳಗದ ವತಿಯಿಂದ ಸನ್ಮಾನಿಸಲಾಯಿತು. ಈ ವೇಳೆ ಮಂಜುನಾಯಕ, ರವಿ, ಗೋಪಾಲ್ ರಮ್ಮನಹಳ್ಳಿ, ಬಾಬು, ಪರುಶುರಾಮ ಕುಕ್ಕರಹಳ್ಳಿ, ರವಿಕುಮಾರ್ ಇನ್ನಿತರರಿದ್ದರು.

ನ.21, ಮೈಸೂರಲ್ಲಿ ಉದ್ಯೋಗ ಮೇಳ

ಮೈಸೂರು, ನ. 18–ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಮಂಡ್ಯ ಮತ್ತು ಜೆ.ಕೆ. ಟೈರ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಸಹಯೋಗದಲ್ಲಿ ನ.21ರಂದು ಬೆಳಗ್ಗೆ 10 ಗಂಟೆಗೆ ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿರುವ ಜೆ.ಕೆ.ಟೈರ್ಸ್ ಅಂಡ್ ಇಂಡಸ್ಟ್ರೀಸ್‌ನಲ್ಲಿ ಉದ್ಯೋಗ ಮೇಳ ಹಮ್ಮಿಕೊಳ್ಳಲಾಗಿದೆ. ಡಿಪ್ಲೋಮಾ (ಮೆಕ್ಯಾನಿಕಲ್, ಆಟೋಮೊಬೈಲ್, ಮೆಕಟ್ರಾನಿಕ್ಸ್, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್) ಪಾಸಾದ ಪುರುಷ, ಮಹಿಳಾ ಅಭ್ಯರ್ಥಿಗಳು ನೇರ ಸಂದರ್ಶನದಲ್ಲಿ ಭಾಗವಹಿಸಿ ಇದರ ಪ್ರಯೋಜನ ಪಡೆದುಕೊಳ್ಳಬಹುದು. ಮಾಹಿತಿಗೆ ದೂ. 08232–295124, 9739636864 ಸಂಪರ್ಕಿಸಬಹುದು.

ದಲಿತ, ಆದಿವಾಸಿಗಳು, ಮಹಿಳೆಯರು, ಅಲ್ಪಸಂಖ್ಯಾತರ ಮೇಲಿನ ದೌರ್ಜನ್ಯ ಖಂಡಿಸಿ

ಮೈಸೂರಲ್ಲಿ ಭಾರತ ಕಮ್ಯೂನಿಸ್ಟ್ ಪಕ್ಷದಿಂದ ಪ್ರತಿಭಟನೆ

ಮೈಸೂರು,ನ.18(ಜಿಎ)–ದೇಶದಲ್ಲಿ ದಲಿತ, ಆದಿವಾಸಿಗಳು, ಮಹಿಳೆಯರು, ಅಲ್ಪಸಂಖ್ಯಾತರ ಮೇಲಾಗುತ್ತಿರುವ ದೌರ್ಜನ್ಯ ಖಂಡಿಸಿ ಭಾರತ ಕಮ್ಯೂನಿಸ್ಟ್ ಪಕ್ಷದಿಂದ ಪುರಭವನ ಮುಂಭಾಗದ ಅಂಬೇಡ್ಕರ್ ಪ್ರತಿಮೆ ಬಳಿ ಪ್ರತಿಭಟನೆ ನಡೆಸಲಾಯಿತು.

ಭಾರತದ ಇತಿಹಾಸದಲ್ಲಿ ಶತ ಶತಮಾನಗಳಿಂದಲೂ ದಬ್ಬಾಳಿಕೆ, ಅಸ್ಪೃಶ್ಯತೆ ಮತ್ತು ಶೋಷಣೆಗಳಿಗೆ ಬಲಿಯಾದ ದಲಿತ, ಆದಿವಾಸಿ ಮತ್ತು ಮಹಿಳಾ ಸಮುದಾಯಗಳು ದೌರ್ಜನ್ಯಗಳಿಂದ ಬಿಡುಗಡೆಯಾಗಿಲ್ಲ. ಬದಲಿಗೆ ಇಂದಿಗೂ ಅವ್ಯಾಹತವಾಗಿ ಮುಂದುವರೆಯುತ್ತಿವೆ. ಸನಾತನ ಸಾಮಾಜಿಕ ವ್ಯವಸ್ಥೆ ಮನು ಸ್ಮೃತಿಯ ಆಧಾರದಲ್ಲಿ ವರ್ಣಾಶ್ರಮ ಪದ್ಧತಿಯನ್ನು ಸ್ಥಿರಗೊಳಿಸಿ ಮನುಷ್ಯರನ್ನು ಶ್ರೇಷ್ಠ ಮತ್ತು ಕನಿಷ್ಠ ಎಂದು ವಿಭಜಿಸಿದೆ. ಅದೇ ಪುರೋಹಿತಶಾಹಿ ವ್ಯವಸ್ಥೆ ಭಾರತೀಯ ಸಮಾಜವನ್ನು ಶ್ರೇಣೀಕರಿಸುತ್ತ ಜಾತಿ, ಉಪಜಾತಿಗಳೆಂದು ವಿಂಗಡಿಸಿ ದಲಿತ ಸಮುದಾಯದಿಂದ ಮಾನವ ಹಕ್ಕುಗಳನ್ನು ಕಸಿದುಕೊಂಡು ಪ್ರಾಣಿಗಿಂತಲೂ ಕಡೆಯಾಗಿ ನಡೆಸಿಕೊಂಡಿವೆ ಎಂದು ಪ್ರತಿಭಟನಕಾರರು ಕಿಡಿಕಾರಿದರು.

ಶೋಷಣೆಗಳು, ದೌರ್ಜನ್ಯಗಳು, ದಬ್ಬಾಳಿಕೆಗಳು ನಿಲ್ಲುವ ಲಕ್ಷಣಗಳೇ ಗೋಚರಿಸುತ್ತಿಲ್ಲ. ಅದರ ಬದಲಾಗಿ ಹಿಂಸೆಗಳು ದಿನೇ ದಿನೇ ಹೆಚ್ಚಾಗುತ್ತಿರುವುದು ಖಂಡನೀಯ. ಜಾತಿ ತಾರತಮ್ಯವಲ್ಲದೆ, ನಮ್ಮ ನೆಲ ಮತೀಯ ಮೂಲಭೂತವಾದಕ್ಕೂ ತುತ್ತಾಗಿದ್ದು ಕೋಮುಗಲಭೆಗಳು ಸಾಕಷ್ಟು ನೆತ್ತರು ಹರಿಯುವುದಕ್ಕೆ ಕಾರಣವಾಗಿವೆ. ಇಂದಿಗೂ ಅಲ್ಪಸಂಖ್ಯಾತ ಮುಸ್ಲಿಂ ಸಮುದಾಯ ಪ್ರತಿಕ್ಷಣವೂ ಹಿಂಸಾಚಾರ, ಗುಂಪುಹತ್ಯೆ, ನರಮೇಧ, ತಾರತಮ್ಯ, ಮಾನವ ಹಕ್ಕುಗಳಿಂದ ವಂಚಿತರಾಗುವುದು, ಮುಂತಾದ ಜನಾಂಗೀಯ ಕೌರ್ಯಕ್ಕೆ ಬಲಿಯಾಗುತ್ತಿದೆ. ಭಾರತೀಯರ ಮನಸ್ಥಿತಿಗೆ ಮನುಸ್ಮೃತಿಯ ಮೌಲ್ಯಗಳೇ ಕಾರಣ ಎಂದು ದೂರಿದರು.



ದೇಶದಲ್ಲಿ ದಲಿತ, ಆದಿವಾಸಿಗಳು, ಮಹಿಳೆಯರು, ಅಲ್ಪಸಂಖ್ಯಾತರ ಮೇಲಾಗುತ್ತಿರುವ ದೌರ್ಜನ್ಯ ಖಂಡಿಸಿ ಭಾರತ ಕಮ್ಯೂನಿಸ್ಟ್ ಪಕ್ಷದಿಂದ ಪುರಭವನ ಮುಂಭಾಗದ ಅಂಬೇಡ್ಕರ್ ಪ್ರತಿಮೆ ಬಳಿ ಪ್ರತಿಭಟನೆ ನಡೆಸಲಾಯಿತು.

2023ರ ಎನ್‌ಸಿಆರ್‌ಬಿ ವರದಿಯ ಪ್ರಕಾರ, ದೇಶದಲ್ಲಿ ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳ ಸಂಖ್ಯೆ 57,000. ದಲಿತ ಮಹಿಳೆಯರ ಮೇಲೆ ನಡೆದಿರುವ ಅತ್ಯಾಚಾರ ಪ್ರಕರಣಗಳ ಸಂಖ್ಯೆ 2835. ಆದರೆ ವಾಸ್ತವದಲ್ಲಿ ಪೊಲೀಸರ ಬಳಿ ದಾಖಲಾಗದಿರುವ ದೌರ್ಜನ್ಯ ಪ್ರಕರಣಗಳ ಸಂಖ್ಯೆ ಇನ್ನೂ ಅಧಿಕವಾಗಿದೆ. ಇಂದಿಗೂ ದಲಿತರ ಮತ್ತು ಮಹಿಳೆಯರ ವಿರುದ್ಧ ನಡೆಯುತ್ತಿರುವ ಈ ದೌರ್ಜನ್ಯಗಳಿಗೆ ಪುರೋಹಿತಶಾಹಿ ವ್ಯವಸ್ಥೆ, ಶ್ರೇಣಿಕೃತ ಸಾಮಾಜಿಕ ಪದ್ಧತಿ, ಪುರುಷ ಪ್ರಧಾನ ವ್ಯವಸ್ಥೆ ಮತ್ತು ಕೋಮುವಾದಿ ಮನಸ್ಥಿತಿಯೇ ಕಾರಣ. ಬಿಹಾರದ ಬೆಲ್ಲಿ ಪ್ರಕರಣ, ತಮಿಳುನಾಡಿನ ಕಿಲ್ವೇನ್ಮಣಿ ಹತ್ಯಾಕಾಂಡ, ಕರ್ನಾಟಕದಲ್ಲಿ ಬದನವಾಳು ಪ್ರಕರಣ, ಕೋಲಾರದ ಕಂಬಾಲಪಲ್ಲಿ ಪ್ರಕರಣ, ಕೊಪ್ಪಳದ ಮರಕೊಂಬಿ ಪ್ರಕರಣ, ಕರಂಚೇಡು ಪ್ರಕರಣ, ಚೆಂಡೂರು ಪ್ರಕರಣ, ಮಹಾರಾಷ್ಟ್ರದ ಖೈರ್ಲಾಂಜಿ ಪ್ರಕರಣ, ನಾಗಾಲಪಲ್ಲಿ ಪ್ರಕರಣ, ಉತ್ತರಪ್ರದೇಶದ ಹತ್ರಾಸ್ ಪ್ರಕರಣ, ಗುಜರಾತ್ ಜನಾಂಗೀಯ ಹತ್ಯೆ ಪ್ರಕರಣ, ಬಿಲ್ಕಿಸ್ ಬಾನು ಪ್ರಕರಣ, ಮಣಿಪುರದ ಜನಾಂಗೀಯ ಹತ್ಯೆ ಪ್ರಕರಣ, ಧರ್ಮಸ್ಥಳದ ಸೌಜನ್ಯ ಮತ್ತಿತರ ಪ್ರಕರಣಗಳು, ಇಂತಹ ಸಾವಿರಾರು ದೌರ್ಜನ್ಯ ಪ್ರಕರಣಗಳನ್ನು ಮರೆಯದೆಯೇ, ಇಂತಹ ಹಿಂಸಾಚಾರಗಳು ಮರುಕಳಿಸದಂತೆ ನೋಡಿಕೊಳ್ಳಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಕಾರ್ಯದರ್ಶಿ ಹೆಚ್.ಬಿ.ರಾಮಕೃಷ್ಣ, ಸಹ ಕಾರ್ಯದರ್ಶಿ ಕೆ.ಜಿ.ಸೋಮರಾಜೇ ಅರಸ್, ಖಜಾಂಚಿ ಎಂ.ಎಸ್.ಹರಿಪ್ರಸಾದ್ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಕಾವೇರಿ ಶಿಕ್ಷಣ ಸಂಸ್ಥೆಯಲ್ಲಿ ಕಾವೇರಿ ಕನ್ನಡ ಕಲರವ



ಕಾವೇರಿ ಶಿಕ್ಷಣ ಸಂಸ್ಥೆಯಲ್ಲಿ ಕನ್ನಡ ರಾಜ್ಯೋತ್ಸವದ ಅಂಗವಾಗಿ ನಡೆದ ಕಾವೇರಿ ಕನ್ನಡ ಕಲರವ ಕಾರ್ಯಕ್ರಮ.

ಮೈಸೂರು,ನ.18–ಮೈಸೂರು ಕುವೆಂಪುನಗರದಲ್ಲಿರುವ ಶ್ರೀ ಕಾವೇರಿ ಪ್ರಥಮ ದರ್ಜೆ ಕಾಲೇಜು ಹಾಗೂ ಕಾವೇರಿ ವಿದ್ಯಾ ಸಂಸ್ಥೆ ಹೆಚ್‌ಎಸ್ ಸಹಯೋಗದೊಂದಿಗೆ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಕಾವೇರಿ ಕನ್ನಡ ಕಲರವ–2025 ಕಾರ್ಯಕ್ರಮ ಆಯೋಜಿಸಲಾಗಿತ್ತು ಮುಖ್ಯ ಅತಿಥಿಗಳಾಗಿ ಯುವರಾಜ ಕಾಲೇಜು ಕನ್ನಡ ಪ್ರಾಧ್ಯಾಪಕಿ ಡಾ.ಎಂ.ಪಿ.ರೇಖಾ ಭಾಗವಹಿಸಿ, ಕನ್ನಡ ಭಾಷೆ, ಸಾಹಿತ್ಯದ ಬಗ್ಗೆ ಹಾಗೂ ಕನ್ನಡ ನಾಡು ನುಡಿಯ ಬಗ್ಗೆ ಮಕ್ಕಳನ್ನು ಉದ್ದೇಶಿಸಿ ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಆಡಳಿತಾಧಿಕಾರಿ ಡಾ. ಸುಬ್ರಮಣ್ಯ ಮಾತನಾಡಿ, ಇಂದಿನ ಪೀಳಿಗೆಯ ಮಕ್ಕಳಲ್ಲಿ ಕನ್ನಡ ಅಭಿಮಾನವನ್ನು ಬೆಳೆಸುವಲ್ಲಿ ಪ್ರತಿಯೊಬ್ಬರು ಶ್ರಮಿಸಬೇಕು ಎಂದು ತಿಳಿಸಿದರು.

ಶ್ರೀ ಕಾವೇರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲರಾದ ಶ್ರೀಮತಿ ಪದ್ಮಾವತಿ ಕೆ.ಎಂ, ಕಾವೇರಿ ವಿದ್ಯಾ ಸಂಸ್ಥೆ ಹೆಚ್‌ಎಸ್ ಪ್ರಾಂಶುಪಾಲ ನವೀನ ಎನ್.ಸಿ ಹಾಗೂ ಬೋಧಕ ವರ್ಗ, ಬೋಧಕೇತರ ವರ್ಗದವರು ಉಪಸ್ಥಿತರಿದ್ದರು.

ನಾಲೆಯಲ್ಲಿ ಸಿಲುಕಿ ಒದ್ದಾಡುತ್ತಿದ್ದ ಕಾಡಾನೆ ರಕ್ಷಣೆ

ಭಾರೀ ಸಾಮರ್ಥ್ಯದ ಕ್ರೇನ್, ಲಾರಿ, ಅರವಳಿಕೆ ತಜ್ಞರಿಂದ ರೋಚಕ ಕಾರ್ಯಾಚರಣೆ





ಮಂಡ್ಯ ಜಿಲ್ಲೆಯ ಮಳವಳ್ಳಿಯ ಶಿವನಸಮುದ್ರದ ಬಳಿ ಖಾಸಗಿ ವಿದ್ಯುತ್ ಉತ್ಪಾದನಾ ಕೇಂದ್ರದ ನಾಲೆಯೊಳಗೆ ಸಿಲುಕಿದ್ದ ಕಾಡಾನೆಯನ್ನು ರಕ್ಷಣೆ ಮಾಡುತ್ತಿರುವುದು.

ಮಳವಳ್ಳಿ,ನ.18(ಎಂಟಿವೈ)– ಕಾವೇರಿ ನದಿ ದಾಟುವ ವೇಳೆ ನೀರಿನ ರಭಸಕ್ಕೆ ಸಿಲುಕಿ ಖಾಸಗಿ ವಿದ್ಯುತ್ ತಯಾರಿಕಾ ಘಟಕಕ್ಕೆ ನೀರು ಪೂರೈಸುವ ನಾಲೆಯೊಳಗೆ ಕಳೆದ ಎರಡು ದಿನಗಳಿಂದ ನರಳಾಡುತ್ತಿದ್ದ ಕಾಡಾನೆಯನ್ನು ಅರಣ್ಯ ಇಲಾಖೆ ರೋಚಕ ಕಾರ್ಯಾಚರಣೆ ಮೂಲಕ ರಕ್ಷಿಸಿ, ಮರಳಿ ಕಾಡಿಗೆ ಬಿಟ್ಟಿದೆ.

ಮಳವಳ್ಳಿ ತಾಲೂಕಿನ ಶಿವನಸಮುದ್ರ ಸಮೀಪವಿರುವ ಖಾಸಗಿ ವಿದ್ಯುತ್ ಉತ್ಪಾದನಾ ಕೇಂದ್ರಕ್ಕೆ ನೀರು ಒದಗಿಸುವ ನಾಲೆಯಲ್ಲಿ ಶನಿವಾರ(ನ.15) ರಾತ್ರಿ 12 ವರ್ಷದ ಗಂಡಾನೆ ತುಂಬಿ ಹರಿಯುತ್ತಿದ್ದ ನೀರಲ್ಲಿ ಪ್ರಾಣ ಉಳಿಸಿಕೊಳ್ಳಲು ಪರದಾಡುತ್ತಿದ್ದುದನ್ನು ವಿದ್ಯುತ್ ಉತ್ಪಾದನಾ ಕೇಂದ್ರದ ಸಿಬ್ಬಂದಿ ಗಮನಿಸಿದ್ದಾರೆ.

ಕೂಡಲೇ ಆನೆ ಇದ್ದ ನಾಲೆಗೆ ನೀರು ಬರುವ ಗೇಟ್ ಬಂದ್ ಮಾಡಿ ನೀರಿನ ಪ್ರಮಾಣ ಕುಗ್ಗುವಂತೆ ನೋಡಿಕೊಂಡಿದ್ದಾರೆ. ಅಲ್ಲದೆ, ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಬಂದ ಅರಣ್ಯಾಧಿಕಾರಿಗಳ ತಂಡ ಸಮಾಲೋಚಿಸಿ 50 ಅಡಿ ಆಳದ ನಾಲೆಯಲ್ಲಿ ಸಿಲುಕಿದ್ದ ಆನೆಯನ್ನು ರಕ್ಷಿಸಲು ಮುಂದಾಗಿದ್ದಾರೆ.

ನ.17ರಂದು ಕೆಆರ್‌ಎಸ್ ಮತ್ತು ಕಬಿನಿ ಜಲಾಶಯದಿಂದ ನದಿಗೆ ಬಿಡುವ ನೀರಿನ ಪ್ರಮಾಣವನ್ನು ಕಡಿಮೆ ಮಾಡುವಂತೆ ಕೋರಿಕೊಂಡ ಹಿನ್ನೆಲೆಯಲ್ಲಿ ಸಂಜೆ ವೇಳೆಗೆ ನದಿಯಲ್ಲಿ ನೀರಿನ ಪ್ರಮಾಣ ಕಡಿಮೆಯಾಗಿದೆ. ಬಳಿಕ ನಾಲೆಯಲ್ಲಿ ಸಿಲುಕಿದ್ದ ಆನೆಯನ್ನು ಅದು ನೀರಿನ ರಭಸದಲ್ಲಿ ನುಸುಳಿ ಬಂದ ಗೇಟ್ ಮೂಲಕವೇ ಹಿಮ್ಮೆಟ್ಟಿಸಲು ಡ್ರೋನ್ ಮೂಲಕ ನಡೆಸಿದ ಕಾರ್ಯಾಚರಣೆ ವಿಫಲವಾಗಿದೆ. ಬಳಿಕ ಅರವಳಿಕೆ ಚುಚ್ಚು ಮದ್ದು ನೀಡಿ, ಅದನ್ನು ಸೆರೆ ಹಿಡಿದು ಕ್ರೇನ್ ಮೂಲಕ ಮೇಲೆತ್ತಲು ನಿರ್ಧರಿಸಲಾಯಿತು.

ಆನೆಯ ಉಪಚಾರ: ಎರಡು ದಿನಗಳಿಂದ ನೀರಲ್ಲಿ ಈಜುತ್ತಾ ನಿತ್ರಾಣಗೊಂಡ ಆನೆಗೆ ಕಬ್ಬು, ಹಸಿ ಹುಲ್ಲು, ಕಲ್ಲಂಗಡಿ ಹಣ್ಣು ಸೇರಿದಂತೆ ಅಗತ್ಯ ಆಹಾರವನ್ನು ನಾಲೆಯಲ್ಲಿಯೇ ಪೂರೈಸಲಾಗಿತ್ತು. ಈ ವೇಳೆ ಹೆಚ್ಚು ಸಾಮರ್ಥ್ಯವುಳ್ಳ ಬೃಹತ್ ಕ್ರೇನ್ ಹಾಗೂ ಬೃಹತ್ ಲಾರಿಯೊಂದನ್ನು ಕರೆಸಿ, ಆನೆ ರಕ್ಷಣಾ ಕಾರ್ಯ ಆರಂಭಿಸಲಾಯಿತು.

ರೋಚಕ ಕಾರ್ಯಾಚರಣೆ: ಕ್ರೇನ್ ಬಂದ ಬಳಿಕ ಇಂದು ಬೆಳಗ್ಗೆ ಪಶುವೈದ್ಯರಾದ ಡಾ.ರಮೇಶ್, ಡಾ.ಆದರ್ಶ ಆನೆಗೆ ಅರವಳಿಕೆ ಮದ್ದು ನೀಡುವ ಕಾರ್ಯದಲ್ಲಿ ಮಗ್ನರಾದರು. ನಾಲೆಯಲ್ಲಿದ್ದ ಆನೆಗೆ ಗುರಿಕಾರ ಅಕ್ರಂ ಅರವಳಿಕೆ ಮದ್ದು ನೀಡಿದರು. ಆನೆ ಮಂಪರಿಗೆ ಜಾರುತ್ತಿದ್ದಂತೆಯೇ ನಾಲೆಗೆ ಇಳಿದ ಪಶುವೈದ್ಯರು ಹಾಗೂ ಸಹಾಯಕರು ಆನೆಯ ಸೊಂಡಿಲು ನೀರಿನೊಳಗೆ ಮುಳುಗದಂತೆ ಕೈಯ್ಯಲ್ಲಿಟ್ಟುಕೊಂಡರು. ನಂತರ ವಿದ್ಯುತ್ ಉತ್ಪಾದನಾ ಕೇಂದ್ರದಲ್ಲಿದ್ದ ಕಬ್ಬಿಣದ ಗೇಟ್‌ವೊಂದಕ್ಕೆ ಕ್ರೇನ್‌ನಿಂದ ಬೆಲ್ಟ್ ಬಿಗಿದು ನಾಲೆಯೊಳಗೆ ಇಳಿಸಲಾಯಿತು. ಅದಾಗಲೆ ಮಂಪರಿನಲ್ಲಿದ್ದ ಆನೆಯನ್ನು ಬೆಲ್ಟ್ ಸಹಾಯದಿಂದ ಉಯ್ಯಾಲೆ ಮಾದರಿಯಲ್ಲಿ ಬೆಲ್ಟ್‌ನಿಂದ ಕಟ್ಟಿ ನಾಲೆಗೆ ಬಿಡಲಾಗಿದ್ದ ಕಬ್ಬಿಣದ ಗೇಟ್ ಮೇಲೆ ಮಲಗಿಸಲಾಯಿತು.

ನಂತರ ನಿಧಾನವಾಗಿ ಕ್ರೇನ್ ಸಹಾಯದಿಂದ ಆನೆಯನ್ನು ಮೇಲೆತ್ತಿ, ದಡದ ಮೇಲಿದ್ದ ಬೃಹತ್ ಲಾರಿ ಮೇಲಿಡಲಾಯಿತು. ಸುಮಾರು ಎರಡು ಗಂಟೆ ನಡೆದ ಕಾರ್ಯಾಚರಣೆಯನ್ನು ಸೂಕ್ಷ್ಮವಾಗಿ ನಡೆಸಿ, ಆನೆಯನ್ನು ರಕ್ಷಿಸಲಾಯಿತು.

ಕಾಡಿಗೆ ಬಿಡುಗಡೆ: ರಕ್ಷಿಸಲ್ಪಟ್ಟ ಆನೆಯನ್ನು ಲಾರಿಯಲ್ಲಿ ಕೊಂಡೊಯ್ದು ಕಾವೇರಿ ವನ್ಯಧಾಮದ ಅರಣ್ಯದ ಬಳಿ ಬಿಡುಗಡೆ ಮಾಡಲಾಯಿತು. ಅರವಳಿಕೆಯಿಂದಾಗಿ ಮಂಪರಿನಲ್ಲಿದ್ದ ಆನೆಗೆ ರಿವರ್ಸ್ ಇಂಜೆಕ್ಷನ್ ನೀಡಿ, ಮಂಪರಿನಿಂದ ಆನೆ ಯನ್ನು ಹೊರ ತಂದ ಬಳಿಕವಷ್ಟೆ ಅರಣ್ಯ ಪ್ರದೇಶದಲ್ಲಿ ಬಿಡುಗಡೆ ಮಾಡಲಾಯಿತು. ಕಾವೇರಿ ವನ್ಯಧಾಮ ಪ್ರವೇಶಿಸಿರುವ ಈ ಆನೆ ಮೇಲೆ ಡ್ರೋನ್ ಮೂಲಕ ನಿಗಾ ಇಡಲು ನಿರ್ಧರಿಸಲಾಗಿದೆ.

ಮಂಡ್ಯ ಡಿಸಿಎಫ್ ರಘು, ಡಿಸಿಎಫ್ ಡಾ. ಐ.ಬಿ.ಪ್ರಭುಗೌಡ, ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕಿ ಪಿ.ಅನುಷಾ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಹೊಸ ಇತಿಹಾಸ ಸೃಷ್ಟಿಸಿದ ಕೆಆರ್‌ಎಸ್ ಜಲಾಶಯ

150 ದಿನಗಳವರೆಗೆ ಗರಿಷ್ಠ ಮಟ್ಟದ ನೀರು ಸಂಗ್ರಹ ದಾಖಲೆ

ಶ್ರೀರಂಗಪಟ್ಟಣ, ನ.18– ಜಿಲ್ಲೆಯ ಜೀವನಾಡಿ ಕೃಷ್ಣರಾಜಸಾಗರ ಜಲಾಶಯದಲ್ಲಿ 150 ದಿನಗಳ ಕಾಲ ಗರಿಷ್ಠ ಮಟ್ಟದ ನೀರು ಸಂಗ್ರಹವಾಗಿ ಹೊಸ ದಾಖಲೆ ಬರೆದಿದೆ. ಕಳೆದ ವರ್ಷ 108 ದಿನಗಳವರೆಗೆ ಗರಿಷ್ಠ ಮಟ್ಟದ ನೀರನ್ನು ಕಾಯ್ದಿರಿಸಿಕೊಂಡಿದ್ದ ಜಲಾಶಯ ಈ ಬಾರಿ ಇನ್ನೂ ಹೆಚ್ಚುಕಾಲ ಪೂರ್ಣ ಪ್ರಮಾಣದಲ್ಲಿ ನೀರನ್ನು ತನ್ನ ಒಡಲಲ್ಲಿ ಹಿಡಿದಿಟ್ಟುಕೊಳ್ಳುವ ಮೂಲಕ ಮತ್ತೊಂದು ದಾಖಲೆಯ ಗರಿಯನ್ನು ಮುಡಿಗೇರಿಸಿಕೊಂಡಿದೆ.

ಕೇರಳದ ವಯನಾಡು, ಮಡಿಕೇರಿ ಸೇರಿದಂತೆ ಕಾವೇರಿ ಜಲಾನಯನ ಪ್ರದೇಶದಲ್ಲಿ ಧಾರಾಕಾರ ಮಳೆಯಾಗಿದ್ದರಿಂದ ಇತಿಹಾಸದಲ್ಲೇ ಮೊದಲ ಬಾರಿಗೆ ಜೂನ್ ತಿಂಗಳಲ್ಲೇ ಅಣೆಕಟ್ಟು ಭರ್ತಿಯಾಗಿತ್ತು. ಜೊತೆಗೆ ಜೂ.30 ರಂದು ಕಾವೇರಿಗೆ ಸಿಎಂ ಸಿದ್ದರಾಮಯ್ಯ ಬಾಗಿನ ಅರ್ಪಿಸಿದ್ದರು. ಅಣೆಕಟ್ಟೆಯಲ್ಲಿ ಸತತ 150 ದಿನಗಳ ಕಾಲ ಗರಿಷ್ಠ ಮಟ್ಟದ ನೀರನ್ನು ಸಂಗ್ರಹಿಸಿಟ್ಟುಕೊಳ್ಳುವ ಮೂಲಕ ಈ ಭಾಗದ ಕೃಷಿ ಮತ್ತು ಕುಡಿಯುವ ನೀರಿನ ಸಮಸ್ಯೆ ಇಲ್ಲದಂತೆ ಕಾಪಾಡಿಕೊಂಡಿರುವುದು ಮತ್ತೊಂದು ವಿಶೇಷವಾಗಿದೆ.

ಅಣೆಕಟ್ಟು ಭರ್ತಿಯಾದ ನಂತರದ ದಿನಗಳಲ್ಲಿ ಕೃಷಿ ಮತ್ತು ಕುಡಿಯುವ ನೀರಿನ ಆದ್ಯತೆ ನೀಡುವ ಸಲುವಾಗಿ ನಾಲೆಗಳಲ್ಲಿ ನೀರು ಹರಿಸಲಾಯಿತು. ಮಳೆ ಪ್ರಮಾಣ ಕಡಿಮೆಯಾದ ಕಾರಣ ಜಲಾಶಯದಲ್ಲಿ ನೀರಿನ ಮಟ್ಟ ಕಡಿಮೆಯಾಗಿತ್ತು. ಜುಲೈನಿಂದ ಇಲ್ಲಿಯವರೆಗೆ ಕೇರಳ, ಕೊಡಗು, ಹೇಮಾವತಿ ಭಾಗದಲ್ಲೂ ನಿರಂತರ ಮಳೆ ಸುರಿದಿದ್ದರಿಂದ ಜಲಾಶಯಕ್ಕೆ ಒಳಹರಿವು



ಕೆಆರ್‌ಎಸ್ ಜಲಾಶಯದಲ್ಲಿ ಸಂಗ್ರಹವಾಗಿರುವ ನೀರಿನ ಮಟ್ಟ.

ಹೆಚ್ಚಾಗೊಂಡು ಅಣೆಕಟ್ಟು ಭರ್ತಿಯಾಯಿತು. ಅದರಿಂದಾಗಿ ಹೆಚ್ಚಿನ ಪ್ರಮಾಣದ ನೀರನ್ನು ನದಿಗೆ ಬಿಡುವ ಮೂಲಕ ಗರಿಷ್ಠ ಮಟ್ಟವನ್ನು ಕಾಯ್ದುಕೊಳ್ಳಲಾಗಿತ್ತು.

ಕಾವೇರಿ ಜಲಾನಯನ ಪ್ರದೇಶದಲ್ಲಿ ವ್ಯಾಪಕ ಮಳೆ ಬೀಳುತ್ತಿರುವುದರಿಂದ ತಮಿಳುನಾಡಿಗೆ ಈ ಬಾರಿ ಅಪಾರ ಪ್ರಮಾಣದ ನೀರು ಹರಿದುಹೋಗಿದೆ. ಕರ್ನಾಟಕದಿಂದ ಹರಿಯಲ್ಪಟ್ಟ ನೀರನ್ನು ಸಂಗ್ರಹಿಸಿಟ್ಟುಕೊಳ್ಳಲಾಗದೆ ಮೆಟ್ಟೂರು ಜಲಾಶಯದಿಂದಲೂ ಸಮುದ್ರಕ್ಕೆ ಹೆಚ್ಚು ಪ್ರಮಾಣದ ನೀರು ಹರಿದುಹೋಗಿದೆ ಎನ್ನಲಾಗಿದೆ.

ಒಟ್ಟಾರೆ ಈ ಬಾರಿ ವರುಣನ ಕೃಪೆಯಿಂದ ಕಾವೇರಿ ನೀರಿನ ವಿವಾದ ಸೃಷ್ಟಿಯಾಗಿಲ್ಲ. ಜಿಲ್ಲೆಯ ರೈತರಿಗೆ ಎರಡು ಬೆಳೆ ಬೆಳೆಯಲು ಕೃಷ್ಣರಾಜಸಾಗರ ಜಲಾಶಯದಿಂದ ನೀರು ಕೊಡಲು ನೀರಾವರಿ ಸಲಹಾ ಸಮಿತಿ ಸಹಮತ ವ್ಯಕ್ತಪಡಿಸಿದೆ. ಜೊತೆಗೆ ಹತ್ತು ಜಿಲ್ಲೆಗಳ ಕುಡಿಯುವ ನೀರಿನ ಸಮಸ್ಯೆಯೂ ಇಲ್ಲದೇ ಇರುವುದರಿಂದ ರೈತರು ಖುಷಿಯಿಂದ ಇರುವುದು ಕಂಡು ಬಂದಿದೆ. ಪ್ರಸ್ತುತ ಜಲಾಶಯದ ಗರಿಷ್ಠ ಮಟ್ಟ 124.80 ಅಡಿ ಆಗಿದ್ದು, 123.86 ಅಡಿಯವರೆಗೆ ನೀರು ಸಂಗ್ರಹವಾಗಿದೆ. ಜಲಾಶಯಕ್ಕೆ 3372 ಕ್ಯುಸೆಕ್ ನೀರು ಹರಿದು ಬರುತ್ತಿದ್ದು, ಅಣೆಕಟ್ಟೆಯಿಂದ 5702 ಕ್ಯುಸೆಕ್ಸ್ ನೀರನ್ನು ಹೊರಬಿಡಲಾಗುತ್ತಿದೆ. ಅಣೆಕಟ್ಟೆಯಲ್ಲಿ 48.144 ಟಿಎಂಸಿ ನೀರು ಸಂಗ್ರಹವಾಗಿದೆ.

ರೈತನಿಗೆ ಭೂ ಪರಿಹಾರ ನೀಡದ ಮಂಡ್ಯದ ಸರ್ಕಾರಿ ಕಚೇರಿ ಜಪ್ತಿ

ಮಂಡ್ಯ, ನ.18– ರೈತನಿಗೆ ಭೂ ಪರಿಹಾರ ನೀಡದೆ ಸತಾಯಿಸಿದ ಕಾರಣಕ್ಕೆ ಮಂಡ್ಯ ನಗರದಲ್ಲಿರುವ ಕಾರ್ಯಪಾಲಕ ಎಂಜಿನಿಯರ್ ವಿ.ಸಿ.ನಾಲಾ ವಿಭಾಗದ ಎಇ ಕಚೇರಿ ಜಪ್ತಿಗೆ ಮಂಡ್ಯದ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಿಂದ ಜಪ್ತಿಗೆ ಆದೇಶ ಬಂದ ಹಿನ್ನೆಲೆಯಲ್ಲಿ ಕಚೇರಿ ಪೀಠೋಪಕರಣವನ್ನು ಹೊತ್ತೊಯ್ಯಲಾಯಿತು.

ವಕೀಲರ ಜೊತೆಗೆ ಕೋರ್ಟ್ ಜಪ್ತಿ ಆದೇಶದೊಂದಿಗೆ ಬಂದ ಮದ್ದೂರು ತಾಲೂಕಿನ ಹೆಬ್ಬರಳು ಗ್ರಾಮದ ರೈತ ಜವರೇಗೌಡ, ಕಚೇರಿ ಪೀಠೋಪಕರಣ ಸೇರಿ ಕಂಪ್ಯೂಟರ್ ಹಾಗೂ ಇನ್ನಿತರೆ ಸಾಮಾಗ್ರಿಗಳನ್ನು ಜಪ್ತಿ ಮಾಡಿಸಿದ್ದಾರೆ.

ನೀರಾವರಿ ಇಲಾಖೆಯ ಧೋರಣೆಗೆ ಜಪ್ತಿ ಆದೇಶ ಕೊಟ್ಟು ಚಾಟಿ ಬೀಸಿದ ನ್ಯಾಯಾಲಯವು, ನಾಲೆ ನಿರ್ಮಾಣಕ್ಕೆ 1.17 ಎಕರೆ ಭೂಮಿ ಕಳೆದುಕೊಂಡಿದ್ದ ರೈತನಿಗೆ 84 ಲಕ್ಷ ಪರಿಹಾರ ಕೊಡದೇ ವಿಳಂಬ ನೀತಿ ಅನುಸರಿಸಿದ್ದರಿಂದ ಇಲಾಖೆಗೆ ಜಪ್ತಿ ಆದೇಶ ಕೊಟ್ಟು ನ್ಯಾಯಾಲಯ ಚಾಟಿ ಬೀಸಿತ್ತು.

ಹೆಬ್ಬರಳು ಗ್ರಾಮದ ಮುತ್ತುರಾಯನಕೆರೆ ಪೋಷಕ ನಾಲೆಗೆ ರೈತ ಜವರೇಗೌಡರ ಜಮೀನನ್ನು ವಶಪಡಿಸಿಕೊಳ್ಳಲಾಗಿತ್ತು. 2020ರಲ್ಲಿ ಕೋರ್ಟ್‌ನಿಂದ ಆದೇಶವಿದ್ದರೂ ಪರಿಹಾರ ನೀಡದೇ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದ್ದರು. ಇದರಿಂದ ನ್ಯಾಯಾಲಯದ ಮೊರೆ ಹೋಗಿದ್ದ ಜವರೇಗೌಡರ ಪ್ರಕರಣಕ್ಕೆ ಸಂಬಂಧಿಸಿದಂತೆ ತೀರ್ಪು ಪ್ರಕಟಿಸಿದ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಈ ರೀತಿ ತೀರ್ಪು ನೀಡಿದೆ.

ನಾಳೆ ಜಿಲ್ಲಾ ಮಟ್ಟದ ವಿಕಲಚೇತನರ ಕ್ರೀಡಾಕೂಟ

ಮಂಡ್ಯ, ನ.18– ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ಹಾಗೂ ಜಿಲ್ಲೆಯ ಎಂಆರ್‌ಡಬ್ಲ್ಯೂ, ವಿಆರ್‌ಡಬ್ಲ್ಯೂ, ಯೂಆರ್‌ಡಬ್ಲ್ಯೂ, ಒಕ್ಕೂಟದ ಸಂಯುಕ್ತಾಶ್ರಯದಲ್ಲಿ 2025–26ನೇ ಸಾಲಿನ ಜಿಲ್ಲಾ ಮಟ್ಟದ ವಿಕಲಚೇತನರ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಕಾರ್ಯಕ್ರಮವನ್ನು ನ.20 ರಂದು ಬೆಳಿಗ್ಗೆ 9.30 ಗಂಟೆಗೆ ನಗರದ ಸರ್.ಎಂ. ವಿಶ್ವೇಶ್ವರಯ್ಯ ಜಿಲ್ಲಾ ಒಳಾಂಗಣ ಕ್ರೀಡಾಂಗಣದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ. ಜಿಲ್ಲೆಯಲ್ಲಿನ ಎಲ್ಲಾ ಆಸಕ್ತ ವಿಕಲಚೇತನ ಪುರುಷ ಮತ್ತು ಮಹಿಳಾ ಕ್ರೀಡಾಪಟುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಕೋರಲಾಗಿದೆ.

ಕಾರಿನ ಕಿಟಕಿ ಗಾಜು ಒಡೆದು ಚಿನ್ನಾಭರಣ ದೋಚಿದ್ದವನ ಸೆರೆ

ನಾಗಮಂಗಲ: ಹೆದ್ದಾರಿಯಲ್ಲಿ ನಿಲ್ಲಿಸಿದ್ದ ಕಾರಿನ ಹಿಂಬದಿಯ ಗ್ಲಾಸ್ ಒಡೆದು ಚಿನ್ನಾಭರಣ ದೋಚಿದ್ದ ಕಳ್ಳನನ್ನು ಬೆಳ್ಳೂರು ಠಾಣಾ ಪೊಲೀಸರು ಬಂಧಿಸಿದ್ದಾರೆ.



ವೀರೇಶ್

ದಾವಣಗೆರೆಯ ಹಳೆಪೇಟೆ ನಿವಾಸಿ ನಾಗರಾಜಪ್ಪರವರ ಮಗ ವೀರೇಶ್ ಬಂಧಿತ ಆರೋಪಿ. ಈತನಿಂದ 8 ಲಕ್ಷ ರೂ. ಮೌಲ್ಯದ 51 ಗ್ರಾಂ ಚಿನ್ನಾಭರಣ ಹಾಗೂ ಪ್ಯಾಸೆಂಜರ್ ಆಟೋವನ್ನು ವಶಕ್ಕೆ ಪಡೆಯಲಾಗಿದೆ. ಬೆಂಗಳೂರಿನ ನಿವಾಸಿ ಹನೀಫ್ ಕಳೆದ ವರ್ಷ ನ.18ರಂದು ಬೆಳ್ಗಂಗಡಿಗೆ ಹೋಗುತ್ತಿದ್ದಾಗ ಬೆಳ್ಳೂರು ಪೊಲೀಸ್ ಠಾಣೆ ವ್ಯಾಪ್ತಿಯ ಬೆಂಗಳೂರು–ಮಂಗಳೂರು ಹೆದ್ದಾರಿ ಬದಿಯ ಎಂಟಿಆರ್ ಹೋಟೆಲ್ ಬಳಿ ಕಾರು ನಿಲ್ಲಿಸಿ ತಿಂಡಿ ತಿನ್ನಲು ಹೋಗಿದ್ದರು, ವಾಪಸ್ ಬಂದಾಗ ಕಾರು ಹೊತ್ತಿ ಉರಿಯುವುದನ್ನು ಕಂಡು ಅಗ್ನಿಶಾಮಕ ದಳಕ್ಕೆ ಮಾಹಿತಿ ನೀಡಿದರು. ಆದರೆ ಬೆಂಕಿ ನಂದಿಸಲು ಸಾಧ್ಯವಾಗಲಿಲ್ಲ. ಕಾರು ಸಂಪೂರ್ಣವಾಗಿ ಸುಟ್ಟು ಭಸ್ಮವಾಗಿತ್ತು.

ಈ ಬಗ್ಗೆ ಹನೀಫ್ ಬೆಳ್ಳೂರು ಠಾಣೆಗೆ ದೂರು ದಾಖಲಿಸಿ ಕಾರಿನಲ್ಲಿ ಚಿನ್ನಾಭರಣದ ಬ್ಯಾಗ್ ಇದ್ದ ಬಗ್ಗೆ ಮಾಹಿತಿ ನೀಡಿದ್ದರು. ಪ್ರಕರಣ ಭೇದಿಸಲು ಜಿಲ್ಲಾ ಪೊಲೀಸ್ ಅಧೀಕ್ಷಕ ಮಲ್ಲಿಕಾರ್ಜುನ ಬಾಲದಂಡಿ ವಿಶೇಷ ಪೊಲೀಸ್ ತಂಡವನ್ನು ರಚಿಸಿದ್ದರು, ಆರೋಪಿಗಳ ಶೋಧ ಕಾರ್ಯದಲ್ಲಿ ನಿರತರಾಗಿದ್ದ ಪೊಲೀಸ್ ತಂಡಕ್ಕೆ ದೊರೆತ ಖಚಿತ ಮಾಹಿತಿ ಮೇರೆಗೆ ಬೆಳ್ಳೂರು ಕ್ರಾಸ್ ಬಳಿ ಆರೋಪಿ ವೀರೇಶ್‌ನನ್ನು ಬಂಧಿಸಿದರು.

ವಿಚಾರಣೆ ವೇಳೆ, ಹೋಟೆಲ್ ಮುಂದೆ ನಿಲ್ಲಿಸಿದ್ದ ಕಾರಿನ ಹಿಂಬದಿಯ ಗ್ಲಾಸ್ ಹೊಡೆದು ಅಲ್ಲಿದ್ದ ಚಿನ್ನಾಭರಣದ ಬ್ಯಾಗನ್ನು ಕಳ್ಳತನ ಮಾಡಿರುವುದಾಗಿ ಒಪ್ಪಿಕೊಂಡಿದ್ದು ಆದರೆ ಕಳ್ಳತನದ ಸಮಯದಲ್ಲಿ ಕಾರಿಗೆ ಬೆಂಕಿ ಹೊತ್ತಿಕೊಂಡಿರಲಿಲ್ಲ ಎಂದು ಮಾಹಿತಿ ನೀಡಿದ್ದು, ತಾಂತ್ರಿಕ ಕಾರಣದಿಂದ ಕಾರು ಬೆಂಕಿಯ ಕೆನ್ನಾಲಿಗೆ ಸುಟ್ಟು ಹೋಗಿದೆ. ಕಳವು ಮಾಡಿದ್ದ 51 ಗ್ರಾಂ ಚಿನ್ನಾಭರಣ ಮತ್ತು ಕಳ್ಳತನಕ್ಕೆ ಬಳಸಿದ್ದ ಪ್ಯಾಸೆಂಜರ್ ಆಟೋವನ್ನು ಪೊಲೀಸರು ವಶಕ್ಕೆ ಪಡೆದಿದ್ದು, ಪ್ರಕರಣದ ಆರೋಪಿಗಳ ಪತ್ತೆಗೆ ರಚಿಸಲಾಗಿದ್ದ ಎಎಸ್ಪಿ ತಿಮ್ಮಯ್ಯ, ಗಂಗಾಧರಸ್ವಾಮಿ, ಎಸ್‌ಸಿ ನಾಗಮಂಗಲ ಡಿವೈಎಸ್ಪಿ ಚೆಲುವರಾಜು ಬಿ, ವೃತ್ತ ನಿರೀಕ್ಷಕ ಹೇಮಂತ್ ಕುಮಾರ್, ಎಸ್‌ಐ ರವಿಕುಮಾರ್ ವೈಎನ್ ಪೇದೆಗಳಾದ ಪ್ರಶಾಂತ್ ಕುಮಾರ್, ಮಧುಕುಮಾರ, ಮಹದೇವಸ್ವಾಮಿ, ರವಿ ಕಿರಣ್, ಲೋಕೇಶ್, ಪ್ರಕಾಶ್ ಕಾರ್ಯಾಚರಣೆಗೆ ಎಸ್ಪಿ ಶ್ಲಾಘನೆ ವ್ಯಕ್ತಪಡಿಸಿದ್ದಾರೆ.

ಒಂದನೇ ಪುಟದಿಂದ

ಕರ್ನಾಟಕ ವಿಶ್ವಾಸಾರ್ಹ ಹೂಡಿಕೆ ತಾಣ

ಕೃತಕ ಬುದ್ಧಿಮತ್ತೆ, ಕ್ವಾಂಟಮ್, ಬಯೋಟೆಕ್, ಬಾಹ್ಯಾಕಾಶ ಮತ್ತು ಹಸಿರು ತಂತ್ರಜ್ಞಾನಗಳಿಂದ ಕೂಡಿರುವ ಡಿಜಿಟಲ್ ಯುಗದಲ್ಲಿದ್ದು, ಬೆಂಗಳೂರು ತಂತ್ರಜ್ಞಾನ ಶೃಂಗಸಭೆ ದಿಟ್ಟ, ಮಾನವೀಯ ಮತ್ತು ಪರಿವರ್ತನಾತ್ಮಕ ಭವಿಷ್ಯ ಸಹ–ಸೃಷ್ಟಿಸಲು ಜಗತ್ತಿಗೆ ಕರ್ನಾಟಕದ ಆಹ್ವಾನವಾಗಿದೆ.

ಬೆಂಗಳೂರು ಭಾರತದ ಸಿಲಿಕಾನ್ ವ್ಯಾಲಿ, ಆದರೆ ಇಂದು, ಇನ್ನೂ ದೊಡ್ಡದಾಗಿ ನಾವೀನ್ಯತೆ, ಪ್ರತಿಭೆ, ಸಂಶೋಧನೆ ಮತ್ತು ತಾಂತ್ರಿಕ ನಾಯಕತ್ವದ ಮುಂಚೂಣಿಯಲ್ಲಿ ಜಾಗತಿಕ ಕೇಂದ್ರವಾಗಿ ಬೆಳೆದು ನಿಂತಿದೆ.

ತಂತ್ರಜ್ಞಾನ ಶಕ್ತಿ ಕೇಂದ್ರವಾಗಿ ಕರ್ನಾಟಕದ ಬೆಳವಣಿಗೆ ಆಕಸ್ಮಿಕವಲ್ಲ, ದೂರದೃಷ್ಟಿಯ ನೀತಿ, ಆಳವಾದ ಸಾಂಸ್ಥಿಕ ಶಕ್ತಿ ಮತ್ತು ಪ್ರತಿ ಹಂತದಲ್ಲೂ ಸೃಜನಶೀಲತೆ ಮತ್ತು ಶ್ರೇಷ್ಠತೆ ಪೋಷಿಸುವ ಪರಿಸರ ವ್ಯವಸ್ಥೆಯ ಪರಿಣಾಮವಾಗಿದೆ.

ವಿಫುಲ ಮಾನವ ಸಂಪತ್ತು: ಕರ್ನಾಟಕ ಜ್ಞಾನಕಾಶಿಯಾಗಿದ್ದು 85 ವಿಶ್ವವಿದ್ಯಾಲಯಗಳು, 243 ಎಂಜಿನಿಯರಿಂಗ್ ಕಾಲೇಜುಗಳು ಮತ್ತು ಸುಮಾರು 1,800 ಐಟಿಐಗಳಿಗೆ ನೆಲೆಯಾಗಿದೆ, ರಾಜ್ಯದ ನಿರುದ್ಯೋಗ ಪ್ರಮಾಣ 4.3% ರಷ್ಟು ಮಾತ್ರ ಇದ್ದು, ರಾಜ್ಯದ ಸಮರ್ಥ ಉತ್ಪಾದಕತೆ ಮತ್ತು ಉದ್ಯೋಗಾವಕಾಶಗಳನ್ನು ಎತ್ತಿ ತೋರಿಸುತ್ತದೆ.

ಕರ್ನಾಟಕ 16,000ಕ್ಕೂ ಹೆಚ್ಚು ನವೋದ್ಯಮಗಳ ನೆಲೆಯಾಗಿದೆ. ಭಾರತದ ಒಟ್ಟು ನವೋದ್ಯಮ ನಿಧಿಗೆ 47%ರಷ್ಟು ರಾಜ್ಯದ ಕೊಡುಗೆಯಾಗಿದೆ. ಕರ್ನಾಟಕ ಭಾರತದ ಐಟಿ ರಫ್ತಿನಲ್ಲಿ 42% ಕೊಡುಗೆ ನೀಡುತ್ತಿದೆ, ಇದರ ಮೌಲ್ಯ 3.2 ಲಕ್ಷ ಕೋಟಿ ರೂ.ಗಿಂತ ಹೆಚ್ಚು ಮತ್ತು ಈ ಪ್ರಗತಿ ವರ್ಷದಿಂದ ವರ್ಷಕ್ಕೆ 27%ರಷ್ಟು ವೇಗವಾಗಿ ಬೆಳೆಯುತ್ತಿದೆ. ರಾಜ್ಯ 550ಕ್ಕೂ ಹೆಚ್ಚು ಜಾಗತಿಕ ಸಾಮರ್ಥ್ಯ ಕೇಂದ್ರ (ಜಿಸಿಸಿ) ಹೊಂದಿದೆ, ಇದು ಭಾರತದ ಒಟ್ಟು ಕಂಪನಿಯ ಮೂರನೇ ಒಂದು ಭಾಗವಾಗಿದೆ.

ಬೆಂಗಳೂರು ಸೆಮಿಕಂಡಕ್ಟರ್, ಏರೋಸ್ಪೇಸ್, ರಕ್ಷಣಾ, ಬಯೋಟೆಕ್, ಎಲೆಕ್ಟ್ರಾನಿಕ್ಸ್ ಉತ್ಪಾದನೆ, ಅನಿಮೇಷನ್ ಮತ್ತು ಗೇಮಿಂಗ್ ಮತ್ತು ಡೀಪ್–ಟೆಕ್‌ಗಳಿಗೆ ಪ್ರಮುಖ ಕೇಂದ್ರವಾಗಿದೆ. ನೀತಿ–ನಾವೀನ್ಯತೆ ರೂಪಿಸುವಲ್ಲಿ ಕರ್ನಾಟಕ ಭಾರತವನ್ನು ಮುನ್ನಡೆಸಿದೆ, 1997ರಲ್ಲಿ ಭಾರತದ ಮೊದಲ ತಂತ್ರಜ್ಞಾನ ನೀತಿ ರೂಪಿಸಲಾಯಿತು, ಅಲ್ಲದೆ, ಹೊಸ ನೀತಿಗಳೊಂದಿಗೆ ನಾಯಕತ್ವ ಮುಂದುವರಿಸುತ್ತಿದ್ದೇವೆ.

ಕರ್ನಾಟಕದ ಹೆಗ್ಗಳಿಕೆ: ಸರ್ಕಾರದ ದೂರದೃಷ್ಟಿ ಆಡಳಿತದ ಪರಿಣಾಮವಾಗಿ ಜಾಗತಿಕ ತಂತ್ರಜ್ಞಾನದ ಕ್ಷೇತ್ರದಲ್ಲಿ ಕರ್ನಾಟಕ ಸಕ್ರಿಯವಾಗಿ ಪಾಲ್ಗೊಂಡಿದೆ, ವಿದೇಶಿ ಬಂಡವಾಳ ಹೂಡಿಕೆ, ಜಾಗತಿಕ ಸಹಭಾಗಿತ್ವ ಹಾಗೂ ಬಹುರಾಷ್ಟ್ರೀಯ ಹೂಡಿಕೆಗಳಲ್ಲಿ ಕರ್ನಾಟಕ ದೇಶದ ಪ್ರಮುಖ ರಾಜ್ಯಗಳಲ್ಲಿ ಒಂದಾಗಿದೆ.

ಪರಿಸರ ವ್ಯವಸ್ಥೆ ವಿಶ್ವದರ್ಜೆಯ ಇಂಜಿನಿಯರಿಂಗ್, ಪಾರದರ್ಶಕ ನೀತಿ, ಸದೃಢ ಐಪಿ ಸಂಸ್ಕೃತಿ ಹಾಗೂ ವೈವಿಧ್ಯಮಯ ಜಾಗತಿಕ ಸಮುದಾಯಗಳನ್ನು ಒಳಗೊಂಡಿದೆ. ವಾಣಿಜ್ಯ ಪರಿಸರಕ್ಕೆ ಉನ್ನತಮಟ್ಟದ ಕಾನೂನು, ಆರ್ಥಿಕ ಹಾಗೂ ತಾಂತ್ರಿಕ ಬಲದ ಬೆಂಬಲವಿದೆ.

ಬೆಂಗಳೂರಿನ ಹವಾಮಾನ, ಬಹುಸಂಸ್ಕೃತಿ ವಿಶ್ವದ ಜನರನ್ನು ಆಕರ್ಷಿಸುತ್ತಿವೆ. ಒಟ್ಟಾರೆ ರಾಜ್ಯ ಹೂಡಿಕೆದಾರರಿಗೆ ಸಂಶೋಧನೆಯಿಂದ ಮಾರುಕಟ್ಟೆಯವರೆಗೂ, ಮೂಲಸೌಕರ್ಯದಿಂದ ಕೌಶಲ್ಯದವರೆಗಿನ ಎಲ್ಲ ಅಗತ್ಯತೆ ಪೂರೈಸುತ್ತಿದ್ದು, ಕರ್ನಾಟಕ ಜಾಗತಿಕ ತಂತ್ರಜ್ಞಾನ ಕ್ರಾಂತಿ ಮುನ್ನಡೆಸುತ್ತಿದೆ.

ಕ್ವಾಂಟಮ್ ತಂತ್ರಜ್ಞಾನಕ್ಕೆ ಒತ್ತು ನೀಡಿದ ಮೊದಲ ರಾಜ್ಯ ಕರ್ನಾಟಕವಾಗಿದ್ದು, ಡೀಪ್ ಸೈನ್ಸ್ ಮತ್ತು ಸುಧಾರಿತ ಇಂಜಿನಿಯರಿಂಗ್ ವ್ಯವಸ್ಥೆ ಒದಗಿಸಲು ಬದ್ಧವಾಗಿದೆ, ಎಐ, ಸೈಬರ್–ಭದ್ರತೆ, ದತ್ತಾಂಶ ವಿಜ್ಞಾನ, ಅನಿಮೇಷನ್ ಮತ್ತು ರೊಬೊಟಿಕ್ಸ್‌ನಲ್ಲಿ ಉತ್ಕೃಷ್ಟತಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

ಕ್ವಾಂಟಮ್ ತಂತ್ರಜ್ಞಾನ ಮಾರ್ಗಸೂಚಿ ಜಾರಿಗೆ ತಂದ ಮೊದಲ ರಾಜ್ಯ ಕರ್ನಾಟಕ, 'ಬಿಯಾಂಡ್ ಬೆಂಗಳೂರು' ಉಪಕ್ರಮದ ಮೂಲಕ ತಂತ್ರಜ್ಞಾನ ಆರ್ಥಿಕತೆಯ ವಿಕೇಂದ್ರೀಕರಣಕ್ಕೆ ಮುಂದಾಗಿರುವ ರಾಜ್ಯ ಸರ್ಕಾರ, ಮುಂದಿನ ಪೀಳಿಗೆಗಾಗಿ ಟೈರ್–2 ನಗರಗಳ ನಾವಿನ್ಯತೆಯ ಕ್ಲಸ್ಟರ್‌ಗಳಾಗಿ ಅಭಿವೃದ್ಧಿಪಡಿಸಲಾಗುತ್ತಿದೆ.

ಎಲ್ಲ ಕ್ರಮಗಳು ಕೇವಲ ಆರ್ಥಿಕತೆ ಕೇಂದ್ರೀಕರಿಸದೇ, ಸಮಾನ ಬೆಳವಣಿಗೆಗೂ ಬದ್ಧವಾಗಿವೆ, ರಾಜ್ಯದ ಪ್ರತಿ ಜಿಲ್ಲೆ ಹಾಗೂ ಯುವಪೀಳಿಗೆ ಡಿಜಿಟಲ್ ಯುಗಕ್ಕೆ ತೆರೆದುಕೊಳ್ಳುವ ಅವಕಾಶ ನೀಡಲಾಗಿದೆ, ಆಡಳಿತದ ಮಾದರಿಯು ಪಾರದರ್ಶಕತೆ, ನಿರೀಕ್ಷಿತ ನಡೆ ಹಾಗೂ ಸ್ಥಿರತೆಗೆ ಬದ್ಧವಾಗಿದೆ ಎಂದರು.

ಸೆಮಿಕಂಡಕ್ಟರ್ ಪಾರ್ಕ್

ಕೈಗಾರಿಕೆಗಳು ಬೆಳೆಯಬೇಕು, ಹೂಡಿಕೆದಾರರು ನಮ್ಮಲ್ಲಿಗೆ ಬರಬೇಕೆಂದರೆ, ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯಪರಿಸರ ಉತ್ತಮವಾಗಿರಬೇಕು, ನಮ್ಮಲ್ಲಿ 800ಕ್ಕೂ ಹೆಚ್ಚು ಆರ್ ಅಂಡ್ ಡಿ ಕೇಂದ್ರಗಳು, 100ಕ್ಕೂ ಅಧಿಕ ಚಿಪ್ ವಿನ್ಯಾಸ ಕಂಪನಿಗಳು, 18,300 ನವೋದ್ಯಮಗಳಿವೆ.

ನಮ್ಮಲ್ಲಿನ ಆರ್ ಅಂಡ್ ಡಿ ಕೇಂದ್ರಗಳು ಕೃತಕ ಬುದ್ಧಿಮತ್ತೆ, ಡೀಪ್ ಟೆಕ್, ಕ್ವಾಂಟಂ ಕಂಪ್ಯೂಟಿಂಗ್, ಸ್ಪೇಸ್–ಟೆಕ್ ಮುಂತಾದ ಅತ್ಯಾಧುನಿಕ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿವೆ.

ಉದ್ದೇಶಿತ ಕ್ವಿನ್ ಸಿಟಿಯ 5,000 ಎಕರೆ ಜಾಗದಲ್ಲಿ ಆರ್ ಅಂಡ್ ಡಿ ಕೇಂದ್ರಗಳಿಗೆ ಅಗತ್ಯವಿರುವ ಸ್ಥಳ ಮೀಸಲಿಟ್ಟು, ಸೂಕ್ತ ಕಾರ್ಯಪರಿಸರ ಅಭಿವೃದ್ಧಿಪಡಿಸಲಿದ್ದೇವೆ.

ರಾಜ್ಯದಲ್ಲಿ ಹಲವು ತಂತ್ರಜ್ಞಾನ ಕಂಪನಿಗಳು ಎಐ, ಎಂಎಲ್ (ಮಷೀನ್ ಲರ್ನಿಂಗ್), ಕ್ವಾಂಟಂ, ರೋಬೋಟಿಕ್ಸ್, ಆಧುನಿಕ ತಯಾರಿಕೆ ಮತ್ತು ಸುಸ್ಥಿರ ನಾವೀನ್ಯತಾ ಕ್ಷೇತ್ರಗಳಲ್ಲಿ ಸಕ್ರಿಯವಾಗಿವೆ.

ಈ ಕಂಪನಿಗಳಿಗೆ ಬೆಂಬಲಿಸಲು ಸರ್ಕಾರ 600 ಕೋಟಿ ರೂ. ಒದಗಿಸಿದೆ, ಡೀಪ್ ಸೈನ್ಸ್ ಮತ್ತು ಮುಂಚೂಣಿ ತಂತ್ರಜ್ಞಾನ ಕ್ಷೇತ್ರದಲ್ಲೂ ರಾಜ್ಯ ಅಗ್ರಸ್ಥಾನದಲ್ಲಿ ಇರಬೇಕು ಎಂಬುದು ಸರ್ಕಾರದ ಸಂಕಲ್ಪವಾಗಿದ್ದು, ಇದಕ್ಕೆ ಪೂರಕವಾಗಿ ಇತ್ತೀಚೆಗೆ ಧಾರವಾಡದಲ್ಲಿ ಎಐ ಮತ್ತು ಕ್ವಾಂಟಂ ಕಂಪ್ಯೂಟಿಂಗ್ ಕ್ಷೇತ್ರಕ್ಕೆ ಸಂಬಂಧಿಸಿದ ಉತ್ಕೃಷ್ಟತಾ ಕೇಂದ್ರ ಪ್ರಾರಂಭಿಸಲು ತೀರ್ಮಾನಿಸಲಾಗಿದೆ. ಇನ್ನೊಂದೆಡೆ ಜೈವಿಕ ತಂತ್ರಜ್ಞಾನ, ಸೈಬರ್ ಸೆಕ್ಯೂರಿಟಿಯಂತಹ ಕ್ಷೇತ್ರಗಳಿಗೆ ಸಂಬಂಧಿಸಿದ ಕೈಗಾರಿಕೆಗಳು, ಶಿಕ್ಷಣ ಸಂಸ್ಥೆ ಗಳೊಂದಿಗೆ ಕೈಜೋಡಿಸಿದ್ದು, ರಾಜ್ಯವು ಇಎಸ್‌ಡಿಎಂ, ಸಂಚಾರ ವ್ಯವಸ್ಥೆ, ಜೈವಿಕ ತಂತ್ರಜ್ಞಾನ ಮತ್ತು ನವೋದ್ಯಮ ಪರಿಪೋಷಣೆಗೆ ಪುರೋಗಾಮಿ ನೀತಿ ಹೊಂದಿದ್ದು, ಜಪಾನ್, ಅಮೆರಿಕ, ಜರ್ಮನಿ ಮತ್ತು ಸಿಂಗಪುರ ರಾಷ್ಟ್ರಗಳೊಂದಿಗೆ ಕಾರ್ಯನಿರ್ವಹಿಸಲಾಗುತ್ತಿದೆ ಎಂದರು.

ಹೂಡಿಕೆಗೆ ಉದ್ಯಮಿಗಳು ಉತ್ಸುಕತೆ

ಐಟಿ ಸಚಿವ ಪ್ರಿಯಾಂಕ್ ಖರ್ಗೆ ಹಾಗೂ ಕಿಯೋನಿಕ್ಸ್‌ನ ಶರತ್ ಬಚ್ಚೇಗೌಡ ಉತ್ತಮ ಕಾರ್ಯನಿರ್ವಹಿಸುತ್ತಿದ್ದು, ಬೆಂಗಳೂರು ಹವಾಮಾನ ಅನುಕೂಲಕರವಾಗಿದೆ, ನಗರದಲ್ಲಿ 25 ಲಕ್ಷ ಐಟಿ ಪರಿಣಿತರಿದ್ದಾರೆ, ನಮ್ಮಲ್ಲಿನ ಮಾನವ ಸಂಪನ್ಮೂಲ ಬೇರೆಲ್ಲೂ ಇಲ್ಲ, ಸಮ್ಮೇಳನದಲ್ಲಿ ಭವಿಷ್ಯದ ಕುರಿತು ಚರ್ಚಿಸಲಾಗುವುದು. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೊದಲ ದಿನದಿಂದ ಎಲ್ಲಾ ಕ್ಷೇತ್ರಗಳಿಗೆ ಪ್ರತ್ಯೇಕ ನೀತಿ ರೂಪಿಸಿ, ಪ್ರೋತ್ಸಾಹ ನೀಡಲಾಗುತ್ತಿದೆ. ರಸ್ತೆಗಳ ದುರಸ್ತಿಗೆ ಹಲವು ಕಂಪೆನಿಗಳು ಮೆಚ್ಚುಗೆ ವ್ಯಕ್ತಪಡಿಸುತ್ತಿವೆ. ಟೀಕೆ ಮಾಡಿದರೂ ಸ್ವಾಗತ, ಹೊಗಳಿದರೂ ಸ್ವಾಗತ, ಜನಸೇವೆಗೆ ಮೊದಲ ಆದ್ಯತೆ ಎಂದರು.

ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನೋಟಿಸ್

ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ, ಆಕ್ಷೇಪಣೆ ಸಲ್ಲಿಸುವಂತೆ ಸರ್ಕಾರದ ಪರ ವಕೀಲರಿಗೆ ನಿರ್ದೇಶಿಸಿತು. ವಿಚಾರಣೆಯನ್ನು ಡಿಸೆಂಬರ್ 11ಕ್ಕೆ ಮುಂದೂಡಲಾಗಿದೆ. ಕಲಬುರಗಿ ಜಿಲ್ಲೆ ಶಹಬಾದ ತಾಲೂಕಿನ ವಾಡಿ ಪುರಸಭೆಯ ಅವಧಿ 2020ರ ನವೆಂಬರ್ 11ರಂದು ಮತ್ತು ಬಾಗಲಕೋಟೆ ಜಿಲ್ಲೆ ಮಹಾಲಿಂಗಪುರ ಪುರಸಭೆ ಅವಧಿ ಇದೇ ವರ್ಷದ ಸೆಪ್ಟಂಬರ್‌ನಲ್ಲಿ ಕೊನೆಗೊಂಡಿದೆ. ಅಕ್ಟೋಬರ್‌ನಲ್ಲಿ 59 ನಗರ ಸ್ಥಳೀಯ ಸಂಸ್ಥೆಗಳ ಅವಧಿ ಮುಗಿದಿದೆ. ಉಳಿದ 126 ನಗರ ಸ್ಥಳೀಯ ಸಂಸ್ಥೆಗಳ ಅವಧಿ ನವೆಂಬರ್ ಮತ್ತು ಡಿಸೆಂಬರ್‌ಗೆ ಅಂತ್ಯವಾಗಲಿದೆ ಎಂದು ಅರ್ಜಿಯಲ್ಲಿ ತಿಳಿಸಲಾಗಿದೆ.

ಇವೆಲ್ಲವುಗಳಿಗೆ ಮೀಸಲಾತಿ ನಿಗದಿಪಡಿಸುವಂತೆ ಈ ವರ್ಷದ ಜನವರಿ ಮತ್ತು ಜೂನ್ ತಿಂಗಳಲ್ಲಿ ಸರ್ಕಾರಕ್ಕೆ ಪತ್ರ ಬರೆದು ಮನವಿ ಮಾಡಲಾಗಿತ್ತು. ಆದರೆ, ಈವರೆಗೂ ಪ್ರಯೋಜನವಾಗಿಲ್ಲ. ಚುನಾವಣೆ ವಿಳಂಬವಾದರೆ ಆಡಳಿತಾಧಿಕಾರಿಗಳ ನೇಮಕವಾಗಲಿದೆ. ಸಕಾಲಕ್ಕೆ ಚುನಾವಣೆ ನಡೆಸದಿರುವುದು ಸಂವಿಧಾನದ 243–ಯು ವಿಧಿ ಉಲ್ಲಂಘನೆಯಾಗಲಿದೆ, ಚುನಾವಣೆ ವಿಳಂಬವಾದರೆ ಸರಕಾರವು ಆಡಳಿತಾಧಿಕಾರಿ ನೇಮಕ ಮಾಡಲಿದೆ. ಇದು ಪ್ರಜಾಪ್ರಭುತ್ವ ವಿರೋಧಿ ನಡೆಯಾಗಲಿದೆ ಎಂದು ಆಯೋಗ ತನ್ನ ಅರ್ಜಿಯಲ್ಲಿ ಹೇಳಿದೆ.

ಸಿಎಂ ಆಗಿ ನಾಳೆ ನಿತೀಶ್ ಪ್ರಮಾಣ

ಇಂದು ನಿತೀಶ್ ರಾಜೀನಾಮೆ: ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಬುಧವಾರ ತಮ್ಮ ರಾಜೀನಾಮೆ ಪತ್ರವನ್ನು ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅವರಿಗೆ ಸಲ್ಲಿಸಲಿದ್ದಾರೆ. ಇದೇ ದಿನ ಬಿಹಾರದ 17ನೇ ವಿಧಾನಸಭೆಯು ವಿಸರ್ಜನೆಗೊಳ್ಳಲಿದೆ ಎಂದು ಮೂಲಗಳು ತಿಳಿಸಿವೆ. ಜೆಡಿಯು ಮತ್ತು ಬಿಜೆಪಿ ಬುಧವಾರ ತಮ್ಮ ಶಾಸಕಾಂಗ ಪಕ್ಷದ ನಾಯಕರನ್ನು ಆಯ್ಕೆ ಮಾಡಲಿವೆ ಎಂದು ಹೇಳಿವೆ.

ಸ್ಪೀಕರ್ ಸ್ಥಾನಕ್ಕೆ ಲಾಭಿ: ಸಚಿವ ಸ್ಥಾನ ಮತ್ತು ಸ್ಪೀಕರ್ ಸ್ಥಾನದ ಬಗ್ಗೆ ಎನ್‌ಡಿಎ ಮಿತ್ರಪಕ್ಷಗಳಲ್ಲಿ ಭಾರಿ ಲಾಬಿ ನಡೆಯುತ್ತಿದೆ. ಬಿಜೆಪಿ ಮತ್ತು ಜೆಡಿಯು ಪಕ್ಷಗಳೆರಡೂ ಸ್ಪೀಕರ್ ಸ್ಥಾನಕ್ಕೆ ಪಟ್ಟು ಹಿಡಿದಿವೆ ಎಂದು ಮೂಲಗಳು ತಿಳಿಸಿವೆ ಜೆಡಿಯುನ ವಿಜಯ್ ಚೌಧರಿ ಮತ್ತು ಬಿಜೆಪಿಯ ಪ್ರೇಮ್ ಕುಮಾರ್ ಸ್ಪೀಕರ್ ಹುದ್ದೆಯ ಆಕಾಂಕ್ಷಿಗಳಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

ವೇತನ ಪರಿಷ್ಕರಣೆ ಬಗ್ಗೆ ಶೀಘ್ರ ಸಭೆ

ಅವರು ಅಧಿವೇಶನಕ್ಕೂ ಮೊದಲೇ ಸಭೆ ನಡೆಸುವ ಸಂಬಂಧ ಮುಖ್ಯಮಂತ್ರಿ ಅವರ ಗಮನಕ್ಕೆ ತರುತ್ತೇನೆ ಎಂದು ತಿಳಿಸಿದ್ದಾರೆ ಎಂದು ಸುದ್ದಿಗಾರರಿಗೆ ಮಂಗಳವಾರ ಪ್ರತಿಕ್ರಿಯಿಸಿದರು. ಸಚಿವ ಸಂಪುಟ ವಿಸ್ತರಣೆ ಬಗ್ಗೆ ನನಗೆ ಏನೂ ಗೊತ್ತಿಲ್ಲ. ಕಬ್ಬಿನ ದರ ಸೇರಿ ವಿವಿಧ ವಿಷಯಗಳ ಬಗ್ಗೆ ಮಾತನಾಡಲು ಪ್ರಧಾನ ಮಂತ್ರಿ ಅವರನ್ನು ಭೇಟಿ ಮಾಡಲು ಸಿದ್ದರಾಮಯ್ಯ ಅವರು ದೆಹಲಿಗೆ ತೆರಳಿದ್ದರು. ಆ ಸಂದರ್ಭದಲ್ಲಿ ಎಐಸಿಸಿ ಅಧ್ಯಕ್ಷರನ್ನು ಭೇಟಿ ಮಾಡುವುದು ವಾಡಿಕೆ. ಏನೇನು ಮಾತುಕತೆ ನಡೆದಿದೆ ಎಂಬುದು ನನಗೆ ಗೊತ್ತಿಲ್ಲ. ಪತ್ರಿಕೆಗಳಲ್ಲಿ ಬಂದಿರುವ ಸುದ್ದಿಯನ್ನು ಓದಿದ್ದೇನೆ ಅಷ್ಟೆ ಎಂದರು.

ಬಲಿ ಪಡೆದಿದ್ದ ಹೆಣ್ಣು ಹುಲಿ ಸೆರೆ

ಆದರೂ ಪಣತೊಟ್ಟು ಹುಲಿಯನ್ನು ಸೆರೆ ಹಿಡಿಯುವ ಮೂಲಕ ಸ್ಥಳೀಯರಲ್ಲಿದ್ದ ಆತಂಕ ನಿವಾರಿಸಿದ್ದಾರೆ.

ಮೊದಲು ತಾಯಿ, ಆ ನಂತರ ಮರಿ: ಕಳೆದ ರಾತ್ರಿ ಥರ್ಮಲ್ ಡ್ರೋನ್‌ನಲ್ಲಿ ಗೋಚರಿಸಿದ್ದ ತಾಯಿ ಹುಲಿ ಮೇಲೆ ಅರಣ್ಯ ಸಿಬ್ಬಂದಿ ನಿಗಾ ಇಟ್ಟಿದ್ದರು. ಸಾಕಾನೆಗಳಾದ ಮಹೇಂದ್ರ, ಭೀಮಾ, ಸುಗ್ರೀವ, ಪ್ರಶಾಂತ ಆನೆಗಳೊಂದಿಗೆ ಕಾರ್ಯಾ ಚರಣೆ ಮುಂದುವರೆಸಿ, ಕೊನೆಗೂ ಮುಂಜಾನೆ ಪಶುವೈದ್ಯ ಡಾ.ವಾಸಿಮ್ ಮಿರ್ಜಾ ಅವರು ಅರವಳಿಕೆ ಚುಚ್ಚು ಮದ್ದು ನೀಡಿದ್ದಾರೆ.

ಹುಲಿ ಮಂಪರಿಗೆ ಜಾರಿ ನೆಲಕ್ಕೆ ಒರಗುತ್ತಿದ್ದಂತೆ, ಅದಕ್ಕೆ ಬಲೆ ಹಾಕಿ. ಅದನ್ನು ಸೆರೆ ಹಿಡಿಯಲಾಯಿತು. ನಂತರ ವಾಹನದೊಳಗೆ ಹುಲಿ ಇದ್ದ ಬೋನ್ ಅನ್ನು ಸುರಕ್ಷಿತವಾಗಿಟ್ಟ ನಂತರ ಅದನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲಾಯಿತು.

ತಾಯಿ ಹುಲಿ ಸೆರೆ ಸಿಗುತ್ತಿದ್ದಂತೆಯೇ ಮರಿಗಳ ರಕ್ಷಣೆಗೆ ಕೂಂಬಿಂಗ್ ನಡೆಸ ಲಾಯಿತು. ಮೊದಲೇ ಡ್ರೋನ್ ಮೂಲಕ ಮರಿಗಳಿದ್ದ ಪೊದೆಯನ್ನು ಗುರುತಿಸಿದ್ದ ರಿಂದ ಕೂಂಬಿಂಗ್ ತಂಡ ಸಿಎಫ್ ಎಸ್.ಪ್ರಭಾಕರನ್ ಅವರ ನೇತೃತ್ವದಲ್ಲಿ ಸ್ಥಳಕ್ಕೆ ತೆರಳಿ ಪೊದೆಯಲ್ಲಿ ಅಡಗಿದ್ದ ಮೂರು ಮರಿಗಳನ್ನು ಸುರಕ್ಷಿತವಾಗಿ ರಕ್ಷಣೆ ಮಾಡಿ, ಬಾಕ್ಸ್‌ನಲ್ಲಿಟ್ಟು ಸ್ಥಳಾಂ ತರಿಸಲಾಯಿತು. ಕಾರ್ಯಾಚರಣೆಯಲ್ಲಿ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಎಸ್.ಪ್ರಭಾಕರನ್, ಹೆಡಿಯಾಲ ಎಸಿಎಫ್ ಡಿ.ಪರಮೇಶ್, ನುಗು ಆರ್‌ಎಫ್‌ಓ ಅನಿತಾರಾಜ್, ಎಎಮ್ ಗುಡಿ (ಕಲ್ಕರೆ) ಆರ್‌ಎಫ್‌ಓ ರಾಜೇಶ್, ಎಸ್‌ಟಿಪಿಎಫ್ ಸಿಬ್ಬಂದಿ, ಬಂಡೀಪುರದ ವಿವಿಧ ವಲಯಗಳ ಸಿಬ್ಬಂದಿ ಪಾಲ್ಗೊಂಡಿದ್ದರು.

ಜನ್ಮ ನೀಡಿರುವುದು ವಿಶೇಷ

ಜನ್ಮ ನೀಡಿ, ಆರೈಕೆ ಮಾಡುತ್ತಿದ್ದ ತಾಯಿ ಹುಲಿ ಅ.26ರಂದು ಆಕಸ್ಮಿಕವಾಗಿ ಮರಿಗಳ ಬಳಿ ಬಂದಿದ್ದ ರೈತ ರಾಜಶೇಖರ್ ಎಂಬುವರ ಮೇಲೆ ದಾಳಿ ನಡೆಸಿ ಬಲಿ ಪಡೆದಿತ್ತು. ಹುಲಿ ಸೆರೆಗೆ ಕಾರ್ಯಾ ಚರಣೆ ನಡೆಸುತ್ತಿದ್ದ ವೇಳೆ ರಾಜಶೇಖರ್ ಅವರ ಮೃತ ದೇಹ ಸಿಕ್ಕಿದ ಸ್ಥಳದಿಂದ 500 ಮೀಟರ್ ಅಂತರದಲ್ಲಿದ್ದ ಪೊದೆಯಲ್ಲಿ 45 ದಿನಗಳ ಎರಡು ಗಂಡು ಮರಿ ಗಳಿದ್ದು, ಅವುಗಳನ್ನು ರಕ್ಷಣೆ ಮಾಡಿ ಬನ್ನೇರುಘಟ್ಟಕ್ಕೆ ರವಾನಿಸಲಾಗಿತ್ತು. ಅಲ್ಲಿ ಆ ಮರಿಗಳು ಚೇತರಿಸಿಕೊಂಡಿವೆ.

ಎರಡು ಮರಿ ರಕ್ಷಿಸಲ್ಪಟ್ಟ ದಿನವೇ ಇನ್ನೆರಡು ಮರಿ ಇರಬಹುದೆಂಬ ಶಂಕೆ ವ್ಯಕ್ತವಾಗಿತ್ತು. ರೈತ ರಾಜಶೇಖರ್ ಮೇಲೆ ದಾಳಿ ನಡೆದ ಹಿನ್ನೆಲೆಯಲ್ಲಿ ಸ್ಥಳದಲ್ಲಿ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ನೆರೆದಿದ್ದರಿಂದ ಘಾಸಿಗೊಂಡ ಹುಲಿ ತನ್ನ ಮೂರು ಮರಿಗಳನ್ನು ಎತ್ತಿಕೊಂಡು ಸ್ಥಳ ಬದಲಿಸಿತ್ತು. ಇನ್ನೆರಡು ಮರಿಗಳನ್ನು ಸ್ಥಳಾಂತರಿಸುವ ವೇಳೆಗೆ ಕೂಂಬಿಂಗ್ ಕಾರ್ಯಾಚರಣೆ ಆರಂಭವಾಗಿದ್ದರಿಂದ ಎರಡು ಮರಿ ತೊರೆದು ಪರಾರಿಯಾಗಿತ್ತು.

ಎರಡು ದಿನದ ಹಿಂದಷ್ಟೇ ಥರ್ಮಲ್ ಡ್ರೋನ್‌ನಲ್ಲಿ ಪರಿಶೀಲಿಸಿದಾಗ ಮರಿಗಳು ಆಟವಾಡುತ್ತಿರುವ ದೃಶ್ಯ ಕಂಡು ಬಂದಿತ್ತು. ಈ ಹಿನ್ನೆಲೆಯಲ್ಲಿ ಕಳೆದ ರಾತ್ರಿ ನಡೆಸಿದ ಕಾರ್ಯಾಚರಣೆಯಲ್ಲಿ ತಾಯಿ ಹುಲಿ ಸೆರೆ ಹಿಡಿದ ನಂತರ ಮರಿಗಳಿದ್ದ ಸ್ಥಳ ಪರಿಶೀಲಿಸಿದಾಗ ಮತ್ತೆ ಮೂರು ಮರಿ ಸಿಕ್ಕಿವೆ. ಈ ಹುಲಿ ಎರಡು ಹೆಣ್ಣು ಮರಿ, ಮೂರು ಗಂಡು ಮರಿಗೆ ಜನ್ಮ ನೀಡಿದೆ. ಈ ಭಾಗದಲ್ಲಿ ವಿಶೇಷ ಪ್ರಕರಣವಾಗಿದೆ.

ಕೋರ್ಟ್ ಸಮನ್ಸ್

ಮೇಲಿದೆ. ಸಹಾಯ ಕೇಳಿ ಬಂದಾಗ ಯಡಿಯೂರಪ್ಪನವರು ಮಗಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂದು ಆರೋಪಿಸಿ ಮಾರ್ಚ್ 2024ರಲ್ಲಿ ಬಾಲಕಿಯ ತಾಯಿ ದೂರು ನೀಡಿದ್ದರು.

ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆಯಡಿ ಬೆಂಗಳೂರಿನ ಸದಾಶಿವನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಪ್ರಕರಣದ ಗಂಭೀರತೆ ಪರಿಗಣಿಸಿ ಸರ್ಕಾರವು ಸಿಐಡಿಗೆ ವರ್ಗಾವಣೆ ಮಾಡಿತ್ತು. ಸಾಕ್ಷ್ಯ ನಾಶಪಡಿಸಿದ ಮತ್ತು ಪ್ರಕರಣವನ್ನು ಮುಚ್ಚಿಹಾಕಲು ಯತ್ನಿಸಿದ ಆರೋಪಗಳ ಮೇಲೆ ಯಡಿಯೂರಪ್ಪ ಮತ್ತು ಅವರ ಮೂವರು ಸಹಾಯಕರ ವಿರುದ್ಧ ಜೂನ್ 2024ರಲ್ಲಿ ಸಿಐಡಿ 750 ಪುಟಗಳ ಚಾರ್ಜ್‌ಶೀಟ್ ಸಲ್ಲಿಸಿದೆ. ಈ ಪ್ರಕರಣದಲ್ಲಿ ದೂರು ನೀಡಿದ್ದ ಬಾಲಕಿಯ ತಾಯಿ ಮತ್ತು ಆ ಬಾಲಕಿ ಇಬ್ಬರೂ ಈಗಾಗಲೇ ಮ್ಯಾಜಿಸ್ಟ್ರೇಟ್ ಮುಂದೆ ಹೇಳಿಕೆಯನ್ನು ದಾಖಲಿಸಿದ್ದಾರೆ. ಬಾಲಕಿಯ ತಾಯಿ ಮೇ 26, 2024 ರಂದು ನಿಧನರಾದರು.

ಕಡೆ ಕಾರ್ತಿಕ ಮಾಸದ ವಿಶೇಷ ಪೂಜೆ...



ಮೈಸೂರು ನಗರದ ಸುಣ್ಣದಕೇರಿಯಲ್ಲಿರುವ ಶ್ರೀ ಮಲೆ ಮಹದೇಶ್ವರ ದೇವಸ್ಥಾನದಲ್ಲಿ ಭಕ್ತರ ಸಮ್ಮುಖದಲ್ಲಿ ಅಗ್ನಿ ಕೊಂಡೋತ್ಸವಕ್ಕೆ ವಿಧಾನಪರಿಷತ್ ಮಾಜಿ ಸದಸ್ಯ ಸಂದೇಶ್ ನಾಗರಾಜ್ ಚಾಲನೆ ನೀಡಿದರು. ಈ ವೇಳೆ ಚಿತ್ರ ನಿರ್ಮಾಪಕ, ಖ್ಯಾತ ಉದ್ಯಮಿ ಎನ್.ಸಂದೇಶ್, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ವಿಧಾನಪರಿಷತ್ ಮಾಜಿ ಸದಸ್ಯ ಸಿದ್ದರಾಜು, ಪಾಲಿಕೆ ಮಾಜಿ ಸದಸ್ಯ ಲೋಕೇಶ್ ಪಿಯಾ, ಸತೀಶ್, ವಿಜಯ್ ಬಲರಾಮ್, ರವಿ, ಸಚಿನ್, ಶೇಖರ್ ಇತರರಿದ್ದರು.

ಆಯುರ್ವೇದ ಔಷಧಿಗಳ ರಫ್ತಿನಲ್ಲಿ ಜಾಗತಿಕ ಮಟ್ಟದಲ್ಲಿ ಭಾರತಕ್ಕೆ ಅಗ್ರಸ್ಥಾನ

ಸಿಸಿಆರ್ ಎಎಸ್ ಡೆಪ್ಯುಟಿ ಡೈರೆಕ್ಟರ್ ಜನರಲ್ ಡಾ.ಎನ್.ಶ್ರೀಕಾಂತ್ ಮಾಹಿತಿ

ಮೈಸೂರು,ನ.18(ಬಿಎಲ್‌ಯು)–ಆಯುರ್ವೇದ ಔಷಧಗಳ ರಫ್ತಿನಲ್ಲಿ ಭಾರತ ಜಾಗತಿಕ ಮಟ್ಟದಲ್ಲಿ ಅಗ್ರಸ್ಥಾನ ಪಡೆದಿದೆ ಎಂದು ಕೇಂದ್ರ ಸರ್ಕಾರದ ಆಯುರ್ವೇದ ವಿಜ್ಞಾನ ಸಂಶೋಧನಾ ಕೇಂದ್ರ ಮಂಡಳಿ (ಸಿಸಿಆರ್ ಎಎಸ್) ಯ ಡೆಪ್ಯುಟಿ ಡೈರೆಕ್ಟರ್ ಜನರಲ್ ಡಾ.ಎನ್.ಶ್ರೀಕಾಂತ್ ತಿಳಿಸಿದರು.

ಮೈಸೂರಿನ ವಿಜಯನಗರದ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನ ಸಭಾಂಗಣದಲ್ಲಿ ಇಂದು 10ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಟೆಕ್ನೊ ಆಯುರ್ವೇದ ಕುರಿತ ರಾಷ್ಟ್ರೀಯ ಸಮ್ಮೇಳನದಲ್ಲಿ ವೀಡಿಯೊ ಕಾನ್ಫರೆನ್ಸ್ ಮೂಲಕ ಮಾತಾಡಿದ ಅವರು, ಆಯುರ್ವೇದ ಔಷಧಿಯ ಜನ್ಮ ಸ್ಥಳವಾದ ಭಾರತದ ಆಯುರ್ವೇದ ಪದ್ಧತಿಯ ಮಹತ್ವ ಇಡೀ ವಿಶ್ವಕ್ಕೆ ತಿಳಿದಿದೆ ಎಂದು ಹೇಳಿದರು.

ಭಾರತ ಶೇಕಡ 80ರಷ್ಟು ಆಯುರ್ವೇದ ಔಷಧಗಳನ್ನು ವಿಶ್ವದ ಬಹುತೇಕ ರಾಷ್ಟ್ರಗಳಿಗೆ ರಫ್ತು ಮಾಡುತ್ತಿದ್ದರೆ, ಚೀನಾ ಶೇಕಡ 20ರಷ್ಟು ಮಾತ್ರ ರಫ್ತು ಮಾಡುತ್ತಿದೆ. ಈ ಮೂಲಕ ಆಯುರ್ವೇದ ರಫ್ತಿನಲ್ಲಿ ಭಾರತ ಜಾಗತಿಕ ಮಟ್ಟದಲ್ಲಿ ಮೊದಲ ಸ್ಥಾನದಲ್ಲಿದೆ ಎಂದು ಡಾ.ಶ್ರೀಕಾಂತ್ ಅಂಕಿ ಅಂಶಗಳ ಸಹಿತ ವಿವರಣೆ ನೀಡಿದರು.

ಕಳೆದ ಎರಡು ದಶಕಗಳಿಂದ ಭಾರತದ ಆಯುರ್ವೇದ ಔಷಧಗಳಿಗೆ ಬೇಡಿಕೆ ಹೆಚ್ಚಾಗಿದೆ. ಆಯುರ್ವೇದ ಚಿಕಿತ್ಸೆ ಪಡೆಯಲು ವಿಶ್ವದ ಬಹುತೇಕ ರಾಷ್ಟ್ರಗಳ ಜನರು ಭಾರತಕ್ಕೆ ಆಗಮಿಸುತ್ತಿದ್ದಾರೆ. ಈ ಹಿನ್ನೆಲೆ ಭಾರತದ ಹೆಲ್ತ್ ಟ್ಯೂರಿಸಂ ದಿನ ಕಳೆದಂತೆ ಹೆಚ್ಚು ಹೆಚ್ಚು ಮಹತ್ವ ಪಡೆಯುತ್ತಿದೆ ಎಂದು ಹೇಳಿದರು.

ಆಲೋಪತಿಯಲ್ಲಿ ಪಡೆಯುವ ಔಷಧಿಗಳಲ್ಲಿ ಡೋಸೆಜ್ ಇರುತ್ತದೆ. ಅಲ್ಲದೆ ಅಡ್ಡ ಪರಿಣಾಮಗಳಿರುತ್ತವೆ. ಆದರೆ ಆಯುರ್ವೇದದಲ್ಲಿ ಆಲೋಪತಿಯಂತೆ ಡೋಸೆಜ್ ಇರುವುದಿಲ್ಲ. ರೋಗ ಗುಣವಾಗುವುದು ನಿಧಾನವಾದರೂ ಶಾಶ್ವತವಾಗಿ ದೂರವಾಗುತ್ತದೆ. ಇದರ ಮಹತ್ವ ಅರಿತಿರುವ ವಿದೇಶಿಯರು ಭಾರತಕ್ಕೆ ಹೆಚ್ಚಾಗಿ ಬರುತ್ತಿದ್ದು, ಹೆಲ್ತ್ ಟ್ಯೂರಿಸಂ ಕ್ಷೇತ್ರ ಬೆಳವಣಿಗೆ ಸಾಧಿಸುತ್ತಿದೆ ಎಂದು ಅತೀವ ಮೆಚ್ಚುಗೆ ವ್ಯಕ್ತಪಡಿಸಿದರು.

ಆಯುರ್ವೇದ ಪ್ರಾಚೀನ ಪದ್ಧತಿಯಾದರೂ ಆಧುನಿಕ ತಂತ್ರಜ್ಞಾನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಆವಿಷ್ಕಾರಗಳು ನಡೆಯುತ್ತಿವೆ. ಪ್ರಾಚೀನ ಕಾಲದ ಆಯುರ್ವೇದ ವಿಚಾರಗಳನ್ನು ಡಿಜಿಟಲ್ ಟೆಕ್ನಾಲಜಿಯಲ್ಲಿ ಸಂಗ್ರಹಿಸಬೇಕಾಗಿದೆ. ಇದರಿಂದ ಇಂಜಿನಿಯರಿಂಗ್‌ನಲ್ಲಿ ಎಐ ಆಧಾರಿತ ಡಾಟಾ ಬೇಸ್‌ನಲ್ಲಿ ಆಯುರ್ವೇದ ವಿಚಾರಕ್ಕೆ ಸಂಬಂಧಿಸಿದಂತೆ ಬಹಳಷ್ಟು ಮಾಹಿತಿಗಳನ್ನು ಕಲೆ ಹಾಕಬೇಕಾಗಿದೆ ಎಂದರು. ಕುವೆಂಪು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಚಿದಾನಂದಗೌಡ ಕಾರ್ಯಾಗಾರ ಉದ್ಘಾಟಿಸಿದರು. ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಕಾರ್ಯದರ್ಶಿ ಪಿ.ವಿಶ್ವನಾಥ್, ಕಾಲೇಜಿನ ಪ್ರಾಂಶುಪಾಲ ಡಾ.ಬಿ.ಸದಾಶಿವೆಗೌಡ, ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರದ ಸಹಾಯಕ ನಿರ್ದೇಶಕ ಡಾ.ಲಕ್ಷ್ಮಿನಾರಾಯಣ ಶಣ್ಯೆ, ಪತ್ರಕರ್ತ ಅಂಶಿಪ್ರಸನ್ನಕುಮಾರ್ ಕಾರ್ಯಕ್ರಮದಲ್ಲಿ ಹಾಜರಿದ್ದರು.



ಮೈಸೂರಿನ ವಿಜಯನಗರದ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನ ಸಭಾಂಗಣದಲ್ಲಿ ಮಂಗಳವಾರ 10ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಟೆಕ್ನೊ ಆಯುರ್ವೇದ ಕುರಿತ ರಾಷ್ಟ್ರೀಯ ಸಮ್ಮೇಳನವನ್ನು ಕುವೆಂಪು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಕೆ.ಚಿದಾನಂದಗೌಡ ಉದ್ಘಾಟಿಸಿದರು.

ಡಿ ಪಾಲ್ ಕಾಲೇಜು ಸಂಶೋಧನಾ ಕೇಂದ್ರ ಉದ್ಘಾಟನೆ

ಮೈಸೂರು, ನ. 18–ಮೈಸೂರಿನ ಡಿ ಪಾಲ್ ಕಾಲೇಜಿನಲ್ಲಿ ಡಿ ಪಾಲ್ ಸಂಶೋಧನಾ ಕೇಂದ್ರವನ್ನು ಕಾಲೇಜು ಮಂಡಳಿ ಕೊಠಡಿಯಲ್ಲಿ ಮಂಡ್ಯ ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊ.ಕೆ.ಶಿವಚಿತ್ತಪ್ಪ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಉನ್ನತ ಶಿಕ್ಷಣದಲ್ಲಿ ಸಂಶೋಧನೆಗೆ ಹೆಚ್ಚುತ್ತಿರುವ ಮಹತ್ವವನ್ನು ಎತ್ತಿ ತೋರಿಸಿದರು. ಅಧ್ಯಾಪಕರು ಮತ್ತು ವಿದ್ವಾಂಸರಲ್ಲಿ ಕಠಿಣ ಪಾಂಡಿತ್ಯ, ಮುಂದುವರಿದ ಅಧ್ಯಯನ ಮತ್ತು ನಾವೀನ್ಯತೆಯನ್ನು ಉತ್ತೇಜಿಸಲು ಮೀಸಲಾದ ಕೇಂದ್ರವನ್ನು ಸ್ಥಾಪಿಸಿದ್ದಕ್ಕಾಗಿ ಅವರು ಡಿ ಪಾಲ್ ಕಾಲೇಜನ್ನು ಶ್ಲಾಘಿಸಿದರು.

ಅಕಾಡೆಮಿಕ್ಸ್‌ನ ಉಪಪ್ರಾಂಶುಪಾಲರಾದ ಡಾ.ಲಿಸಿ ಕೆ.ಜಿ. ಮಾತನಾಡಿದರು. ಡಿ ಪಾಲ್ ಕಾಲೇಜಿನ ಪ್ರಾಂಶುಪಾಲ ರೆವರೆಂಡ್ ಡಾ.ಬೈಜು ಆಂಟನಿ ಸ್ವಾಗತಿಸಿದರು.



ಮೈಸೂರಿನ ಡಿ ಪಾಲ್ ಕಾಲೇಜಲ್ಲಿ ಡಿ ಪಾಲ್ ಸಂಶೋಧನಾ ಕೇಂದ್ರವನ್ನು ಕಾಲೇಜು ಮಂಡಳಿ ಕೊಠಡಿಯಲ್ಲಿ ಮಂಡ್ಯ ವಿಶ್ವವಿದ್ಯಾನಿಲಯದ ಉಪಕುಲಪತಿ ಪ್ರೊ.ಕೆ .ಶಿವಚಿತ್ತಪ್ಪ ಉದ್ಘಾಟಿಸಿದರು.

ಮೈಸೂರಿನ ಮಹಾರಾಜ ಕಾಲೇಜಿನ ಮನೋವಿಜ್ಞಾನ ವಿಭಾಗದ ಮುಖ್ಯಸ್ಥ ಪ್ರೊ. ಲ್ಯಾನ್ಸಿ ಡಿ'ಸೋಜಾ ಅವರು ಶೈಕ್ಷಣಿಕ ಶ್ರೇಷ್ಠತೆಯಲ್ಲಿ ಸಂಶೋಧನಾ ವಿಧಾನ ಮತ್ತು ವ್ಯವಸ್ಥಿತ ವಿಚಾರಣೆಯ ಮಹತ್ವದ ಕುರಿತು ಮಾತನಾಡಿದರು. ಮಂಡ್ಯ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯ ಪ್ರೊ.ನಾಗರಾಜು, ಡಿ ಪಾಲ್, ವಿನ್ಸೆಂಟಿಯನ್ ಸೊಸೈಟಿ–ದಕ್ಷಿಣ ಪ್ರಾಂತ್ಯದ ಉಪಾಧ್ಯಕ್ಷ ರೆವರೆಂಡ್ ಫಾದರ್ ಸನ್ನಿ ಕುರಿಯನ್, ವೈಸ್ ಪ್ರಿನ್ಸಿಪಾಲ್ ರೆವರೆಂಡ್ ಡಾ.ಶಿಜೊ ಆಂಟನಿ ಸಿಎಂ, ಐಕ್ಯೂಎಸಿ ಸಂಯೋಜಕ ಜೋಶಿ ಪಿ.ಜೆ ಸೇರಿದಂತೆ ಹಲವಾರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ನಿರಂತರ ಕಲೆಮನೆ ಉತ್ಸವ

ಮೈಸೂರು: ಕುಮಾರ್ ಪ್ರದರ್ಶಕ ಕಲೆಗಳ ಕೇಂದ್ರವು ಕಲೆಮನೆ ಸಭಾಂಗಣದಲ್ಲಿ ನ.23ರಂದು ಮಧ್ಯಾಹ್ನ 3 ಗಂಟೆಗೆ 65ನೇ ಅಂತರರಾಷ್ಟ್ರೀಯ ನಿರಂತರ ಕಲೆಮನೆ ಉತ್ಸವ ಹಮ್ಮಿಕೊಳ್ಳಲಾಗಿದೆ. ಉತ್ಸವದಲ್ಲಿ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಡಾ.ನಾಗರಾಜ್ ವಿ.ಬೈರಿ, ಡಾ.ಜ್ಯೋತಿ ಶಂಕರ್, ಬಿ.ಕೆ.ಮೀನಾಕ್ಷಿ ಅವರಿಗೆ ಕಲೆಮನೆ ಕಲಾಶ್ರೀ ಪ್ರಶಸ್ತಿ ಪ್ರದಾನ ಮಾಡಲಾಗುವುದು. ವಿದ್ವಾನ್ ಹರೀಶ್‌ರಾಮನ್ ತಂಡದಿಂದ ಭರತನಾಟ್ಯ, ನಾದವಪುಷ ಸಂಗೀತ ಶಾಲೆಯಿಂದ ಕನ್ನಡ ಗೀತೆಗಳ ಗಾಯನ, ಸವಿಗಾನ ಸಂಗೀತ ಶಾಲೆಯಿಂದ ಲಘು ಶಾಸ್ತ್ರೀಯ ಸಂಗೀತ, ಸಚ್ಚಿದಾನಂದ ಆರ್ಟ್ಸ್ ಫೌಂಡೇಶನ್‌ನಿಂದ ಭರತನಾಟ್ಯ, ಅಪೇಕ್ಷ ಕಾಮತ್‌ರಿಂದ ಭರತನಾಟ್ಯ ಪ್ರದರ್ಶನವಿದೆ.

ಹವ್ಯಾಸಿ ಕರೋಕೆ ಗಾಯಕರಿಗೆ ಸ್ಪರ್ಧೆ; ವಿಜೇತರಿಗೆ ನಗದು ಬಹುಮಾನ

ಮೈಸೂರು, ನ.18(ಜಿಎ)– ಬಿಲ್ಡರ್ ಅಸೋಸಿಯೇಷನ್ ಆಫ್ ಇಂಡಿಯಾದ ಮೈಸೂರು ಘಟಕದ ವತಿಯಿಂದ ಹವ್ಯಾಸಿ ಕರೋಕೆ ಗಾಯಕರಿಗೆ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ಡಿ.11ರಿಂದ 5 ದಿನಗಳ ಕಾಲ ಮಹಾರಾಜ ಕಾಲೇಜು ಮೈದಾನದಲ್ಲಿ ಆಯೋಜಿಸುತ್ತಿರುವ ಮೈ ಬಿಲ್ಡ್ ಎಕ್ಸ್ಪೋ ಬೆಳ್ಳಿ ಹಬ್ಬದ ಅಂಗವಾಗಿ ಅದೇ ಆವರಣದಲ್ಲಿ 30 ವರ್ಷ ಮೇಲ್ಪಟ್ಟ ಹವ್ಯಾಸಿ ಕರೋಕೆ ಗಾಯಕರಿಗೆ ಸ್ಪರ್ಧೆಯನ್ನು ಏರ್ಪಡಿಸಲಾಗಿದ್ದು, ಆಡಿಷನ್ ನ.30ರಂದು ಅಸೋಸಿಯೇಷನ್‌ನ ಎಂ.ಬಿ.ಸಿ.ಟಿ. ಸಭಾಂಗಣದಲ್ಲಿ ತೀರ್ಪುಗಾರರ ಉಪಸ್ಥಿತಿಯಲ್ಲಿ ಬೆಳಿಗ್ಗೆ 10:30ಕ್ಕೆ ಏರ್ಪಡಿಸಲಾಗಿದೆ. ವಿಜೇತರಿಗೆ ನಗದು ಬಹುಮಾನವಿದ್ದು, ಆಸಕ್ತಿಯುಳ್ಳವರು ನಿಮ್ಮ ಹೆಸರು, ದೂರವಾಣಿ ಸಂಖ್ಯೆ ಮತ್ತು ವಯಸ್ಸಿನ ವಿವರಗಳನ್ನು ನೀಡಿ ನ.28ರೊಳಗೆ ನೋಂದಾಯಿಸಬೇಕು. ಮೊದಲ 30 ಸ್ಪರ್ಧಿಗಳಿಗೆ ಮಾತ್ರ ಅವಕಾಶವಿರುತ್ತದೆ. ಕನ್ನಡ ಹಾಡುಗಳಿಗೆ ಮಾತ್ರ ಅವಕಾಶ. ಚಲನಚಿತ್ರಗೀತೆಗಳು ಅಥವಾ ಭಾವಗೀತೆಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ಶ್ರುತಿ ಪೆಟ್ಟಿಗೆ ಮತ್ತು ಕರೋಕೆ ಟ್ರ್ಯಾಕ್ ವ್ಯವಸ್ಥೆಯನ್ನು ನೀವೇ ಮಾಡಿಕೊಳ್ಳಬೇಕು. ನೋಂದಾಯಿಸಲು 9663977949, 9945248106 ಸಂಪರ್ಕಿಸಿ ಎಂದು ಸಾಂಸ್ಕೃತಿಕ ಸಮಿತಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ಉಚಿತ ಆರೋಗ್ಯ, ಕಣ್ಣಿನ ತಪಾಸಣಾ ಶಿಬಿರ ನಾಳೆ

ಮೈಸೂರು,ನ.18–ಆರೋಗ್ಯ ಭಾರತಿ, ಮೈಸೂರು ವಿಭಾಗದ ವತಿಯಿಂದ ನ.20ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 1ರವರೆಗೆ ವಿವೇಕ ಫಾರಂ, 199/3ಎ, ಸೆಂಟ್ ಜೋಸೆಫ್ ಸೆಂಟ್ರಲ್ ಸ್ಕೂಲ್ ಎದುರು, ಇಲವಾಲ ಇಲ್ಲಿ ಉಚಿತ ಆರೋಗ್ಯ ಮತ್ತು ಕಣ್ಣಿನ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ.

ಆರೋಗ್ಯ ಭಾರತಿ ಜಿಲ್ಲಾ ಗೌರವಾಧ್ಯಕ್ಷ ಪ್ರಾಣೇಶ್, ಜಿಲ್ಲಾಧ್ಯಕ್ಷ ಡಾ. ಮಹೇಶ್ ಕಾರ್ಯಕ್ರಮ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಕಾರ್ಯದರ್ಶಿ ಗಣೇಶ್, ಮೈಸೂರು ನಗರ ಯುವ ವ್ಯವಸ್ಥಾಪಕ ಗೋವಿಂದರಾಜು, ಜಿಲ್ಲಾ ಸಹ ಕಾರ್ಯದರ್ಶಿ ಕೃಷ್ಣ, ನಗರ ಕಾರ್ಯದರ್ಶಿ ನಿಗಿನ್, ಮಹಿಳಾ ಘಟಕ ನಗರ ಕಾರ್ಯದರ್ಶಿ ಶ್ರೀದೇವಿ, ಸಹ ಕಾರ್ಯದರ್ಶಿ ಶ್ರೀಮತಿ ಜಯಲಕ್ಷ್ಮಿ ಭಾಗವಹಿಸಲಿದ್ದಾರೆ. ಆರೋಗ್ಯ ಭಾರತಿ ಮೈಸೂರು ನಗರಾಧ್ಯಕ್ಷ ಲಕ್ಷ್ಮೀನಾರಾಯಣ್ ಅಧ್ಯಕ್ಷತೆ ವಹಿಸಲಿದ್ದಾರೆ.

ಸ್ವದೇಶಿ ಮನೆಯಿಂದ ಮನೆಗೆ ಸಂಕಲ್ಪ ಅಭಿಯಾನ



ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಪ್ರತಿ ಮನೆಯೂ ಸ್ವದೇಶಿ–ಮನೆ ಮನೆಯೂ ಸ್ವದೇಶಿ ಎಂಬ ಜನಜಾಗೃತಿ ಅಭಿಯಾನ ನಡೆಯಿತು.

ಮೈಸೂರು, ನ. 18– ಚಾಮುಂಡೇಶ್ವರಿ ಕ್ಷೇತ್ರದ ಸಂಕಲ್ಪ ಅಭಿಯಾನ ಕಾರ್ಯಕ್ರಮದ ಅಂಗವಾಗಿ ಪ್ರತಿ ಮನೆಯೂ ಸ್ವದೇಶಿ–ಮನೆ ಮನೆಯೂ ಸ್ವದೇಶಿ ಎಂಬ ಬೃಹತ್ ಜನಜಾಗೃತಿ ಅಭಿಯಾನದ ಭಾಗವಾಗಿ ಮನೆ–ಮನೆಗೆ ಸ್ಟಿಕ್ಕರ್ ಅಂಟಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವು ಬಿಜೆಪಿ ಪಕ್ಷದ ಸಂಘಟನಾತ್ಮಕ ದೃಢತೆಗೆ ಮತ್ತೊಂದು ಹೆಜ್ಜೆಯಾಗಿದ್ದು, ಸ್ವದೇಶಿ ಚಳವಳಿಯನ್ನು ಜನಮಟ್ಟದ ಮಟ್ಟಕ್ಕೇ ತಲುಪಿಸುವ ಗುರಿ ಹೊಂದಿದೆ. ಪಕ್ಷದ ಕಾರ್ಯಕರ್ತರು, ಪದಾಧಿಕಾರಿಗಳು, ಯುವ ಕಾರ್ಯಕರ್ತರು ಶಿಸ್ತಿನಿಂದ, ಏಕತೆಯಿಂದ ಹಾಗೂ ಘೋಷಣಾತ್ಮಕ ಉತ್ಸಾಹದ ಜೊತೆ ಕ್ಷೇತ್ರದ ಹಲವು ಬೀದಿಗಳಲ್ಲಿ ಮನೆ–ಮನೆಗೆ ಭೇಟಿ ನೀಡಿ ಸ್ಟಿಕ್ಕರ್ ಅಂಟಿಸುವ ಬೃಹತ್ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಈ ವೇಳೆ ಕ್ಷೇತ್ರದ ಅಧ್ಯಕ್ಷ ಪೈಲ್ವಾನ್ ಟಿ.ರವಿ ಮಾತನಾಡಿ, ಪಕ್ಷದ ಸಂಘಟನೆ ಶಕ್ತಿ ಮನೆಗಳಿಂದಲೇ ರೂಪುಗೊಳ್ಳುತ್ತದೆ. ನಮ್ಮ ಕ್ಷೇತ್ರದಲ್ಲಿ ಪ್ರತಿಯೊಂದು ಮನೆ ಪಕ್ಷದ ನಿಷ್ಠೆ, ರಾಷ್ಟ್ರೀಯತೆ ಮತ್ತು ಸ್ವದೇಶಿ ಚಿಂತನೆಯ ಕೇಂದ್ರವಾಗಲಿ. ಈ ಕಾರ್ಯಕರ್ತರ ಸಮರ್ಪಣೆ ಅದಕ್ಕೆ ಸಾಕ್ಷಿ ಎಂದರು.

ಸ್ವದೇಶಿ ಎಂದರೆ ಕೇವಲ ಉತ್ಪನ್ನವಲ್ಲ; ಅದು ಒಂದು ಮನೋಭಾವ, ಒಂದು ಕರ್ತವ್ಯ. ಮನೆ–ಮನೆಗೆ ತಲುಪುವ ನಮ್ಮ ಈ ಸಂಕಲ್ಪ, ಕ್ಷೇತ್ರವನ್ನು ಸಂಘಟನಾ ದೃಷ್ಟಿಯಿಂದ ಮತ್ತಷ್ಟು ಬಲಗೊಳಿಸುತ್ತದೆ ಎಂದರು. ಈ ಸಂದರ್ಭದಲ್ಲಿ ಮಾಜಿ ಜಿಲ್ಲಾಧ್ಯಕ್ಷ ಹೇಮಂತ್‌ಕುಮಾರ್‌ಗೌಡ, ಹಿರಿಯರಾದ ಎಸ್.ಆರ್. ಗೋಪಾಲ್ ರಾವ್, ರಾಜ್‌ಕುಮಾರ್, ಶ್ರೀನಿವಾಸ್, ಕ್ಷೇತ್ರ ಪ್ರಧಾನ ಕಾರ್ಯದರ್ಶಿ ಹೇಮಂತ್‌ಗೌಡ, ಉಪಾಧ್ಯಕ್ಷರಾದ ನಾರಾಯಣ್, ರಮೇಶ್, ಸುನಿಲ್, ಪ್ರಮೀಳಾ ನಾಯಕ್, ಪ್ರಧಾನ ಕಾರ್ಯದರ್ಶಿ ನಟರಾಜ್, ಜ್ಯೋತಿ, ಸವಿತಾ, ಶಾಲಿನಿ, ನಾರಾಯಣ್, ರಾಘವೇಂದ್ರ, ಕೃಷ್ಣಕುಮಾರ್, ಜೈ ಶಂಕರ್, ಪ್ರಶಾಂತ್, ಮಂಜಣ್ಣ, ನಿಂಗೇಗೌಡ ಇನ್ನಿತರರಿದ್ದರು.

ಶಾಶ್ವತ ಸೇವಾ ಶಾಲೆಯಲ್ಲಿ ಪ್ರತಿಭಾ ಪುರಸ್ಕಾರ

ಮೈಸೂರು,ನ.18–ಮೈಸೂರಿನ ಆಲನಹಳ್ಳಿಯ ಶಾಶ್ವತ ಸೇವಾ ಶಾಲೆಯಲ್ಲಿ 70ನೇ ಕನ್ನಡ ರಾಜ್ಯೋತ್ಸವ ಹಾಗೂ 2024–25ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 625 ಅಂಕ ಪಡೆದ ವಿವಿಧ ಜಿಲ್ಲೆಯ ವಿದ್ಯಾರ್ಥಿಗಳು ಹಾಗೂ ಶಾಶ್ವತ ಶಾಲೆಯಲ್ಲಿ ಅತೀ ಹೆಚ್ಚು ಅಂಕಗಳ ಪಡೆದ ವಿದ್ಯಾರ್ಥಿಗಳಿಗೆ ರಾಜ್ಯ ಮಟ್ಟದ ಪೂಜ್ಯ ಆಯಿಮಾತಾಜೀ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಮೈಸೂರು ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಉದ್ಘಾಟಿಸಿ ಪ್ರಶಸ್ತಿ ಪ್ರದಾನ ಮಾಡಿದರು.

ಈ ಸಂದರ್ಭದಲ್ಲಿ ಪೂರ್ಣಾಂಕ ಪಡೆದು ಸಾಧನೆ ಮಾಡಿರುವ ವಿದ್ಯಾರ್ಥಿಗಳನ್ನು ಜಿಲ್ಲೆಯಲ್ಲಿ ಇರುವ ಶಾಶ್ವತ ಸೇವಾ ಶಾಲೆಗೆ ಆಹ್ವಾನಿಸಿ ಅವರಿಗೆ ರಾಜ್ಯ ಮಟ್ಟದ ಪೂಜ್ಯ ಆಯಿಮಾತಾಜೀ ಪ್ರತಿಭಾ ಪುರಸ್ಕಾರ ಮಾಡುತ್ತಿರುವುದು ಅನುಕರಣೀಯವಾದ ಕಾರ್ಯ. ಇಂತಹ ಅನೇಕ ಕಾರ್ಯಗಳನ್ನು ಸಂಸ್ಥೆ ನೆರವೇರಿಸಲಿ. ಇನ್ನು ಹೆಚ್ಚು ಅಭ್ಯುದಯ ಸಾಧಿಸಲಿ. ಇಂತಹ ಹೃದಯ ವೈಶಾಲ್ಯತೆ ಕೆಲಸಗಳು ಎಲ್ಲಾ ಶಾಲೆಗಳಿಗೂ ಆದರ್ಶಪ್ರಾಯವಾದುದು. ವಿದ್ಯಾರ್ಥಿಗಳು ಸಾಧನೆಯ ಹಾದಿಯಲ್ಲಿ ಸಂಸ್ಕಾರಯುತ ಜೀವನ ಮತ್ತು ಅಧ್ಯಯನ ನಡೆಸಬೇಕು ಎಂದರು.



ಮೈಸೂರಿನ ಶಾಶ್ವತ ಸೇವಾ ಶಾಲೆಯಲ್ಲಿ ಪ್ರೊ.ಮೈಸೂರು ಕೃಷ್ಣಮೂರ್ತಿ, ಚಿಕ್ಕಳ್ಳಿ ಪುಟ್ಟಣ್ಣ, ಕೆರೆಹಳ್ಳಿ ದೊರೆಸ್ವಾಮಿ, ಆರ್.ರವಿಕುಮಾರ್, ಸಿದ್ದರಾಜು, ಮಲ್ಲೇಶ್ ಅವರಿಗೆ 'ಶಾಶ್ವತ ಕಲಾ ಸೇವಾ ಪ್ರಶಸ್ತಿ'ಯನ್ನು ಪ್ರದಾನ ಮಾಡಲಾಯಿತು.

ಮೈಸೂರು ಗ್ರಾಮಾಂತರ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಪ್ರಕಾಶ್ ಶಾಲೆಯ ಜ್ಞಾನಲೋಕ ಸಂಚಿಕೆಯನ್ನು ಬಿಡುಗಡೆಗೊಳಿಸಿದರು. ಪ್ರೊ.ಮೈಸೂರು ಕೃಷ್ಣಮೂರ್ತಿ, ಚಿಕ್ಕಳ್ಳಿ ಪುಟ್ಟಣ್ಣ, ಕೆರೆಹಳ್ಳಿ ದೊರೆಸ್ವಾಮಿ, ಆರ್.ರವಿಕುಮಾರ್, ಸಿದ್ದರಾಜು, ಮಲ್ಲೇಶ್ ಅವರಿಗೆ 'ಶಾಶ್ವತ ಕಲಾ ಸೇವಾ ಪ್ರಶಸ್ತಿ'ಯನ್ನು ಪ್ರದಾನ ಮಾಡಲಾಯಿತು. ಶಾಲೆಯ ಮುಖ್ಯ ಶಿಕ್ಷಕಿ ಪವಿತ್ರ ಹೆಚ್ ಪಿ. ಸಹ ಶಿಕ್ಷಕಿ ರತ್ನಮಣಿ ಪಿ ಅವರಿಗೆ ಈ ಸಾಲಿನ "ಉತ್ತಮ ಶಿಕ್ಷಕಿ ಪ್ರಶಸ್ತಿ"ಯನ್ನು ನೀಡಿ ಗೌರವಿಸಲಾಯಿತು.

ಕನ್ನಡ ನಾಡು ನುಡಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳ ಸಾಂಸ್ಕೃತಿಕ ಕಾರ್ಯಕ್ರಮಗಳು ವೇದಿಕೆ ಮೆರುಗನ್ನು ಹೆಚ್ಚಿಸಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆಯ ಕಾರ್ಯದರ್ಶಿ ಎಂ.ಆರ್. ಚೌಧರಿ, ಮುಖ್ಯ ಅತಿಥಿಗಳಾಗಿ ಅಹಿಂದ ಜವರಪ್ಪ, ಕುಮಾರಸ್ವಾಮಿ, ಮಾಲಂಗಿ ಸುರೇಶ್, ಎಂ.ಚಂದ್ರಶೇಖರ್, ಡಾ.ಮೈಸೂರು ಉಮೇಶ್, ಸುನೀಲ್, ಗಣಪತಿ, ಡಾ.ಮಿತ್ತಲ್, ಸಿಆರ್‌ಪಿ ಸತೀಶ್ ಕುಮಾರ್, ವೆಂಕಟೇಶ್, ಜಗದೀಶ್ ಹೆಮ್ಮಿಗೆ ಮುಖ್ಯ ಶಿಕ್ಷಕಿ ಪವಿತ್ರ, ಸಹ ಮುಖ್ಯ ಶಿಕ್ಷಕ ರಮೇಶ್ ತಾಯೂರು ಬೋಧಕ ಬೋಧಕೇತರ ಸಿಬ್ಬಂದಿ ಹಾಜರಿದ್ದರು.

ಸಾಹಿತಿ ಬನ್ನೂರು ರಾಜುಗೆ ರಾಜ್ಯೋತ್ಸವ ಪ್ರಯುಕ್ತ ಸನ್ಮಾನ

ಮೈಸೂರು,ನ.18(ಜಿಎ)–ಒಂದಿಲ್ಲೊಂದು ರೀತಿಯಲ್ಲಿ ನಮ್ಮ ಸಮಾಜವನ್ನು ತಿದ್ದಿ ತೀಡುವ ಸಾಹಿತಿಗಳು, ಪತ್ರಕರ್ತರು, ಕವಿಗಳು, ಬರಹಗಾರರು, ನಮ್ಮ ಸಮಾಜದ ಆಸ್ತಿಗಳಾಗಿದ್ದು ಮುಂದಿನ ಪೀಳಿಗೆಗೆ ಇವರ ಆದರ್ಶಗಳನ್ನು, ಬರಹಗಳನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ನಮ್ಮ ಸಮಾಜ ಶ್ರಮಿಸಬೇಕೆಂದು ಸರ್.ಎಂ.ವಿಶ್ವೇಶ್ವರಯ್ಯನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಮಹೇಶ್ ಎಸ್, ಜಯನಗರ ಹೇಳಿದರು.

ಸಾಹಿತಿ ಬನ್ನೂರು ಕೆ.ರಾಜು ಪಾರ್ಶ್ವವಾಯುಗೆ ತುತ್ತಾಗಿ ಚಿಕಿತ್ಸೆಯಲ್ಲಿರುವುದರಿಂದ ಅವರ ಆರೋಗ್ಯ ಯೋಗ ಕ್ಷೇಮವನ್ನು ಸಂಘದ ಮೂಲಕ ವಿಚಾರಿಸಿ ಅವರ ಸ್ವಗೃಹದಲ್ಲಿ ಅವರು ಮಾತನಾಡಿದರು.

ಬರಹವನ್ನೇ ಬದುಕು ಮಾಡಿಕೊಂಡು ಸಾಹಿತ್ಯವನ್ನೇ ಉಸಿರಾಡುತ್ತಾ ಬಹು ದೊಡ್ಡ ಸಾಹಿತ್ಯದ ಸಿರಿ ಫಸಲನ್ನು ಕನ್ನಡ ನಾಡಿಗೆ ನೀಡಿದ್ದಾರೆ. ತನ್ಮೂಲಕ ಕನ್ನಡವನ್ನು ಶ್ರೀಮಂತಗೊಳಿಸಿದವರಲ್ಲಿ ಪ್ರಮುಖರಾಗಿದ್ದಾರೆ. ಇದು ರಾಜ್ಯೋತ್ಸವದ ಸಂದರ್ಭವೂ ಆಗಿರುವುದರಿಂದ ತಾಯಿ ಭುವನೇಶ್ವರಿ ಇವರ ಆರೋಗ್ಯವನ್ನು ಬೇಗ ಗುಣಪಡಿಸಲೆಂದು ಪ್ರಾರ್ಥಿಸಿದರು.

ಜೊತೆಗೆ ಇವರ ಅಪಾರವಾದ ಸಾಹಿತ್ಯ ಮತ್ತು ಕನ್ನಡ ಸೇವೆಯನ್ನು ಕುರಿತು ಮಾತನಾಡಿ, ಫಲ ತಾಂಬೂಲ ನೀಡಿ ಶಾಲು ಹೊದಿಸುವುದರೊಂದಿಗೆ ಸಾಹಿತಿ ಬನ್ನೂರು ರಾಜು ಅವರನ್ನು ವಿಶೇಷವಾಗಿ ಸನ್ಮಾನಿಸಿ ಕನ್ನಡ ರಾಜ್ಯೋತ್ಸವವನ್ನು ವಿಶೇಷವಾಗಿ ಆಚರಿಸಿದರು.

ಈ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷ ಎಂ.ಎಸ್.ಸುರೇಶ್ ಕುಮಾರ್, ಕಾರ್ಯದರ್ಶಿ ಯೋಗೇಶ್, ಜಂಟಿ ಕಾರ್ಯದರ್ಶಿ ಪ್ರಕಾಶ್, ಖಜಾಂಚಿ ರವಿಕುಮಾರ್, ನಿರ್ದೇಶಕರಾದ ಚಂದ್ರೇಗೌಡ, ಕುಮಾರ್, ಶಿವರಾಜ್, ರುದ್ರಸ್ವಾಮಿ, ಕೃಷ್ಣ, ಎನ್.ಕುಮಾರ್, ದಿನೇಶ್, ಯೋಗೇಶ್, ಸಂತೋಷ್‌ಕುಮಾರ್, ಮಹಮ್ಮದ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.



ಸಾಹಿತಿ ಬನ್ನೂರು ಕೆ.ರಾಜು ಅವರನ್ನು ಭೇಟಿ ಮಾಡಿ ಆರೋಗ್ಯ ವಿಚಾರಿಸಿ, ವಿಭಿನ್ನವಾಗಿ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು.

ದೇಶ - ವಿದೇಶ

ಮೋಸ್ಟ್ ವಾಂಟೆಡ್ ನಕ್ಸಲ್ ನಾಯಕ ಮದ್ವಿ ಹಿದ್ಮಾ ಸೇರಿ 6 ಮಂದಿ ಹತ್ಯೆ



ವಿಶಾಖಪಟ್ಟಣ: ಆಂಧ್ರಪ್ರದೇಶದ ಅಲ್ಲೂರಿ ಸೀತಾರಾಮ ರಾಜು ಜಿಲ್ಲೆಯ ಮಾರೆಡುಮಿಲ್ಲಿಯಲ್ಲಿ ಅರಣ್ಯ ಪ್ರದೇಶದಲ್ಲಿ ಮಂಗಳವಾರ ಬೆಳಿಗ್ಗೆ ಪೊಲೀಸರು ಮತ್ತು ನಕ್ಸಲರ ನಡುವೆ ಗುಂಡಿನ ಚಕಮಕಿ ನಡೆದಿದೆ.

ಗುಂಡಿನ ಚಕಮಕಿಯಲ್ಲಿ ನಿಷೇಧಿತ ಮಾವೋವಾದಿ ಸಂಘಟನೆಯ ಪ್ರಮುಖ ನಾಯಕ ಮದ್ವಿ ಹಿದ್ಮಾ ಸೇರಿ ಆರು ಮಂದಿಯನ್ನು ಹತ್ಯೆ ಮಾಡಲಾಗಿದೆ. ಘಟನಾ ಸ್ಥಳದಲ್ಲಿ ಕಾರ್ಯಾಚರಣೆ ಮುಂದುವರಿಸಲಾಗಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ ಅಮಿತ್ ಬರ್ದಾರ್ ಹೇಳಿದ್ದಾರೆ. ಗುಂಡಿನ ಚಕಮಕಿಯಲ್ಲಿ ಯಾವುದೇ ಪೊಲೀಸ್ ಸಿಬ್ಬಂದಿಗೆ ಗಾಯಗಳಾಗಿಲ್ಲ. ಹತ್ಯೆಯಾದ ನಕ್ಸಲರ ಗುರುತು ಮತ್ತು ಗಾಯಗೊಂಡವರ ವಿವರಗಳನ್ನು ಕಲೆಹಾಕಲಾಗುತ್ತಿದೆ ಎಂದು ತಿಳಿಸಿದ್ದಾರೆ. ಕಳೆದ 6 ತಿಂಗಳಲ್ಲಿ ಅಲ್ಲೂರಿ ಸೀತಾರಾಮ ರಾಜು ಜಿಲ್ಲೆಯಲ್ಲಿ ನಡೆದ 2ನೇ ಪ್ರಮುಖ ಎನ್‌ಕೌಂಟರ್ ಇದಾಗಿದೆ. ಇದೇ ವರ್ಷ ಮೇ 7ರಂದು ರಾಮಾವರಂ ಮಂಡಲ ಅರಣ್ಯ ಪ್ರದೇಶದಲ್ಲಿ ಪೊಲೀಸರೊಂದಿಗೆ ನಡೆದ ಗುಂಡಿನ ಚಕಮಕಿಯಲ್ಲಿ 2 ಮಾವೋವಾದಿಗಳು ಮೃತಪಟ್ಟಿದ್ದರು.

ಭಾರತೀಯರಿಗೆ ಇರಾನ್ ವೀಸಾ ವಿನಾಯಿತಿ ಸ್ಥಗಿತ



ನವದೆಹಲಿ: ಉದ್ಯೋಗದ ಸುಳ್ಳು ಭರವಸೆಯ ಆಧಾರದ ಮೇಲೆ ಅಥವಾ ಮೂರನೇ ದೇಶಕ್ಕೆ ತೆರಳಲು ಇರಾನ್‌ಗೆ ಭೇಟಿ ನೀಡುವವರು ಅಪರಾಧ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಘಟನೆಗಳು ವರದಿಯಾಗಿವೆ. ಈ ಹಿನ್ನೆಲೆಯಲ್ಲಿ ಭಾರತೀಯ ಪಾಸ್ ಪೋರ್ಟ್ ಹೊಂದಿರುವವರಿಗೆ ವೀಸಾ ವಿನಾಯಿತಿ ಸೌಲಭ್ಯವನ್ನು ಇರಾನ್ ಸ್ಥಗಿತಗೊಳಿಸಿದೆ ಎಂದು ವಿದೇಶಾಂಗ ವ್ಯವಹಾರ ಸಚಿವಾಲಯ ತಿಳಿಸಿದೆ. ಉದ್ಯೋಗದ ಸುಳ್ಳು ಭರವಸೆ ಅಥವಾ ಬೇರೆ ದೇಶಗಳಿಗೆ ತೆರಳಲು ನೆರವಾಗುವ ಭರವಸೆಯೊಂದಿಗೆ ಭಾರತೀಯ ಪ್ರಜೆಗಳನ್ನು ಇರಾನ್‌ಗೆ ಬರುವಂತೆ ಆಮಿಷವೊಡ್ಡುತ್ತಿರುವ ಘಟನೆಗಳ ಬಗ್ಗೆ ಸರ್ಕಾರದ ಗಮನಕ್ಕೆ ತರಲಾಗಿದೆ ಎಂದು ವಿದೇಶಾಂಗ ಸಚಿವಾಲಯ ಮಾಹಿತಿ ನೀಡಿದೆ. ನ.22ರಿಂದ ಅನ್ವಯವಾಗುವಂತೆ ಇರಾನ್‌ಗೆ ಭೇಟಿ ನೀಡುವ ಸಾಮಾನ್ಯ ಭಾರತೀಯ ಪಾಸ್ ಪೋರ್ಟ್ ಹೊಂದಿರುವವರಿಗೆ ಲಭ್ಯವಿರುವ ವೀಸಾ ವಿನಾಯಿತಿ ಸೌಲಭ್ಯವನ್ನು ಇರಾನ್ ಸರ್ಕಾರ ಸ್ಥಗಿತಗೊಳಿಸಿದೆ. ಅಪರಾಧ ಹಿನ್ನೆಲೆಯುಳ್ಳವರು ಈ ಸೌಲಭ್ಯವನ್ನು ಮತ್ತಷ್ಟು ದುರುಪಯೋಗಪಡಿಸಿಕೊಳ್ಳುವುದನ್ನು ತಡೆಯಲು ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಎಸ್‌ಐಆರ್ ಮುಂದೂಡಲು ಸುಪ್ರೀಂಕೋರ್ಟ್ ಮೆಟ್ಟಿಲೇರಿದ ಕೇರಳ

ನವದೆಹಲಿ: ರಾಜ್ಯದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ಮುಂದೂಡಲು ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡುವಂತೆ ಕೋರಿ ಕೇರಳ ಸರ್ಕಾರ ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ. ಡಿಸೆಂಬರ್‌ನಲ್ಲಿ ನಡೆಯಲಿರುವ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಎಸ್‌ಐಆರ್ ಪ್ರಕ್ರಿಯೆ ನಡೆಸುವಂತೆ ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡುವಂತೆ ಕೋರ್ಟ್‌ಗೆ ಮನವಿ ಮಾಡಿದೆ. ನ.4ರಿಂದ ಡಿ.4ರವರೆಗೆ ಎಸ್‌ಐಆರ್ ಪ್ರಕ್ರಿಯೆ ನಡೆಸುವುದು ಕೇರಳದ ಸ್ಥಳೀಯ ಸಂಸ್ಥೆಗಳ ಚುನಾವಣೆಯೊಂದಿಗೆ ಹೊಂದಿಕೆಯಾಗುತ್ತದೆ. ಎರಡೂ ಪ್ರಕ್ರಿಯೆಗಳನ್ನು ಏಕಕಾಲದಲ್ಲಿ ನಡೆಸುವುದರಿಂದ ಮಾನವ ಸಂಪನ್ಮೂಲದ ಮೇಲೆ ಹೊರೆಯಾಗುವುದಲ್ಲದೆ, ಸರ್ಕಾರದ ದೈನಂದಿನ ಕಾರ್ಯಚಟುವಟಿಕೆಗಳನ್ನು ನೋಡಿಕೊಳ್ಳಲು ಸಿಬ್ಬಂದಿ ಕೊರತೆ ಉಂಟಾಗಿ 'ಆಡಳಿತಾತ್ಮಕ ಬಿಕ್ಕಟ್ಟು' ಎದುರಾಗುವ ಸಾಧ್ಯತೆ ಇದೆ ಎಂದು ಕೇರಳ ಸರ್ಕಾರ ವಿವರಿಸಿದೆ. ಎಸ್‌ಐಆರ್ ಪ್ರಕ್ರಿಯೆ ನಡೆಸಲು ಉದ್ದೇಶಿಸಿರುವ ದಿನಾಂಕಗಳು ಪ್ರಸ್ತುತ ಘೋಷಣೆಯಾಗಿರುವ ಚುನಾವಣಾ ವೇಳಾಪಟ್ಟಿಗೆ ಹೊಂದಿಕೆಯಾಗುವುದಿಲ್ಲ ಎಂದೂ ಕೇರಳ ಸರ್ಕಾರ ಉಲ್ಲೇಖಿಸಿದೆ. ಕೇರಳದ ಸ್ಥಳೀಯ ಸಂಸ್ಥೆಗಳಿಗೆ ಡಿ.9 ಮತ್ತು 11ರಂದು ಮತದಾನ ನಡೆಯಲಿದ್ದು, ಡಿ.13ರಂದು ಮತ ಎಣಿಕೆ ನಡೆಯಲಿದೆ.

'ಸೂರ್ಯಕಿರಣ, 'ತೇಜಸ್' ಚಮತ್ಕಾರಕ್ಕೆ ಮನಸೋತ ಪ್ರೇಕ್ಷಕ



ದುಬೈ: ನಗರದ ಅಲ್ ಮಕ್ತೌಮ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನಡೆದ ದುಬೈ ಏರ್ ಶೋ 2025ರಲ್ಲಿ ಭಾರತೀಯ ವಾಯುಪಡೆಯ ಯುದ್ಧ ವಿಮಾನಗಳು ವೈಮಾನಿಕ ಪ್ರದರ್ಶನ ನೀಡುವ ಮೂಲಕ ಜಾಗತಿಕ ಗಮನ ಸೆಳೆದಿವೆ. ಭಾರತೀಯ ವಾಯುಪಡೆಯ ಸೂರ್ಯಕಿರಣ ತಂಡವು ವೈಮಾನಿಕ ಪ್ರದರ್ಶನ ನಡೆಸಿತು. ಹಾಗೆಯೇ ಆಗಸದಲ್ಲಿ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್‌ನ ತೇಜಸ್' ಲಘು ಯುದ್ಧ ವಿಮಾನಗಳ ಕೌಶಲಯುತ ಹಾರಾಟ ರೋಮಾಂಚನಗೊಳಿಸಿತು. ಏರ್ ಶೋನಲ್ಲಿ ಯುಎಇ ವಾಯುಪಡೆಯ ಫರ್ಸಾನ್ ಅಲ್ ಎಮರತ್, ಬೋಯಿಂಗ್‌ನ 777X, ರಷ್ಯಾದ ಸುಖೋಯ್–57, ಕಾಮೋವ್‌ನ ಕಾ–52 ಹೆಲಿಕಾಪ್ಟರ್‌ಗಳು ಬಾನಂಗಳದಲ್ಲಿ ಸೃಷ್ಟಿಸಿದ ಚಮತ್ಕಾರ ಕಂಡು ಪ್ರೇಕ್ಷಕರು ಬೆರಗಾಗಿದ್ದಾರೆ. ದುಬೈ ಏರ್ ಶೋವನ್ನು ಪ್ರತಿ 2 ವರ್ಷಗಳಿಗೊಮ್ಮೆ ಆಯೋಜಿಸಲಾಗುತ್ತದೆ. ಈ ಬಾರಿ ಬೊಂಬಾರ್ಡಿಯರ್, ಡಸಾಲ್ಟ್ ಏವಿಯೇಷನ್, ಎಂಬ್ರೇರ್, ಥೇಲ್ಸ್, ಏರ್‌ಬಸ್, ಲಾಕ್‌ಹೀಡ್ ಮಾರ್ಟಿನ್ ಮತ್ತು ಕ್ಯಾಲಿಡಸ್‌ನಂತಹ ಪ್ರಮುಖ ಅಂತರರಾಷ್ಟ್ರೀಯ ಏರೋಸ್ಪೇಸ್ ಕಂಪನಿಗಳು ಸೇರಿದಂತೆ 150 ದೇಶಗಳಿಂದ 1,500ಕ್ಕೂ ವಿಮಾನಗಳು ವೈಮಾನಿಕ ಪ್ರದರ್ಶನದಲ್ಲಿ ಭಾಗವಹಿಸಿವೆ ಎಂದು ವರದಿಯಾಗಿದೆ.

ಚಲಿಸುತ್ತಿದ್ದ ಆಂಬುಲೆನ್ಸ್‌ಗೆ ಬೆಂಕಿ: ನವಜಾತ ಶಿಶು ಸೇರಿ ನಾಲ್ವರ ಸಾವು



ಅಹಮದಾಬಾದ್: ಗುಜರಾತ್‌ನ ಅರವಲ್ಲಿ ಜಿಲ್ಲೆಯ ಮೊಡಾಸಾ ನಗರದಲ್ಲಿ ಚಲಿಸುತ್ತಿದ್ದ ಆಂಬುಲೆನ್ಸ್‌ಗೆ ಬೆಂಕಿ ಹೊತ್ತಿಕೊಂಡಿದ್ದು, ನವಜಾತ ಶಿಶು, ವೈದ್ಯರು ಸೇರಿ ನಾಲ್ವರು ಸಜೀವ ದಹನಗೊಂಡಿರುವ ಘಟನೆ ಸೋಮವಾರ ತಡರಾತ್ರಿ ಸಂಭವಿಸಿದೆ. ಮೊಡಾಸಾದ ಆಸ್ಪತ್ರೆಯಲ್ಲಿ ಜನನವಾಗಿದ್ದ ಶಿಶುವಿನ ಆರೋಗ್ಯದಲ್ಲಿ ಏರುಪೇರಾದ ಕಾರಣ ಹೆಚ್ಚಿನ ಚಿಕಿತ್ಸೆಗಾಗಿ ಅಹಮದಾಬಾದ್‌ನ ಖಾಸಗಿ ಆಸ್ಪತ್ರೆಗೆ ಕರೆದೊಯ್ಯಲಾಗುತ್ತಿತ್ತು. ಆಂಬುಲೆನ್ಸ್‌ನಲ್ಲಿ ಶಿಶು, ತಂದೆ ಜಿಗ್ನೇಶ್ ಮೋಚಿ (38), ವೈದ್ಯ ಡಾ. ಶಾಂತಿಲಾಲ್ ರೆಂತಿಯಾ (30), ನರ್ಸ್ ಭೂರಿಬೆನ್ ಮನತ್ (23) ಹಾಗೂ ಚಾಲಕ ಸೇರಿ ಇನ್ನೂ ಇಬ್ಬರಿದ್ದರು. ಚಾಲಕ ಮತ್ತು ಇತರ ಇಬ್ಬರು ಗಾಯಗೊಂಡಿದ್ದು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಆಂಬುಲೆನ್ಸ್ ಹಿಂಭಾಗದಲ್ಲಿ ಬೆಂಕಿ ಕಾಣಿಸಿಕೊಂಡಿದೆ ಎಂದು ಚಾಲಕನಿಗೆ ಅರಿವಾದ ನಂತರ ಪೆಟ್ರೋಲ್ ಪಂಪ್ ಬಳಿ ಆಂಬುಲೆನ್ಸ್ ನಿಧಾನವಾಗಿ ಚಲಿಸುತ್ತಿರುವ ದೃಶ್ಯ ಸಿಸಿಟಿವಿಯಲ್ಲಿ ಸೆರೆಯಾಗಿದೆ. ಘಟನೆಯ ಕುರಿತು ತನಿಖೆ ನಡೆಸಲು ಮತ್ತು ದುರಂತಕ್ಕೆ ಕಾರಣವನ್ನು ಪತ್ತೆಮಾಡಲು ವಿಧಿವಿಜ್ಞಾನ ತಜ್ಞರನ್ನು ಕರೆಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮನೋಹರ ಸಿನ್ಹಾ ಜಡೇಜಾ ತಿಳಿಸಿದ್ದಾರೆ.

ಕುಟ್ಟದಲ್ಲಿ ಸಿಎನ್‌ಸಿಯಿಂದ 20ನೇ ಮಾನವ ಸರಪಳಿ



ಸಿಎನ್‌ಸಿಯಿಂದ ಕುಟ್ಟದಲ್ಲಿ 20ನೇ ಮಾನವ ಸರಪಳಿ ನಡೆಯಿತು.

ಮಡಿಕೇರಿ, ನ.18– ಕೊಡವರು ಅನಿವಾರ್ಯವಾಗಿ ಧರ್ಮ ಮತ್ತು ಜಾತಿ ಕಾಲಂಗಳನ್ನು ಒಪ್ಪಿಕೊಂಡು ಕೊಡವ ಎಂದು ದಾಖಲಿಸಬೇಕಾದ ಪರಿಸ್ಥಿತಿ ಬಂದಿದೆ ಎಂದು ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆಯ ಅಧ್ಯಕ್ಷ ಎನ್.ಯು.ನಾಚಪ್ಪ ವಿಷಾದಿಸಿದ್ದಾರೆ.

16ನೇ ರಾಷ್ಟ್ರೀಯ ಜನಗಣತಿ ನಡೆಯುವಾಗ ಕೊಡವರು ಪ್ರತ್ಯೇಕವಾಗಿ 'ಕೊಡವ' ಎಂದು ದಾಖಲೀಕರಣಗೊಳಿಸುವಂತೆ ಜನಜಾಗೃತಿ ಮೂಡಿಸುವ ಸಲುವಾಗಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ವತಿಯಿಂದ ಕುಟ್ಟದಲ್ಲಿ ನಡೆದ 20ನೇ ಮಾನವ ಸರಪಳಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕೊಡವಲ್ಯಾಂಡ್ ಭೂ ರಾಜಕೀಯ ಸ್ವಯಂ ಆಡಳಿತ, ಕೊಡವರಿಗೆ ವಿಶ್ವರಾಷ್ಟ್ರ ಸಂಸ್ಥೆಯ ಇಂಡಿಜಿನಸ್ ಪೀಪಲ್ಸ್ ರೈಟ್ಸ್, ಎಸ್‌ಟಿ ಪಟ್ಟಿಯಲ್ಲಿ ವರ್ಗೀಕರಣ, ಸಿಕ್ಕಿಂನ ಸಂಘ ಮತಕ್ಷೇತ್ರದಂತೆ ಸಂಸತ್ ಮತ್ತು ವಿಧಾನಸಭೆಯಲ್ಲಿ ವಿಶೇಷ ಪ್ರಾತಿನಿಧ್ಯ ನೀಡಬೇಕು. ಕೊಡವರ ಪೂರ್ವಾರ್ಜಿತ ಭೂ ಹಕ್ಕು ಮತ್ತು ಧಾರ್ಮಿಕ ಸಂಸ್ಕಾರ ತೋಕ್ ಹಕ್ಕು ಚಿರಸ್ಥಾಯಿಯಾಗಿ ಮುಂದುವರೆಯಬೇಕು ಸೇರಿದಂತೆ ಕೊಡವರ ಸಬಲೀಕರಣಕ್ಕೆ ಪೂರಕವಾಗಿರುವ ಸಂವಿಧಾನಬದ್ಧವಾದ ಹಲವು ಬೇಡಿಕೆಗಳ ಕುರಿತು ಸರಕಾರದ ಗಮನ ಸೆಳೆದರು.

ಇಲ್ಲಿಯವರೆಗೆ ಬಿರುನಾಣಿ, ಟಿ.ಶೆಟ್ಟಿಗೇರಿ, ಕಡಂಗ, ಕಕ್ಕಬ್ಬೆ, ಬಾಳೆಲೆ, ಪೊನ್ನಂಪೇಟೆ, ಮಾದಾಪುರ, ಸುಂಟಿಕೊಪ್ಪ, ಸಿದ್ದಾಪುರ, ನಾಪೋಕ್ಲು, ಗೋಣಿಕೊಪ್ಪ, ವಿರಾಜಪೇಟೆ, ಮೂರ್ನಾಡು, ಚೇರಂಬಾಣೆ, ಚೆಟ್ಟಳ್ಳಿ, ಅಮ್ಮತ್ತಿ, ಶ್ರೀಮಂಗಲ, ಬಿಟ್ಟಂಗಾಲ ಮತ್ತು ಹುದಿಕೇರಿಯಲ್ಲಿ ಜನಜಾಗೃತಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಮಚ್ಚಮಾಡ ಪ್ರಕಾಶ್, ತೀತಿರ ರಘು, ಅಜ್ಜಿಕುಟ್ಟೀರ ಲೋಕೇಶ್, ಕಳ್ಳಿಚಂಡ ದಿಲೀಪ್, ಬಾಚರಣಿಯಂಡ ಚಿಪ್ಪಣ, ಮಾಚಿಮಾಡ ರಾಜು ಅಯ್ಯಣ್ಣ, ಮತ್ರಂಡ ನರೇಂದ್ರ ಚೋಡುಮಾಡ ಸುಬಯ್ಯ, ಕೊಂಗಂಡ ಸುರೇಶ್ ದೇವಯ್ಯ ಮತ್ತಿತರರು ಪಾಲ್ಗೊಂಡು ಸಿಎನ್‌ಸಿ ಹೋರಾಟದ ಪರ ಪ್ರತಿಜ್ಞಾವಿಧಿ ಸ್ವೀಕರಿಸಿದರು.

ಸಮಾಜಕ್ಕೆ ಭೂಮಿ ನೀಡಿದ ದಾನಿಗಳಿಗೆ ಅಭಿನಂದನೆ



ಗೌಡ ಸಮಾಜಕ್ಕೆ ಭೂಮಿಯನ್ನು ದಾನವಾಗಿ ನೀಡಿದ ಡಾ.ಚಿದಾನಂದ ಗೌಡ ಮತ್ತು ಡಾ.ರೇಣುಕಾ ಪ್ರಸಾದ್ ಸಹೋದರರನ್ನು ಸಮಾಜ ಅಭಿನಂದಿಸಿತು.

ಮಡಿಕೇರಿ, ನ.18– ವಿರಾಜಪೇಟೆ ಗೌಡ ಸಮಾಜಕ್ಕೆ ಭೂಮಿಯನ್ನು ದಾನವಾಗಿ ನೀಡಿದ ಡಾ.ಚಿದಾನಂದ ಗೌಡ ಮತ್ತು ಡಾ.ರೇಣುಕಾ ಪ್ರಸಾದ್ ಸಹೋದರರನ್ನು ಗೌಡ ಸಮಾಜ ಅಭಿನಂದಿಸಿತು

ಸುಮಾರು 20 ವರ್ಷಗಳಿಂದ ಬಾಕಿ ಉಳಿದಿದ್ದ ಭೂಮಿಯ ನೋಂದಣಿ ಪ್ರಕ್ರಿಯೆಯನ್ನು ಕೊಡಗು ಗೌಡ ಸಮಾಜಗಳ ಒಕ್ಕೂಟದ ಅಧ್ಯಕ್ಷ ಆನಂದ ಕರಂದ್ಲಾಜೆ ಹಾಗೂ ಅವರ ತಂಡವು ನಮ್ಮೊಂದಿಗೆ ಚರ್ಚಿಸಿ ಅಂತಿಮಗೊಳಿಸಿದ್ದಾರೆ. ಶೀಘ್ರದಲ್ಲೇ ಉತ್ತಮವಾದ ಗೌಡಸಮಾಜ ಭವನವನ್ನು ನಿರ್ಮಿಸಲಿ ಎಂದು ಆಶಯ ವ್ಯಕ್ತಪಡಿಸಿದರು. ಕಟ್ಟಡ ನಿರ್ಮಾಣದ ಸಂದರ್ಭದಲ್ಲೂ ಸಂಪೂರ್ಣ ಸಹಕಾರ ನೀಡುವುದಾಗಿ ತಿಳಿಸಿದ ಅವರು, ಸನ್ಮಾನವನ್ನು ತಂದೆ, ತಾಯಿಯರಿಗೆ ಅರ್ಪಿಸುವುದಾಗಿ ಹೇಳಿದರು.

ಡಾ.ಕೆ.ವಿ.ರೇಣುಕಾ ಪ್ರಸಾದ್ ಮಾತನಾಡಿ, ಗೌಡ ಸಮಾಜಕ್ಕೆ ದೊರೆತಿರುವ ಜಾಗದಲ್ಲಿ ಸುಂದರವಾದ ಸಮಾಜ ಮತ್ತು ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ವಿದ್ಯಾರ್ಥಿ ನಿಲಯವನ್ನು ಸ್ಥಾಪಿಸಿ ಎಂದು ಸಲಹೆಯನ್ನು ನೀಡಿದರೆ, ಒಕ್ಕೂಟದ ಅಧ್ಯಕ್ಷ ಆನಂದ ಕರಂದ್ಲಾಜೆ ಮಾತನಾಡಿ, ಉತ್ತಮವಾದ ಸಮಾಜ ನಿರ್ಮಾಣದ ಯೋಜನೆಗಾಗಿ ಸದ್ಯದಲ್ಲಿಯೇ ಮಹಾಸಭೆ ನಡೆಸಿ ಅನುಭವಸ್ಥರು ಹಾಗೂ ಯುವಕರಿಂದ ಕೂಡಿದ ಆಡಳಿತ ಮಂಡಳಿಯನ್ನು ರಚಿಸಿ ಮುಂದಿನ ಕಾರ್ಯ ಚಟುವಟಿಕೆಗಳಿಗೆ ಕಾರ್ಯೋನ್ಮುಖರಾಗಿ ಎಂದು ಸಲಹೆ ನೀಡಿದರು.

ವಿಧಾನಸಭೆಯ ಮಾಜಿ ಅಧ್ಯಕ್ಷ ಕೊಂಬಾರನ ಜಿ. ಬೋಪಯ್ಯ ಮಾತನಾಡಿ, ಸಮಾಜಕ್ಕೆ ಬರುವ ಸರಕಾರದ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಳ್ಳ ಬೇಕು. ಶಾಸಕನಾಗಿದ್ದಾಗ ಅನುದಾನ ಕೊಡಿಸಲು ಸಾಧ್ಯವಾಗಿರಲಿಲ್ಲ. ಮುಂದಿನ ದಿನಗಳಲ್ಲಿ ಅನುದಾನ ಕ್ರೋಢೀಕರಣಕ್ಕೆ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ಶಾಸಕ ಎಂ.ಪಿ.ಸುಜಾ ಕುಶಾಲಪ್ಪ ಮಾತನಾಡಿ, ಗೌಡರು ಹಾಗೂ ಕೊಡವರು ಸಹಬಾಳ್ವೆಯಿಂದ ಇರಬೇಕು, ನಮ್ಮ ಒಗ್ಗಟ್ಟು ಮತ್ತಷ್ಟು ಗಟ್ಟಿಯಾಗಬೇಕು ತಮ್ಮ ಅನುದಾನದಿಂದ ಭವನದ ನಿರ್ಮಾಣಕ್ಕೆ 5ಲಕ್ಷ ರೂ. ನೀಡುವುದಾಗಿ ಆಶ್ವಾಸನೆ ನೀಡಿದರು.

ಗೌಡ ಸಮಾಜದ ಅಧ್ಯಕ್ಷ ಮುಕ್ಕಾಟ್ಟಿ ವಾಸು ಗಣಪತಿ ಮಾತನಾಡಿದರು. ಒಕ್ಕೂಟದ ಕಾರ್ಯದರ್ಶಿ ಪೇರಿಯನ ಉದಯ ಕುಮಾರ್, ಕೊಡಗು, ಬೆಂಗಳೂರು, ಮೈಸೂರು ಸೇರಿದಂತೆ ಜಿಲ್ಲೆಯ ಎಲ್ಲಾ ಭಾಗಗಳ ಗೌಡ ಸಮಾಜಗಳ ಅಧ್ಯಕ್ಷರು ಆಡಳಿತ ಮಂಡಳಿಯ ಪದಾಧಿಕಾರಿಗಳು ಹಾಗೂ ಗಣ್ಯರು ಉಪಸ್ಥಿತರಿದ್ದರು.

ಮೊಬೈಲ್ ಕಸಿದಿದ್ದ ಇಬ್ಬರ ಬಂಧನ



ಸಿದ್ದಯ್ಯ



ಮಾದಪ್ಪ

ಮಡಿಕೇರಿ, ನ.18– ಬಸ್ ತಂಗುದಾಣದಲ್ಲಿ ಮಹಿಳೆಯಿಂದ ಮೊಬೈಲನ್ನು ಕಸಿದು ಪರಾರಿಯಾಗಿದ್ದ ಇಬ್ಬರು ಆರೋಪಿಗಳನ್ನು ಸಿದ್ದಾಪುರ ಪೊಲೀಸರು ಬಂಧಿಸಿದ್ದಾರೆ.

ಘಟ್ಟದಹಳ್ಳ ಪಂಜರಿ ಎರವರ ಸಿದ್ದಯ್ಯ(20) ಮತ್ತು ಪಂಜರಿ ಎರವರ ಮಾದಪ್ಪ(26) ಬಂಧಿತ ಆರೋಪಿಗಳಾಗಿದ್ದಾರೆ. ಪುಲಿಯೇರಿ ಗ್ರಾಮದ ಡಿ.ಶೈನಿ ಎಂಬಾಕೆ ನ.15ರ ಸಂಜೆ 5 ಗಂಟೆ ಸಮಯದಲ್ಲಿ ಬಾಡಗ ಬಾಣಂಗಾಲ ಗ್ರಾಮದ ಮಾರ್ಗೊಲ್ಲಿ ಟಾಟಾ ಕಾಫಿ ಎಸ್ಟೇಟ್ ಸಮೀಪದ ಜಂಕ್ಷನ್ ಬಸ್ ತಂಗುದಾಣದಲ್ಲಿ ಮಕ್ಕಳೊಂದಿಗೆ ಬಸ್‌ಗಾಗಿ ಕಾಯುತ್ತಾ ನಿಂತಿದ್ದರು. ಅಲ್ಲಿಗೆ ಬಂದ ಸಿದ್ದಪ್ಪ ಮತ್ತು ಮಾದಪ್ಪ ಶೈನಿ ಕೈಯಲ್ಲಿದ್ದ ಮೊಬೈಲನ್ನು ಕಿತ್ತು ಪರಾರಿಯಾಗಿದ್ದರು.

ಈ ಕುರಿತು ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು. ಮಾಹಿತಿ ಕಲೆ ಹಾಕಿ ಆರೋಪಿಗಳನ್ನು ಬಂಧಿಸಿ ಮೊಬೈಲ್ ಅನ್ನು ವಶಕ್ಕೆ ಪಡೆಯಲಾಗಿದೆ.

ಡಿವೈಎಸ್‌ಪಿ ಸೂರಜ್, ನಗರ ವೃತ್ತ ನಿರೀಕ್ಷಕ ಪಿ.ಕೆ.ರಾಜು, ಸಿದ್ದಾಪುರ ಠಾಣಾಧಿಕಾರಿ ಮಂಜುನಾಥ್, ಅಪರಾಧ ಪತ್ತೆ ದಳ ಮತ್ತು ತಾಂತ್ರಿಕ ಸಿಬ್ಬಂದಿಗಳು ಈ ಕಾರ್ಯಾಚರಣೆ ನಡೆಸಿದ್ದಾರೆ.

ಪೊನ್ನವ್ವ ನಿಧನ



ನಾಪೋಕ್ಲು, ನ.18–ಇಲ್ಲಿಗೆ ಸಮೀಪದ ಕಕ್ಕಬೆ ಗ್ರಾ.ಪಂ.ನ ನಾಲಡಿ ಗ್ರಾಮದ ನಿವಾಸಿ ಅಯ್ಯನೆರ ವಂಡ ಪೊನ್ನವ್ವ (99) ಮಂಗಳವಾರ ನಿಧನರಾಗಿದ್ದಾರೆ. ಮೃತರ ಅಂತ್ಯಕ್ರಿಯೆ ಮಂಗಳವಾರ ಅಯ್ಯ ನೆರವಂಡ ಕುಟುಂಬದ ರುದ್ರ ಭೂಮಿಯಲ್ಲಿ ನೆರವೇರಿತು. ಮೃತರು ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಬಂಧು ಬಾಂಧವರನ್ನು ಅಗಲಿದ್ದಾರೆ.

ಬಸವೇಶ್ವರ ದೇವಾಲಯದಲ್ಲಿ ದೀಪಾಲಂಕಾರ



ಬಸವೇಶ್ವರ ದೇವಾಲಯದಲ್ಲಿ ಕಡೆ ಸೋಮವಾರದ ನಿಮಿತ್ತ ದೀಪಾಲಂಕಾರ ಮಾಡಲಾಗಿತ್ತು.

ವಿರಾಜಪೇಟೆ, ನ.18–ನಗರದ ಜೈನರ ಬೀದಿಯಲ್ಲಿರುವ ಶ್ರೀ ಬಸವೇಶ್ವರ ದೇವಾಲಯದಲ್ಲಿ ವರ್ಷಂಪ್ರತಿಯಂತೆ ಕಾರ್ತಿಕ ಮಾಸದ ಕೊನೆಯ ಸೋಮವಾರ (ನ.17) ಸಂಜೆ ಶ್ರೀ ಬಸವೇಶ್ವರ ದೇವರಿಗೆ ದೀಪಾಲಂಕಾರ, ವಿಶೇಷ ಪೂಜೆ ಮಹಾಪೂಜೆ ನಂತರ ಭಕ್ತಾದಿಗಳಿಗೆ ಪ್ರಸಾದ ವಿತರಣೆ ಬಳಿಕ ಬಾಣಬಿರುಸುಗಳನ್ನು ಪಟಾಕಿಗಳನ್ನು ಸಿಡಿಸಲಾಯಿತು.

ಕಾರ್ತಿಕ ಮಾಸದ ಕೊನೆಯ ಸೋಮವಾರದ ಪೂಜಾ ಕಾರ್ಯದಲ್ಲಿ ಬಸವೇಶ್ವರ ದೇವಾಲಯ ಸಮಿತಿ ಅಧ್ಯಕ್ಷ ಎಂ.ಬಿ. ನಾಗರಾಜು, ಉಪಾಧ್ಯಕ್ಷ ಜೆ.ಎನ್.ಪುಷ್ಪರಾಜ್ ಸಮಿತಿ ಸದಸ್ಯರಾದ ಕೆ.ಜಿ.ಅರುಣ್ ಕುಮಾರ್, ಬಿ.ಎಂ.ಪುರುಷೋತ್ತಮ, ವಕೀಲರಾದ ಬೆಂಗಳೂರಿನ ರವೀಂದ್ರನಾಥ್ ಕಾಮತ್, ಅಂಬಿ ಕೃಷ್ಣಮೂರ್ತಿ, ನರೇಂದ್ರ ಕಾಮತ್, ಚಂದ್ರಪ್ರಸಾದ್, ನಿಕ್ಷೇಪ್, ಕುಪ್ಪಂಡ ರಾಜೀವ್, ಮಳೇಟಿರ ಸಾಬಾ ಸೇರಿದಂತೆ ಪಟ್ಟಣದ ಇತರೆಡೆಗಳಿಂದಲೂ ಭಕ್ತಾದಿಗಳು ಪೂಜಾ ಕಾರ್ಯದಲ್ಲಿ ಭಾಗವಹಿಸಿದ್ದರು.

ಇಂದು ಕೆಡಿಪಿ ಸಭೆ

ಮಡಿಕೇರಿ, ನ.18–ಶಾಸಕ ಡಾ. ಮಂತರ್ ಗೌಡ ಅಧ್ಯಕ್ಷತೆಯಲ್ಲಿ ನ. 19ರ ಬೆಳಗ್ಗೆ 10.30 ಗಂಟೆಗೆ ಸೋಮವಾರ ಪೇಟೆ ತಾಪಂ ಸಭಾಂಗಣದಲ್ಲಿ ತಾಲೂಕು ತ್ರೈಮಾಸಿಕ ಕೆಡಿಪಿ ಸಭೆ ನಡೆಯಲಿದೆ ಎಂದು ತಾಪಂ ಇಓ ಪರಮೇಶ್ ತಿಳಿಸಿದ್ದಾರೆ.

ರಾಜಾಸೀಟು ಅಭಿವೃದ್ಧಿ ಸಮಿತಿ ಸಭೆ



ಜಿಲ್ಲಾಧಿಕಾರಿ ಕಚೇರಿಯಲ್ಲಿ ರಾಜಾಸೀಟು ಅಭಿವೃದ್ಧಿ ಸಮಿತಿ ಸಭೆ ನಡೆಯಿತು.

ಮಡಿಕೇರಿ, ನ.18– ರಾಜಾಸೀಟು ಅಭಿವೃದ್ಧಿ ಸಮಿತಿ ಸಭೆಯು ಜಿಲ್ಲಾಧಿಕಾರಿ ವೆಂಕಟ್ ರಾಜಾ ಅಧ್ಯಕ್ಷತೆಯಲ್ಲಿ ನಡೆಯಿತು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ರಾಜಾಸೀಟಿನಲ್ಲಿ ಮೂಲ ಸೌಲಭ್ಯ ಕಲ್ಪಿಸುವುದು ಮತ್ತಿತರ ಸಂಬಂಧ ಕ್ರಮವಹಿಸಲಾಗಿದೆ. ಫಲಪುಷ್ಪ ಪ್ರದರ್ಶನವನ್ನು ಜನವರಿ, ಫೆಬ್ರವರಿಯಲ್ಲಿ ನಡೆಸಲಾಗುವುದು ಎಂದು ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಶಶಿಧರ ತಿಳಿಸಿದರು.

ಉಪ ಪೊಲೀಸ್ ವರಿಷ್ಠಾಧಿಕಾರಿ ದಿನೇಶ್ ಕುಮಾರ್ ಮಾತನಾಡಿ, ರಾಜಾಸೀಟಿನಲ್ಲಿ ಜಿಪ್‌ಲೈನ್ ನಿರ್ವಹಣೆಯನ್ನು ಕನ್ನಡ ಭಾಷೆ ಬರದಿರುವವರು ನಡೆಸುತ್ತಿದ್ದು, ಈ ಬಗ್ಗೆ ದೂರುಗಳು ಬರುತ್ತಿವೆ. ಆದ್ದರಿಂದ ಜನರ ಜೊತೆ ಸಂವಾದ ನಡೆಸುವವರನ್ನು ನಿಯೋಜಿಸುವಂತೆ ಸಲಹೆ ಮಾಡಿದರು. ನಿರ್ಮಿತಿ ಕೇಂದ್ರದ ಯೋಜನಾ ನಿರ್ದೇಶಕ ಸಚಿನ್ ಮಾತನಾಡಿ, ರಾಜಾಸೀಟಿನಲ್ಲಿ ಮೂಲ ಸೌಲಭ್ಯ ಕಲ್ಪಿಸಲು ಅಂದಾಜು ಪಟ್ಟಿ ತಯಾರಿಸಲಾಗಿದೆ ಎಂದರು.

ಹೆಚ್ಚುವರಿ ಜಿಲ್ಲಾಧಿಕಾರಿ ಆರ್.ಐಶ್ವರ್ಯ, ಉಪ ವಿಭಾಗಾಧಿಕಾರಿ ಹಾಗೂ ಪ್ರವಾಸೋದ್ಯಮ ಇಲಾಖೆ ಉಪ ನಿರ್ದೇಶಕ ನಿತಿನ್ ಚಕ್ಕಿ ನಗರಸಭೆ ಪೌರಾಯುಕ್ತ ಎಚ್.ಆರ್. ರಮೇಶ್, ತೋಟಗಾರಿಕೆ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಫಣೀಂದ್ರ, ಸಹಾಯಕ ನಿರ್ದೇಶಕ ಮುತ್ತಪ್ಪ, ವಿವಿಧ ಇಲಾಖೆ ಅಧಿಕಾರಿಗಳು ಇದ್ದರು.

ಇಂದು ಪಾಡಿಯಲ್ಲಿ ಪುತ್ತರಿ ನಮ್ಮೆಯ ದಿನ

ನಾಪೋಕ್ಲು, ನ.18– ಕಕ್ಕಬ್ಬೆಯ ಪಾಡಿ ಇಗ್ಗುತ್ತಪ್ಪ ದೇವಾಲಯದಲ್ಲಿ ಬುಧವಾರ ದಿನಪಾಡಿಯ ಇಗ್ಗುತ್ತಪ್ಪ ದೇವಸ್ಥಾನದ ಪರಂಪರಾಗತ "ಪತ್ತೆಪರೆ'ಯಲ್ಲಿ ಬೆಳಿಗ್ಗೆ 10.30ಕ್ಕೆ ದೇವತಕ್ಕರು ಮತ್ತು ತಕ್ಕಮುಖ್ಯಸ್ಥರು ನಾಡುತಕ್ಕರನ್ನೊಳಗೊಂಡ ಸಭೆಯಲ್ಲಿ ದೇವಸ್ಥಾನದ ಜ್ಯೋತಿಷ್ಯ ಶಾಸ್ತ್ರಾಧಿಕಾರಿ ಅಮ್ಮಂಗೇರಿ ಕಣಿಯರಿಂದ ಪುತ್ತರಿ ದಿನ ಮತ್ತು ಕದಿರು ತೆಗೆಯುವ ಶುಭಘಳಿಗೆಯನ್ನು ನಿಗದಿಗೊಳಿಸಲಾಗುವುದು.

ಅಂದೇ ಮಧ್ಯಾಹ್ನದ ನಿತ್ಯ ಪೂಜೆಯ ನಂತರ ಅಪರಾಹ್ನ ಆದಿಸ್ಥಾನ ಮಲ್ಮದಲ್ಲಿ ದೇಶಕಟ್ಟು ಜಾರಿಯಾಗಲಿದೆ. ದೇಶಕಟ್ಟು ಡಿ. ನಾಲ್ಕರ ಬಿಚ್ಚ್ಯಾರ್ ಕಲ್ಲಾಚ್ಚ ನಮ್ಮೆಯವರೆಗೂ ಜಾರಿಯಲ್ಲಿದ್ದು ಅಂದು "ಮಲ್ಮ"ದಲ್ಲಿ ಸಾಂಪ್ರದಾಯಿಕ ವಿಧಿವಿಧಾನದೊಂದಿಗೆ ಮತ್ತು ಉತ್ಸವ ಮೂರ್ತಿಯನ್ನು ಮಲ್ಮ ಬೆಟ್ಟಕ್ಕೆ ಕೊಂಡೊಯ್ದು, ಪಾಡಿ, ನೆಲಜಿ, ಪೇರೂರುವಿನಿಂದ ವಿವಿಧ ತಕ್ಕಮುಖ್ಯಸ್ಥರ ಐನ್ಮನೆಗಳಿಂದ ಆಗಮಿಸುವ ಎತ್ತುಪೋರಾಟದೊಂದಿಗೆ (ಜೋಡೆತ್ತುಗಳ ಪೋರಾಟ) ಆದಿಸ್ಥಾನ ಮಲ್ಮದಲ್ಲಿ ಒಟ್ಟುಗೂಡಿ ಮಲ್ಮದ ದೇವನೆಲೆಯ ಪ್ರದಕ್ಷಿಣೆಯ ತರುವಾಯ ನೈವೇದ್ಯ ಅರ್ಪಣೆಗೂ ಮುನ್ನ ಸಾಂಪ್ರದಾಯಿಕವಾಗಿ ತಂದಂತಹ "ಪೋರ" ಅಂದರೆ ಜೋಡೆತ್ತುಗಳೊಂದಿಗೆ ತಂದಂತಹ ಧಾನ್ಯದ ರಾಶಿಯನ್ನು ಒಟ್ಟಿಗೆ ಸುರಿದು ಸಂಜೆ ವೇಳೆಗೆ ದೇವತಕ್ಕರು ಅದನ್ನು ಇಬ್ಭಾಗ ಮಾಡುವುದರೊಂದಿಗೆ ದೇಶಕಟ್ಟು ಕೊನೆಗೊಳ್ಳಲಿದೆ.

ಮೂಲಭೂತ ಸೌಕರ್ಯ ಕಲ್ಪಿಸದಿದ್ದರೆ ನ.20ರಂದು ಮುಖ್ಯಮಂತ್ರಿ ಎದುರು ಪ್ರತಿಭಟನೆ; ಎಚ್ಚರಿಕೆ



ರಾಜ್ಯ ಗೃಹ ಮಂಡಳಿಯ ವಿಜಯನಗರ ಬಡಾವಣೆಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಡುವಂತೆ ಒತ್ತಾಯಿಸಿ ನಿವಾಸಿಗಳು ಹೆಚ್ಚುವರಿ ಜಿಲ್ಲಾಧಿಕಾರಿ ಜವರೇಗೌಡರಿಗೆ ಮನವಿ ಸಲ್ಲಿಸಿದರು.

ಚಾಮರಾಜನಗರ, ನ.18– ನಗರದ 8ನೇ ವಾರ್ಡ್‌ನ ಅಂಬೇಡ್ಕರ್ ಕ್ರೀಡಾಂಗಣದ ಸಮೀಪದಲ್ಲಿ ರಾಜ್ಯ ಗೃಹ ಮಂಡಳಿ ನಿರ್ಮಿಸಿರುವ ವಿಜಯನಗರ ಬಡಾವಣೆಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿ ಕೊಡದಿದ್ದರೆ ನ. 20 ರಂದು ಮುಖ್ಯಮಂತ್ರಿ ಎದುರು ರಸ್ತೆ ತಡೆ ಮಾಡುವುದಾಗಿ ನಿವಾಸಿಗಳು ಎಚ್ಚರಿಕೆ ನೀಡಿದ್ದಾರೆ.

ಬಡಾವಣೆ ನಿರ್ಮಾಣಗೊಂಡು ಸುಮಾರು 15 ವರ್ಷಗಳಾಗಿದ್ದರು ಯಾವುದೇ ಮೂಲ ಸೌಕರ್ಯಗಳನ್ನು ಕಲ್ಪಿಸಿಕೊಟ್ಟಿಲ್ಲ. ಪಕ್ಕದ ಮಹದೇಶ್ವರ ಬಡಾವಣೆ, ಡಿ ಆರ್ ಪೊಲೀಸ್ ಕ್ವಾಟ್ರರ್ಸ್‌ನಿಂದ ಬರುವ ಚರಂಡಿ ನೀರಿನ ಮುಖ್ಯ ಕಾಮಗಾರಿಯು ಸ್ಥಗಿತಗೊಂಡಿರುವ ಕಾರಣ ನಮ್ಮ ಬಡಾವಣೆಗೆ ನೀರು ಬಂದು ತುಂಬಿಕೊಂಡು ತೊಂದರೆ ಆಗುತ್ತದೆ. ಈ ಸಮಸ್ಯೆಯನ್ನು ಬಗೆಹರಿಸಬೇಕು. ಎಂದು ಎಡಿಸಿ ಜವರೇಗೌಡರಿಗೆ ನೀಡಿರುವ ಮನವಿಯಲ್ಲಿ ಆಗ್ರಹಿಸಿದ್ದಾರೆ.

ಈ ಬಡಾವಣೆಯನ್ನು ನಂಜನಗೂಡು ರಸ್ತೆಯ ಕೈಗಾರಿಕಾ ಪ್ರದೇಶಕ್ಕೆ ಸೇರಿಸಿದ್ದು, ಮನೆಯ ತೆರಿಗೆ ಕಮರ್ಷಿಯಲ್ ತೆರಿಗೆಯಾಗಿ ಮಾರ್ಪಾಡಾಗಿರುತ್ತದೆ. ಇದರ ಬಗ್ಗೆ ನಗರಸಭಾ ಪೌರಾಯುಕ್ತ, ಕಂದಾಯ ಇಲಾಖೆ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಯಾವುದೇ ಕ್ರಮಕೈಗೊಂಡಿಲ್ಲ. ಬಡಾವಣೆ ಸ್ವಚ್ಛತೆ ಇಲ್ಲದ ಕಾರಣ ಹಾವು, ವಿಷಜಂತುಗಳ ಆವಾಸ ಸ್ಥಾನವಾಗಿದೆ ಎಂದು ಅಳಲು ತೋಡಿಕೊಂಡಿದ್ದಾರೆ

ನಿವಾಸಿಗಳಾದ ಚೂಡಾ ಮಾಜಿ ಅಧ್ಯಕ್ಷ ಆರ್.ಸುಂದರ್, ಉಮ್ಮತ್ತೂರು ಚಂದ್ರು, ವಿ.ಶ್ರೀನಿವಾಸಪ್ರಸಾದ್, ಮಾದೇಶ್, ಸುರೇಶ್, ಮಹಾದೇವಸ್ವಾಮಿ, ಆಶಾ, ಸಿದ್ದಶೆಟ್ಟಿ, ಮಹೇಶ್, ಸುರೇಶ್, ಗಂಗಾಧರ್. ಮಲ್ಲೇಶ್, ಗುತ್ತಿಗೆದಾರ.ಶಂಕರ್, ಕರಿಯನಕಟ್ಟೆ ಮಾದೇಶ್, ಅಗ್ರಾಂ, ಸಿದ್ದಪ್ಪ ಇತರರು ಭಾಗವಹಿಸಿದ್ದರು.

ಸಮನ್ವಯತೆಯಿಂದ ಕೆಲಸ ಮಾಡಲು ಸೂಚನೆ



ಪಟ್ಟಣದ ತಾಲೂಕು ಕಚೇರಿ ಸಭಾಂಗಣದಲ್ಲಿ ಶಾಸಕ ಗಣೇಶ್ ಪ್ರಸಾದ್ ಅಧ್ಯಕ್ಷತೆಯಲ್ಲಿ ಪ್ರಗತಿಪರಿಶೀಲನಾ ಸಭೆ ನಡೆಯಿತು.

ಗುಂಡ್ಲುಪೇಟೆ, ನ.18(ಸೋಮ್.ಜಿ)– ಕ್ಷೇತ್ರದ ಎಲ್ಲಾ ಇಲಾಖೆಗಳಲ್ಲಿಯೂ ಅಧಿಕಾರಿಗಳು ಪರಸ್ಪರ ಸಮನ್ವಯತೆಯಿಂದ ಕೆಲಸ ಮಾಡಬೇಕು ಎಂದು ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಹೇಳಿದರು.

ಮಂಗಳವಾರ ಪಟ್ಟಣದ ತಾಲೂಕು ಕಚೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಇತ್ತೀಚೆಗೆ ಹುಲಿಗಳ ದಾಳಿಯಿಂದ ತೊಂದರೆಗೊಳಗಾಗಿರುವ ಹೆಡಿಯಾಲಕ್ಕೆ ಹೋಗಿದ್ದಾಗ ನಿಮ್ಮ ಸಮಸ್ಯೆಗಳಿಗೆ ಏನು ಕಾರಣ ಎಂದು ಗ್ರಾಮಸ್ಥರನ್ನು ಕೇಳಿದ್ದಕ್ಕೆ ಅಧಿಕಾರಿಗಳಲ್ಲಿ ಸಮನ್ವಯತೆ ಇಲ್ಲದಿರುವುದೇ ಕಾರಣ ಎಂದು ಹೇಳಿದ್ದು ಆದ್ದರಿಂದ ಅರಣ್ಯ ಇಲಾಖೆ ಕಾಡಂಚಿನಲ್ಲಿ ಕೂಡಲೇ ಜಂಟಿ ಸರ್ವೇ ನಡೆಸಿ ಸಾಗುವಳಿ, ನಿರಾಪೇಕ್ಷಣಾ ಪತ್ರ ಕೊಡಿಸುವ ಮೂಲಕ ಕಂದಾಯ ಭೂಮಿಯ ಮಾಲೀಕರಿಗೆ ಆಗುತ್ತಿರುವ ತೊಂದರೆ ತಪ್ಪಿಸಬೇಕು ಎಂದು ತಾಕೀತು ಮಾಡಿದರು.

ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿ ಟಿ.ಆರ್. ಸ್ವಾಮಿ ಮಾತನಾಡಿ, ಉಪಕಾರ ಕಾಲೋನಿಯ ಶಾಲೆ ಕಾಮಗಾರಿಗೆ ಅನುದಾನ ದೊರೆತಿದ್ದು ಕಾಮಗಾರಿ ಆರಂಭ ಮಾಡಬೇಕಿದೆ ಎಸ್‌ಎಸ್‌ಎಲ್‌ಸಿ ಮಕ್ಕಳಿಗೆ ಶನಿವಾರ ಭಾನುವಾರವೂ ಸಹ ವಿಶೇಷ ತರಗತಿಗಳನ್ನು ನಡೆಸಲಾಗುತ್ತಿದ್ದು ಈ ಬಾರಿಯೂ ಉತ್ತಮ ಫಲಿತಾಂಶ ನೀಡಲು ಕ್ರಮಕೈಗೊಳ್ಳಲಾಗಿದೆ ಎಂದು ಹೇಳಿದರು. ಶಾಲೆಗಳ ಮೂಲ ಸೌಕರ್ಯ ಕೊರತೆ ಕುರಿತು ಗಮನಹರಿಸಿ, ಮಕ್ಕಳಿಗೆ ಪೂರಕ ವಾತಾವರಣ ನಿರ್ಮಿಸಿ ಕೊಡಿ, ಇದಕ್ಕೆ ಬೇಕಾದ ಅನುದಾನವನ್ನು ಒದಗಿಸಲಾಗುವುದು. ಮಕ್ಕಳ ಕೊರತೆಯಿಂದ ಶಾಲೆಯ ಶಿಕ್ಷಕರನ್ನು ಬೇರೆ ಶಾಲೆಗೆ ವರ್ಗಾವಣೆ ಮಾಡಿದರೆ ಸ್ಥಳೀಯ ಮುಖಂಡರಿಂದ ಶಿಫಾರಸ್ಸು ಮಾಡಿಸುತ್ತಿದ್ದಾರೆ. ಇದನ್ನು ತಪ್ಪಿಸಲು ಕ್ರಮಕೈಗೊಳ್ಳಿ ಎಂದು ಶಾಸಕರು ಬಿಇಓ ಸ್ವಾಮಿ ಅವರಿಗೆ ಸೂಚನೆ ನೀಡಿದರು.

ಕಾಡಂಚಿನ ಬೊಮ್ಮನಹಳ್ಳಿ ಸರ್ಕಾರಿ ಪ್ರಾಥಮಿಕ ಆರೋಗ್ಯಕೇಂದ್ರಕ್ಕೆ ವೈದ್ಯರು ಪ್ರತಿ ದಿನವೂ ಮಧ್ಯಾಹ್ನದ ನಂತರ ಬರುತ್ತಿದ್ದಾರೆ. ಇದರಿಂದ ರೋಗಿ ಗಳಿಗೆ ತೀವ್ರ ಅನಾನುಕೂಲವಾಗುತ್ತಿದೆ, ಈ ಬಗ್ಗೆ ಹಲವಾರು ಬಾರಿ ದೂರು ನೀಡಿದ್ದರೂ ಯಾವುದೇ ಉಪಯೋಗವಾಗಿಲ್ಲ ಎಂದು ಟಿಎಪಿಸಿಎಂಎಸ್ ಅಧ್ಯಕ್ಷ ಜಿ.ಮಡಿವಾಳಪ್ಪ ದೂರಿದರು. ತಾಲೂಕು ಆರೋಗ್ಯಾಧಿಕಾರಿ ಡಾ.ಅಲೀಂ ಪಾಷಾ ಮಾತನಾಡಿ, ಈ ಬಗ್ಗೆ ಸದರಿ ವೈದ್ಯರಿಗೆ ತಿಳುವಳಿಕೆ ನೀಡಲಾಗಿದೆ. ಆಸ್ಪತ್ರೆಗಳಿಗೆ ವೈದ್ಯರ ಕೊರತೆ ಇದ್ದರೂ ಸಮರ್ಥವಾಗಿ ರೋಗಿಗಳಿಗೆ ಸೇವೆ ನೀಡಲಾಗುತ್ತಿದೆ ಎಂದು ತಿಳಿಸಿದರು.

ತಹಶೀಲ್ದಾರ್ ಎಂ.ಎಸ್.ತನ್ಮಯಿ, ತಾಪಂ ಇಓ ಷಣ್ಮುಗಂ, ಪುರಸಭೆ ಮುಖ್ಯಾಧಿಕಾರಿ ಶರವಣ ಸೇರಿದಂತೆ ನಾನಾ ಇಲಾಖೆಗಳ ಮುಖ್ಯಸ್ಥರು ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಇದ್ದರು.

ಸಾಲುಮರದ ತಿಮ್ಮಕ್ಕನ ಪರಿಸರ ಸಂರಕ್ಷಣಾ ಸೇವೆ ಅನನ್ಯ



ವೃಕ್ಷಮಾತೆ ಸಾಲುಮರದ ತಿಮ್ಮಕ್ಕನ ಗೌರವಾರ್ಥ ಚಾಮರಾಜೇಶ್ವರ ದೇವಸ್ಥಾನ ಮುಂಭಾಗದಲ್ಲಿ ಜಿಲ್ಲಾ ಕನ್ನಡಪರ ಸಂಘಟನೆಗಳ ಒಕ್ಕೂಟ ಶ್ರದ್ಧಾಂಜಲಿ ಸಲ್ಲಿಸಿತು.

ಚಾಮರಾಜನಗರ, ನ.18–ಈಚೆಗೆ ನಿಧನರಾದ ವೃಕ್ಷಮಾತೆ ಸಾಲುಮರದ ತಿಮ್ಮಕ್ಕನ ಗೌರವಾರ್ಥ ನಗರದ ಚಾಮರಾಜೇಶ್ವರ ದೇವಸ್ಥಾನ ಮುಂಭಾಗದಲ್ಲಿ ಜಿಲ್ಲಾ ಕನ್ನಡಪರ ಸಂಘಟನೆಗಳ ಒಕ್ಕೂಟ ಹಾಗೂ ಗಡಿನಾಡು ಜಿಲ್ಲಾ ಕನ್ನಡಪರ ಹೋರಾಟ ವೇದಿಕೆ ಸಾಲುಮರದ ತಿಮ್ಮಕ್ಕ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಶ್ರದ್ಧಾಂಜಲಿ ಸಲ್ಲಿಸಲಾಯಿತು

ಅಖಿಲ ಕರ್ನಾಟಕ ಕನ್ನಡ ಮಹಾಸಭೆ ಚಾ.ರಂ.ಶ್ರೀನಿವಾಸಗೌಡ ಮಾತನಾಡಿ. 8ಸಾವಿರಕ್ಕೂ ಹೆಚ್ಚು ಗಿಡಗಳನ್ನು ನೆಟ್ಟು, ಪೋಷಣೆ ಮಾಡಿದ್ದು, ಅವು ಹೆಮ್ಮರವಾಗಿ ಬೆಳೆದು, ಸಾರ್ವಜನಿಕರಿಗೆ ನೆರಳು ಒದಗಿಸುತ್ತಿವೆ. ಇಂತಹ ಸಾಧಕರನ್ನು ಸ್ಮರಿಸುವುದು ಕನ್ನಡಿಗರಾದ ನಮ್ಮ ಆದ್ಯ ಕರ್ತವ್ಯವಾಗಿದೆ ಎಂದರು. ನಿಜಧನಿ ಗೋವಿಂದರಾಜು, ಪಣ್ಯದಹುಂಡಿರಾಜು, ಗೊರವರ ಕಲಾವಿದ ಶಿವಮಲ್ಲೇಗೌಡ, ಗಡಿನಾಡು ಕನ್ನಡ ಹೋರಾಟವೇದಿಕೆ ಅಧ್ಯಕ್ಷ ರಾಚಪ್ಪ, ಕನ್ನಡ ಪರ ಹೋರಾಟಗಾರ ಮಹೇಶ್ ಗೌಡ, ಎಸ್‌ಪಿಬಿ ಸಾಂಸ್ಕೃತಿಕ ಕಲಾವೇದಿಕೆ ಅಧ್ಯಕ್ಷ ಶಿವಣ್ಣ, ಲಿಂಗ ರಾಜು, ಸಿದ್ದರಾಜು, ಬಂಗಾರಸ್ವಾಮಿ, ಸುಬ್ಬಯ್ಯ, ರಂಗಸ್ವಾಮನಾಯಕ, ಸುಭಾಷ್, ಶಿವರಾಜು, ನಾಗೇಶ್, ನಾಗೇಂದ್ರ ಇತರರು ಹಾಜರಿದ್ದರು.



ಮುಖ್ಯಮಂತ್ರಿ ಭೇಟಿ ಹಿನ್ನೆಲೆ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಪೂರ್ವಭಾವಿ ಸಭೆ



ಶಾಸಕ ಸಿ.ಪುಟ್ಟರಂಗಶೆಟ್ಟಿ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಪೂರ್ವಭಾವಿ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಚಾಮರಾಜನಗರ, ನ.18– ನಗರದ ಅಂಬೇಡ್ಕರ್ ಕ್ರೀಡಾಂಗಣದಲ್ಲಿ ನಡೆಯಲಿರುವ 72ನೇ ಅಖಿಲ ಭಾರತ ಸಹಕಾರ ಸಪ್ತಾಹ ಸಮಾರೋಪ ಸಮಾರಂಭದಲ್ಲಿ ಪಕ್ಷದ ವಿವಿಧ ಮುಂಚೂಣಿ ಘಟಕದ ಪದಾಧಿಕಾರಿಗಳು, ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಶಾಸಕ ಸಿ.ಪುಟ್ಟರಂಗಶೆಟ್ಟಿ ತಿಳಿಸಿದ್ದಾರೆ.

ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿ ಸಭಾಂಗಣದಲ್ಲಿ ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿದ್ದ ಅವರು, ನ.20 ರ ಬೆಳಗ್ಗೆ 10ಕ್ಕೆ ಸಹಕಾರ ಸಪ್ತಾಹ ಸಮಾರೋಪ ಸಮಾರಂಭವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸುವರು. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಹಕಾರ ಧ್ವಜಾರೋಹಣ ನೆರವೇರಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಅಧ್ಯಕ್ಷತೆ ವಹಿಸಿ ಗೋಪೂಜೆ ಮಾಡುವರು ಎಂದರು. ಸಮಾಜ ಕಲ್ಯಾಣ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಸಹಕಾರ ಪಿತಾಮಹರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವರು. ರಾಜ್ಯ ಸಹಕಾರ ಮಹಾ ಮಂಡಲ ಅಧ್ಯಕ್ಷ ಜಿ.ಟಿ. ದೇವೇಗೌಡ, ಜಿಲ್ಲೆಯ ಶಾಸಕರು, ಸಂಸದರು ವಿವಿಧ ಇಲಾಖೆ ಸಚಿವರು ಭಾಗವಹಿಸುವರು ಎಂದರು. ಇದೇ ವೇಳೆ ಸಹಕಾರರತ್ನ ಪ್ರಶಸ್ತಿ ಪುರಸ್ಕೃತ ಶಾಸಕರನ್ನು ಸನ್ಮಾನಿಸಲಾಯಿತು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ. ಮರಿಸ್ವಾಮಿ, ಚೂಡಾ ಅಧ್ಯಕ್ಷ ಮಹಮದ್ ಅಸ್ಗರ್‌ಮುನ್ನಾ, ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಆರ್. ಮಹದೇವ್, ಮಹಿಳಾ ಅಧ್ಯಕ್ಷೆ ನಾಗರತ್ನ, ಬ್ಲಾಕ್ ಗ್ರಾಮಾಂತರ ಅಧ್ಯಕ್ಷ ಎ.ಎಸ್ ಗುರುಸ್ವಾಮಿ, ಎಪಿಎಂಸಿ ಅಧ್ಯಕ್ಷ ಎಂ.ಬಿ ಗುರುಸ್ವಾಮಿ, ಕೆ.ಪಿ.ಸಿಸಿ ಸದಸ್ಯ ಸೈಯದ್‌ರಫಿ, ನಗರಸಭಾ ಮಾಜಿ ಅಧ್ಯಕ್ಷೆ ಚಿನ್ನಮ್ಮ, ಕಲಾವತಿ, ನಗರಸಭಾ ನಾಮ ನಿರ್ದೇಶಕ ಸ್ವಾಮಿ, ನಸ್ರುಲಾ ಖಾನ್, ಮಾಜಿ ಚೂಡಾ ಅಧ್ಯಕ್ಷ ಸುಹೇಲ್ ಅಲಿಖಾನ್, ಮುಖಂಡರಾದ ಸಿ,ಕೆ ರವಿಕುಮಾರ್, ಮರಿಯಾಲಹುಂಡಿ ಕುಮಾರ್, ರಾಜು, ಎಸ್ಸಿ,ಎಸ್ಟಿ ಜಾಗೃತಿ ಉಸ್ತುವಾರಿ ಸಮಿತಿ ಸದಸ್ಯ ಸಿ. ಸಿದ್ದರಾಜು, ಸೇವಾದಳ ಉಪಾಧ್ಯಕ್ಷ ನಾಗರಾಜು ಪಿ.ಎಲ್.ಡಿ.ಬ್ಯಾಂಕ್ ನಿರ್ದೇಶಕ ರವಿ, ಬಸುಮರಿ, ಚಂಗುಮಣಿ, ಹೆಚ್. ಹೆಚ್. ನಾಗರಾಜು, ಶಿವಕುಮಾರ್, ಸುಹೇಲ್ ಆಲಿಖಾನ್, ನಾಗರಾಜು, ಶಿವಕುಮಾರ್, ಬಸವಣ್ಣ, ಗಣೇಶ್ ಚಂದಕಟ್ಟ ಮೋಳೆ, ಅಪ್ಸರ್ ಅಹಮದ್, ಪಕ್ಷದ ಕಾರ್ಯಕರ್ತರು ಮುಖಂಡರು ಹಾಜರಿದ್ದರು.

ಅಥ್ಲೆಟಿಕ್ ಕ್ರೀಡಾಕೂಟ: ರಾಜ್ಯಮಟ್ಟಕ್ಕೆ ಇಬ್ಬರ ಆಯ್ಕೆ



ಚಾಮರಾಜನಗರ, ನ.18–ನಗರದ ಸೇವಾ ಭಾರತಿ ಆಂಗ್ಲ ಮಾಧ್ಯಮ ಶಾಲೆಯ ಇಬ್ಬರು ವಿದ್ಯಾರ್ಥಿಗಳು ಅಥ್ಲೆಟಿಕ್ ಕ್ರೀಡಾಕೂಟದಲ್ಲಿ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ,

ನಗರದ ಡಾ. ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ನಡೆದ ಜಿಲ್ಲಾ ಅಥ್ಲೆಟಿಕ್ ಕ್ರೀಡಾಕೂಟದದಲ್ಲಿ ಶಾಲೆಯ ಯಮೀನ್ ಉಲ್ಲ್ ಹಕ್ ಎತ್ತರ ಜಿಗಿತದಲ್ಲಿ ಪ್ರಥಮ ಗಳಿಸಿದರೆ, ಹೃತ್ವಿಕ್ ಸಿ. ದ್ವಿತೀಯ ಸ್ಥಾನ ಗಳಿಸಿ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಶಾಲೆಗೆ ಕೀರ್ತಿ ತಂದ ವಿದ್ಯಾರ್ಥಿಗಳಿಬ್ಬರನ್ನು ಸೇವಾ ಭಾರತಿ ಶಿಕ್ಷಣ ಸಂಸ್ಥೆಯ ಖಜಾಂಚಿ ಮಂಜನಾಥ್, ಸದಸ್ಯರಾದ ಮುರುಗೇಂದ್ರ, ಸಿ.ಆರ್. ಪಿ. ಮಹೇಶ್, ಮುಖ್ಯೋಪಾಧ್ಯಾಯ ಮಂಜುನಾಥ್ ಜಿ.ಎ. ದೈಹಿಕ ಶಿಕ್ಷಕ ರವಿ ಜಿ.ಎಲ್, ಆಡಳಿತ ಮಂಡಳಿ ಶಿಕ್ಷಕ ವೃಂದ ಅಭಿನಂದಿಸಿ ರಾಜ್ಯ ಮಟ್ಟದಲ್ಲೂ ಗೆಲುವು ಸಾಧಿಸಿ ಎಂದು ಶುಭ ಹಾರೈಸಿದ್ದಾರೆ,

ಚಾಮರಾಜನಗರದ ಸೇವಾ ಭಾರತಿ ಆಂಗ್ಲ ಮಾಧ್ಯಮ ಶಾಲೆಯ ಇಬ್ಬರು ವಿದ್ಯಾರ್ಥಿಗಳು ಅಥ್ಲೆಟಿಕ್ ಕ್ರೀಡಾಕೂಟದಲ್ಲಿ ರಾಜ್ಯ ಮಟ್ಟಕ್ಕೆ ಆಯ್ಕೆ ಯಾಗಿದ್ದು ಇವರನ್ನು ಸೇವಾ ಭಾರತಿ ಶಿಕ್ಷಣ ಸಂಸ್ಥೆಯ ವತಿಯಿಂದ ಅಭಿನಂದಿಸಲಾಯಿತು.

ನವೆಂಬರ್ ತಿಂಗಳ ಕನ್ನಡಿಗರಾಗಬೇಡಿ



ಕೊಳ್ಳೇಗಾಲ, ನ.18– ಕನ್ನಡ ಭಾಷೆ ಎನ್ನುವುದು ನಮ್ಮೆಲ್ಲರ ಉಸಿರಾಗಬೇಕು. ನಾವು ನವೆಂಬರ್ ತಿಂಗಳ ಕನ್ನಡಿಗರಾಗಕೂಡದು, ಭಾಷಾ ಆರಾಧಕರಾಗಬೇಕು, ಎಂದು ಲಯನ್ಸ್ ಸಂಸ್ಥೆಯ ಮಾಜಿ ಅಧ್ಯಕ್ಷ ಡಾ.ಚನ್ನಮಾದೇಗೌಡ ಹೇಳಿದ್ದಾರೆ.

ಜೆಎಸ್‌ಎಸ್ ಪಿಯು ಕಾಲೇಜಿನಲ್ಲಿ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವದಲ್ಲಿ ಮಾತನಾಡಿ, ಕರ್ನಾಟಕತ್ವ ಎಂಬುದು ಕೇವಲ ನಾಡು ನುಡಿಯ ಅಭಿಮಾನ ವಲ್ಲ, ಎಲ್ಲವನ್ನು ಒಳಗೊಂಡ ಪರಿಶುದ್ಧ ಭಾವನೆ. ನಾವೆ ಲ್ಲರೂ ಒಂದು ಎಂಬ ಪರಿಶುದ್ಧ ಭಾವನೆಯಿಂದ ಈ ನಾಡನ್ನು ಆರಾಧಿಸಬೇಕು, ನಮ್ಮ ಮನೆ ಮನದಲ್ಲೂ ಕನ್ನಡವೇ ನಮ್ಮ ಉಸಿರಾಗಬೇಕು ಎಂದರು.

ಚಿಂತಕ ಶಿವಣ್ಣ ಇಂದ್ವಾಡಿ ಮಾತನಾಡಿ, ಭಾಷಾಭಿಮಾನ ನಮ್ಮೆಲ್ಲರ ತನು ಮನದಲ್ಲೂ ಅನುರಿಸುವಂತಾಗಬೇಕು, ಕೇವಲ ಕನ್ನಡ ರಾಜ್ಯೋತ್ಸವ ಆಚರಿಸಿದರೆ ಅಥವಾ ಪಾಲ್ಗೊಂಡರೆ ಸಾಲದು. ನಮ್ಮ ಮಾತೃಭಾಷೆಯ ಬಗ್ಗೆ ನಾವೆಲ್ಲರೂ ಹೆಚ್ಚಿನ ಅಭಿಮಾನ ಹೊಂದಿ ಭಾಷೆ ವಿಚಾರದಲ್ಲೂ ಧಕ್ಕೆಯಾದಾಗ ಧ್ವನಿಯಾಗಬೇಕು ಎಂದು ಹೇಳಿದರು. ಪ್ರಾಂಶುಪಾಲ ಮೂಕಳ್ಳಿ ಮಹದೇವಸ್ವಾಮಿ ಇನ್ನಿತರರಿದ್ದರು

ಮಂಟೇಸ್ವಾಮಿ ಪ್ರಾಧಿಕಾರ ರಚನೆ, ನೀಲಗಾರರ ಹಾಡುಗಳ ಸಂಗ್ರಹ–ಡಿಜಿಟಲೀಕರಣಕ್ಕೆ ಚಿಂತನೆ

ಸರ್ಕಾರದ ಮಟ್ಟದಲ್ಲಿ ಎಲ್ಲಾ ಪ್ರಯತ್ನ: ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪ್ರೊ. ಪುರುಷೋತ್ತಮ ಬಿಳಿಮಲೆ ಭರವಸೆ

ಮೈಸೂರು, ನ.18(ಎಂಕೆ)– ಮಂಟೇಸ್ವಾಮಿ ಪ್ರಾಧಿಕಾರ ಸ್ಥಾಪನೆ ಹಾಗೂ ನೀಲಗಾರರ ಜಾನಪದ ಹಾಡುಗಳ ಸಂಗ್ರಹ ಮತ್ತು ಡಿಜಿಟಲೀಕರಣಕ್ಕೆ ಸರ್ಕಾರದ ಮಟ್ಟದಲ್ಲಿ ಪ್ರಯತ್ನಿಸಲಾಗುವುದು ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪ್ರೊ.ಪುರುಷೋತ್ತಮ ಬಿಳಿಮಲೆ ಭರವಸೆ ನೀಡಿದರು.

ಮೈಸೂರು ವಿವಿ ಮಾನಸಗಂಗೋತ್ರಿಯಲ್ಲಿರುವ ಪ್ರಸಾರಾಂಗದ ಕುವೆಂಪು ಸಭಾಂಗಣದಲ್ಲಿ 'ಧರೆಗೆ ದೊಡ್ಡವರ ಕಾವ್ಯದ ಏಳು ಪಠ್ಯಗಳು' ಹಾಗೂ 'ನಾವು ಕೂಗುವಾ ಕೂಗು' ಕೃತಿಗಳನ್ನು ಬಿಡುಗಡೆಗೊಳಿಸಿ ಮಾತನಾಡಿದ ಅವರು, ಜಾನಪದ ಕಲೆಗಳ ಕೇಂದ್ರಿಕೃತವಾದ ಆರ್ಕೈವ್ (ಜಾನಪದ ದಾಖಲೆಗಳ ಭಂಡಾರ) ಸ್ಥಾಪನೆ ಅತ್ಯಗತ್ಯವಾಗಿದೆ ಎಂದರು.

ನಾಡಿನ ಜನಪದ ಕಲೆಗಳ ಸಮಗ್ರ ಸಂಗ್ರಹಕ್ಕಾಗಿ ಕರ್ನಾಟಕಕ್ಕೆ ಕೇಂದ್ರಿಕೃತ ಆರ್ಕೈವ್ ನಿರ್ಮಾಣ ಮಾಡಬೇಕಿದೆ.



'ಧರೆಗೆ ದೊಡ್ಡವರ ಕಾವ್ಯದ ಏಳು ಪಠ್ಯಗಳು' ಮತ್ತು 'ನಾವು ಕೂಗುವಾ ಕೂಗು' ಕೃತಿಗಳನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪ್ರೊ.ಪುರುಷೋತ್ತಮ ಬಿಳಿಮಲೆ ಬಿಡುಗಡೆಗೊಳಿಸಿದರು. ಮಳವಳ್ಳಿ, ಆದಿಹೊನ್ನಾಯಕನಹಳ್ಳಿ ಮತ್ತು ಕಪ್ಪಡಿ ಕ್ಷೇತ್ರದ ಪೀಠಾಧಿಪತಿ ಎಂ.ಎಲ್.ವರ್ಚಸ್ವಿ ಶ್ರೀಕಂಠ ಸಿದ್ದಲಿಂಗರಾಜೇ ಅರಸ್, ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಪ್ರಸಾರಂಗದ ನಿರ್ದೇಶಕ ಪ್ರೊ.ಎಂ.ನಂಜಯ್ಯ ಹೊಂಗನೂರು, ನಿವೃತ್ತ ಕನ್ನಡ ಪ್ರಾಧ್ಯಾಪಕ ಪ್ರೊ.ಕೃಷ್ಣಮೂರ್ತಿ ಹನೂರು ಮತ್ತಿತರರಿದ್ದರು.

ಆ ಮೂಲಕ ಕಲಾವಿದರ ಕಲೆ, ಬದುಕು, ಜೀವನವನ್ನು ತಿಳಿಸಬೇಕು. ಆಯಾ ಕಲಾವಿದರ ಹೆಸರನ್ನು ಸರ್ಚ್ ಮಾಡಿದಾಗ ತಕ್ಷಣ ಆತನ ಬದುಕು ಮತ್ತು ಕಲೆಯನ್ನು ತಿಳಿಸುವ ಕೆಲಸವಾಗಬೇಕು ಎಂದು ಪ್ರತಿಪಾದಿಸಿದರು.

> ಯಕ್ಷಗಾನ, ಭೂತಾರಾಧನೆ ದೊಡ್ಡ ಕಲಾ ಸಂಪತ್ತು. ಈ ಕಲಾವಿದರ ಜೀವನದ ಕುರಿತು ಯಾರೊಬ್ಬರು ಕೃತಿಗಳನ್ನು ಬರೆಯುವ ಗೋಜಿಗೆ ಹೋಗುವುದಿಲ್ಲ. ಕಲಾವಿದರ ಬದುಕಿಗೆ ಜಾನಪದ ವಿದ್ವಾಂಸರು ಅಕ್ಷರವಾಗಬೇಕು. ಇಮ ಕಲೆಗೆ ಮೌಲ್ಯ ಸಿಗಬೇಕು. ನಾನು ಹೇಳಿದ ಮೇಲೆ ಏಳೆಂಟು ಪುಸ್ತಕಗಳು ಬಂದಿವೆ. ಆದರೆ, ಈ ಕಾರ್ಯ ಹೆಚ್ಚೆಚ್ಚು ನಡೆಯಬೇಕು.
>
> – ಪ್ರೊ.ಪುರುಷೋತ್ತಮ್ ಬಿಳಿಮಲೆ, ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ

ಜಾನಪದ ಸಾಹಿತ್ಯವನ್ನು ಡಿಜಿಟಲೀಕರಣ ಮಾಡಿದರೆ ಪೀಳಿಗೆಯಿಂದ ಪೀಳಿಗೆಗೆ ತಲುಪಿಸಬಹುದು. ಪುಸ್ತಕಗಳ ದಾಖಲು ಮಾಡುವ ಜೊತೆಗೆ ಡಿಜಿಟಲೀಕರಣ ಕೂಡ ಮಾಡಬೇಕು. ಈ ನಿಟ್ಟಿನಲ್ಲಿ ಕರ್ನಾಟಕ ಜಾನಪದ ಸಂಗ್ರಹಾಲಯ ಅಥವಾ ಜಾನಪದ ಆರ್ಕೈವ್ ನಿರ್ಮಿಸುವ ಕುರಿತು ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು ಎಂದು ಹೇಳಿದರು.

ಒಳ್ಳೆಯ ದಿನಗಳಿಗಾಗಿ ಕಾಯಬೇಕಿದೆ: 70–80ರ ದಶಕದಲ್ಲಿ ಜಾನಪದ ವಿಶ್ವವಿದ್ಯಾನಿಲಯ ಬಹಳ ಸದ್ದು ಮಾಡುತ್ತಿತ್ತು. ಆದರೆ, ಈಗ ಅನುದಾನದ ಕೊರತೆಯಿಂದಾಗಿ ಪೂರಕ ಕೆಲಸಗಳನ್ನು ಮಾಡಲಾಗುತ್ತಿಲ್ಲ. ನೇಮಕಾತಿ ನಡೆಯುತ್ತಿಲ್ಲ. ನಿವೃತ್ತರಿಗೆ ಪಿಂಚಣಿ ಕೊಡಲು ಸಾಧ್ಯವಾಗುತ್ತಿಲ್ಲ. ಬಹಳ ಬೇಗ ಈ ಎಲ್ಲಾ ಸಮಸ್ಯೆಗಳು ಪರಿಹಾರ ಕಾಣಬೇಕಿದೆ. ವ್ಯವಸ್ಥೆ ಬಗೆಗಿನ ಲೋಪಗಳನ್ನು ಹೇಳಲಾಗದು. ಆದರೆ, ಒಳ್ಳೆಯ ದಿನಗಳಿಗಾಗಿ ಕಾಯಬೇಕಿದೆ ಎಂದರಲ್ಲದೆ ಬಿಡುಗಡೆಗೊಳಿಸಿದ ಕೃತಿಗಳ ಪರಿಚಯ ಮಾಡಿಕೊಟ್ಟರು.

ಸಂಕ್ಷಿಪ್ತ ಸಂಶೋಧನೆ ಆಗಬೇಕು: ಕಾರ್ಯಕ್ರಮ ಉದ್ಘಾಟಿಸಿದ ಮಳವಳ್ಳಿ, ಆದಿಹೊನ್ನಾಯಕನಹಳ್ಳಿ ಮತ್ತು ಕಪ್ಪಡಿ ಕ್ಷೇತ್ರದ ಪೀಠಾಧಿಪತಿ ಎಂ.ಎಲ್.ವರ್ಚಸ್ವಿ ಶ್ರೀಕಂಠ ಸಿದ್ದಲಿಂಗರಾಜೇ ಅರಸ್ ಮಾತನಾಡಿ, ಮಂಟೇಸ್ವಾಮಿ ಪರಂಪರೆಯ ಕುರಿತು ಸಂಕ್ಷಿಪ್ತ ಸಂಶೋಧನೆ ನಡೆಸಿ, ಮುಂದಿನ ಪೀಳಿಗೆಗೆ ತಲುಪುವಂತೆ ಮಾಡಬೇಕು. ಹಾಗೆಯೇ ನೀಲಗಾರರ ಕಥೆಗಳನ್ನು ಹಾಡುವುದು ಕಡಿಮೆಯಾಗುತ್ತಿದ್ದು, ಇದರ ಬಗ್ಗೆಯೂ ಗಮನ ಹರಿಸಬೇಕಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಮಾತನಾಡಿ, ಮಂಟೇಸ್ವಾಮಿ ಕಾವ್ಯವು ಮಂಡ್ಯ, ಮೈಸೂರು, ಚಾಮರಾಜನಗರ ಜಿಲ್ಲೆಗಳಲ್ಲಿ ಹೆಚ್ಚು ಪ್ರಚಾರದಲ್ಲಿದೆ. ಈ ಕಾವ್ಯವನ್ನು ಮೊದಲ ಬಾರಿಗೆ ಮೈಸೂರು ವಿವಿ ಜಾನಪದ ಪ್ರಾಧ್ಯಾಪಕರಾಗಿದ್ದ ಪ್ರೊ.ಜೀ.ಶಂ.ಪರಮಶಿವಯ್ಯ ಅವರು ಸಂಗ್ರಹಿಸಿ ಪ್ರಕಟಿಸಿದ್ದರು ಎಂದು ತಿಳಿಸಿದರು. ಮೈಸೂರು ವಿವಿ ಪ್ರಸಾರಾಂಗದ ನಿರ್ದೇಶಕ ಪ್ರೊ.ಎಂ.ನಂಜಯ್ಯ ಹೊಂಗನೂರು, ನಿವೃತ್ತ ಕನ್ನಡ ಪ್ರಾಧ್ಯಾಪಕ ಪ್ರೊ.ಕೃಷ್ಣಮೂರ್ತಿ ಹನೂರು ಮತ್ತಿತರರಿದ್ದರು.

ಶಾಸಕ ಟಿ.ಎಸ್.ಶ್ರೀವತ್ಸ ಪಾದಯಾತ್ರೆ



ಕೆ.ಆರ್.ಕ್ಷೇತ್ರದ ವಾರ್ಡ್ ನಂ.47ರಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ ಪಾದಯಾತ್ರೆ ನಡೆಸಿ, ವಾರ್ಡ್ ಸಮಸ್ಯೆಗಳ ಬಗ್ಗೆ ಮಾಹಿತಿ ಪಡೆದು, ಸ್ಥಳದಲ್ಲೇ ಸಮಸ್ಯೆಗಳನ್ನು ಬಗೆಹರಿಸಲು ಅಧಿಕಾರಿಗಳಿಗೆ ಸೂಚಿಸಿದರು. ಈ ವೇಳೆ ಮಾಜಿ ಮೇಯರ್ ಶಿವಕುಮಾರ್, ವಾರ್ಡ್ ಅಧ್ಯಕ್ಷ ಸಂಪತ್, ಮುಖಂಡರಾದ ಉಪೇಂದ್ರ, ಕೇಬಲ್ ಸೋಮು, ಶಾಂತವೀರಪ್ಪ, ಅರವಿಂದ, ರಾಮ್‌ಪ್ರಸಾದ್, ವಲಯ ಕಚೇರಿ–3ರ ಯೋಜನಾಧಿಕಾರಿ ಸತ್ಯಮೂರ್ತಿ, ವಾಣಿವಿಲಾಸ ಅಧಿಕಾರಿಗಳಾದ ಧನುಷ್, ಪ್ರಸನ್ನ ಹಾಗೂ ವಾರ್ಡ್ ನಿವಾಸಿಗಳು ಉಪಸ್ಥಿತರಿದ್ದರು.

ಬಿಜೆಪಿ ನೆರಳಲ್ಲಿ ಕೆಲಸ ಮಾಡುತ್ತಿಲ್ಲ ಎಂದು ಆಯೋಗ ಸಾಬೀತುಪಡಿಸಲಿ: ಕಾಂಗ್ರೆಸ್

ನವದೆಹಲಿ: ಚುನಾವಣಾ ಆಯೋಗವು ಕೇಂದ್ರದ ಬಿಜೆಪಿ ಸರ್ಕಾರದ ಅಡಿಯಲ್ಲಿ ಕೆಲಸ ಮಾಡುತ್ತಿಲ್ಲ ಎಂಬುದನ್ನು ಸಾಬೀತುಪಡಿಸಬೇಕು ಎಂದು ಕಾಂಗ್ರೆಸ್ ಆಗ್ರಹಿಸಿದೆ.



ಮತ ಕಳ್ಳತನ ಆರೋಪಕ್ಕೆ ಸಂಬಂಧಿಸಿದಂತೆ ತನ್ನ ನಿಲುವನ್ನು ವ್ಯಕ್ತಪಡಿಸಿರುವ ಕಾಂಗ್ರೆಸ್, ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐ ಆರ್) ಪ್ರಕ್ರಿಯೆಯಲ್ಲಿ ಚುನಾವಣಾ ಆಯೋಗದ ನಡವಳಿಕೆಯು ತೀವ್ರ ನಿರಾಶಾದಾಯಕವಾಗಿದೆ ಎಂದು ಹೇಳಿದೆ.

ಎಸ್‌ಐಆರ್ ನಡೆಯುತ್ತಿರುವ 12 ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳ ಪಕ್ಷದ ಪದಾಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಅಧ್ಯಕ್ಷತೆ ವಹಿಸಿದ್ದ ಮಲ್ಲಿಕಾರ್ಜುನ ಖರ್ಗೆ, ಈ ಕುರಿತು ಮಾತನಾಡಿದ್ದಾರೆ.

ಮತದಾರರ ಪಟ್ಟಿಯನ್ನು ಸಮಗ್ರತೆಯನ್ನು ಕಾಪಾಡಲು ಕಾಂಗ್ರೆಸ್ ಪಕ್ಷವು ಬದ್ಧವಾಗಿದೆ ಎಂದು ಅವರು ಪ್ರತಿಪಾದಿಸಿದ್ದಾರೆ. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಜನರ ವಿಶ್ವಾಸ ಕುಂದುತ್ತಿರುವ ಈ ಸಮಯದಲ್ಲಿ ಎಸ್‌ಐಆರ್‌ಗೆ ಸಂಬಂಧಿಸಿದಂತೆ ಚುನಾವಣಾ ಆಯೋಗದ ನಡವಳಿಕೆಯು ತೀವ್ರ ನಿರಾಶಾದಾಯಕವಾಗಿದೆ ಎಂದು ಅವರು ಹೇಳಿದ್ದಾರೆ.

ಆಯೋಗವು ಆಡಳಿತದಲ್ಲಿರುವ ಬಿಜೆಪಿಯ ನೆರಳಿನಲ್ಲಿ ಕಾರ್ಯನಿರ್ವಹಿಸುತ್ತಿಲ್ಲ ಎಂದು ಸಾಬೀತುಪಡಿಸಬೇಕು. ದೇಶದ ಸಾಂವಿಧಾನಿಕ ಮತ್ತು ನಿಷ್ಠೆಯನ್ನು ಪ್ರದರ್ಶಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಬಿಜೆಪಿಯು ಮತಕಳ್ಳತನಕ್ಕಾಗಿ ಎಸ್‌ಐಆರ್ ಪ್ರಕ್ರಿಯೆಯನ್ನು ಅಸ್ತ್ರವಾಗಿ ಬಳಸಿಕೊಳ್ಳುತ್ತಿದೆ. ಹಾಗಾಗಿ ನಮ್ಮ ಕಾರ್ಯಕರ್ತರು ಅತ್ಯಂತ ಜಾಗರೂಕರಾಗಿರಬೇಕು. ಪ್ರಜಾಪ್ರಭುತ್ವದ ರಕ್ಷಣೆಗೆ ನಾವು ಬದ್ಧರಾಗಿದ್ದು, ಪ್ರಜಾಪ್ರಭುತ್ವದ ಮೌಲ್ಯಗಳನ್ನು ನಾಶವಾಗಲು ಬಿಡುವುದಿಲ್ಲ ಎಂದು ಹೇಳಿದ್ದಾರೆ.

ಡಾ.ಎಂಜಿಆರ್ ಅರಸ್, ಬಸವ ಸಮಿತಿ ಕಾರ್ಯಾಧ್ಯಕ್ಷ ಲೋಕೇಶಪ್ಪರಿಗೆ 'ಬಸವಶ್ರೀ' ಪ್ರಶಸ್ತಿ ಪ್ರದಾನ

ಮೈಸೂರು,ನ.18(ಎಸ್‌ಪಿಎನ್)– ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಚುಟುಕು ಸಾಹಿತ್ಯ ಪರಿಷತ್ ಸಂಸ್ಥಾಪಕ ಡಾ.ಎಂ.ಜಿ.ಆರ್.ಅರಸ್, ಮೈಸೂರು ಬಿಇಎಂಎಲ್ ಬಸವ ಸಮಿತಿ ಕಾರ್ಯಾಧ್ಯಕ್ಷ ಎಚ್.ಎನ್.ಲೋಕೇಶಪ್ಪ ಅವರಿಗೆ 'ಬಸವಶ್ರೀ' ಪ್ರಶಸ್ತಿಯನ್ನು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಂಗಳವಾರ ಪ್ರದಾನ ಮಾಡಿದರು.

ಮೈಸೂರು ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಪದವಿ ಕಾಲೇಜು ಆವರಣದ ಮಂತ್ರ ಮಹರ್ಷಿ ಸಭಾಭವನದಲ್ಲಿ ಶ್ರೀ ಶಿವರಾತ್ರೀಶ್ವರ ಮಹಿಳಾ ಸಮಾಜದ ವತಿಯಿಂದ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ 110 ನೇ ಜನ್ಮ ದಿನಾಚರಣೆ ಅಂಗವಾಗಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಸಾಧಕರಿಗೆ ಬಸವಶ್ರೀ ಪ್ರಶಸ್ತಿ ಪ್ರದಾನ ಮಾಡಿ, ಶ್ರೀಗಳು ಮಾತನಾಡಿದರು.



ಚುಟುಕು ಸಾಹಿತ್ಯ ಪರಿಷತ್ ಸಂಸ್ಥಾಪಕ ಡಾ.ಎಂ.ಜಿ.ಆರ್.ಅರಸ್, ಮೈಸೂರು ಬಿಇಎಂಎಲ್ ಬಸವ ಸಮಿತಿ ಕಾರ್ಯಾಧ್ಯಕ್ಷ ಎಚ್.ಎನ್.ಲೋಕೇಶಪ್ಪ ಅವರಿಗೆ 'ಬಸವಶ್ರೀ' ಪ್ರಶಸ್ತಿಯನ್ನು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಂಗಳವಾರ ಪ್ರದಾನ ಮಾಡಿದರು.

ಹಲವು ವರ್ಷಗಳಿಂದ ಡಾ.ಎಂ.ಜಿ.ಆರ್. ಅರಸು ಅವರು ಚುಟುಕು ಮತ್ತು ವೈದ್ಯಕೀಯ ಸಾಹಿತ್ಯ ಕ್ಷೇತ್ರದಲ್ಲಿ ಗುರುತಿಸಿಕೊಂಡು ಕೆಲಸ ಮಾಡುತ್ತಿದ್ದು, ಹಲವಾರು ಸಂಘ–ಸಂಸ್ಥೆಗಳು ಹಾಗೂ ರಾಜ್ಯ ಸರ್ಕಾರದಿಂದ ರಾಜ್ಯೋತ್ಸವ ಪ್ರಶಸ್ತಿಗೂ ಭಾಜನರಾಗಿದ್ದಾರೆ. ಅಂತೆಯೇ ಎಚ್.ಎನ್. ಲೋಕೇಶಪ್ಪನವರು ಕಳೆದ 30 ವರ್ಷಗಳಿಂದ ಬಿಇಎಂಎಲ್ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಕೋಲಾರ, ಮೈಸೂರು, ಬೆಂಗಳೂರು ಸೇರಿದಂತೆ ಇತರೆಡೆ ಕೆಲಸ ಮಾಡಿದ್ದಾರೆ. ಜೊತೆಗೆ ಬಿಇಎಂಎಲ್ ಸಂಸ್ಥೆಯಲ್ಲಿ ಬಸವಣ್ಣನ ತತ್ವಗಳನ್ನು ಪ್ರಚಾರ ಮಾಡುವಲ್ಲಿ ಇವರ ಪಾತ್ರವೂ ಇದೆ. ಇವರಿಗೆ ಬಸವಶ್ರೀ ಪ್ರಶಸ್ತಿ ನೀಡಿ, ಗೌರವಿಸಿರುವುದು ಸಂತೋಷದ ಸಂಗತಿ ಎಂದರು.

ಇದಕ್ಕೂ ಮುನ್ನ ಮುಖ್ಯಅತಿಥಿಗಳಾಗಿ ಭಾಗವಹಿಸಿದ್ದ ಡಾ.ಕೃಷ್ಣಮೂರ್ತಿ ಸಂಶೋಧನಾ ಪ್ರತಿಷ್ಠಾನದ ನಿರ್ದೇಶಕಿ ಡಾ.ಲೀಲಾಪ್ರಕಾಶ್ ಮಾತನಾಡಿ, ಸುತ್ತೂರು ಮಠದ ಶೈಕ್ಷಣಿಕ, ಆರೋಗ್ಯ, ಧಾರ್ಮಿಕ ಕ್ಷೇತ್ರದಲ್ಲಿ ಉತ್ತಮ ಕೆಲಸ ಮಾಡುತ್ತಿದೆ. ಹಿರಿಯ ಶ್ರೀಗಳಾದ ಡಾ.ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಕಾಲಘಟ್ಟದಲ್ಲಿ ಸುತ್ತೂರು ಮಠ ವಿಸ್ತಾರವಾಗಿ ಬೆಳೆದಿದೆ. ಇದನ್ನು ಈಗಿನ ಶ್ರೀಗಳಾದ ಶಿವರಾತ್ರಿದೇಶಿಕೇಂದ್ರ ಸ್ವಾಮೀಜಿ ಅವರು, ಮತ್ತಷ್ಟು ವಿಸ್ತಾರವಾಗಿ ಬೆಳೆಸಿ, ಜನರ ಸಾಮಾನ್ಯರಿಗೂ ಉತ್ತಮ ಶಿಕ್ಷಣ, ಆರೋಗ್ಯ ನೀಡುತ್ತಿರುವುದು ಶ್ಲಾಘನೀಯ ಎಂದರು.

ಅಂತೆಯೇ ಎಚ್.ಎನ್.ಲೋಕೇಶಪ್ಪನವರು ಬಿಇಎಂಎಲ್‌ನಲ್ಲಿ 30ಕ್ಕೂ ಅಧಿಕ ವರ್ಷ ಕೆಲಸ ಮಾಡಿದ್ದಾರೆ. ಹಾಗೆ ಬಸವ ಸೇವಾ ಸಮಿತಿ ಸ್ಥಾಪಿಸಿ, ಬಿಇಎಂಎಲ್ ನಲ್ಲಿ ಬಸವತತ್ವ ಪ್ರಚಾರಕ್ಕೆ ನಾಂದಿಯಾಗಿದ್ದಾರೆ. ಅಂತೆಯೇ ವಿವಿಧ ಸಂಘ–ಸಂಸ್ಥೆಗಳಲ್ಲಿ ಗುರುತಿಸಿಕೊಂಡು ಸಮಾಜ ಸೇವಾ ಕಾರ್ಯಕ್ರಮದಲ್ಲಿ ತೊಡಗಿಕೊಂಡಿರುವ ಲೋಕೇಶಪ್ಪ ಅವರಿಗೆ ಈ ಬಾರಿಯ 'ಬಸವಶ್ರೀ' ಪ್ರಶಸ್ತಿ ನೀಡಿ, ಗೌರವಿಸುತ್ತಿರುವುದು ಮೆಚ್ಚುಗೆಯ ವಿಷಯ ಎಂದರು. ಈ ವೇಳೆ ವಿಧಾನ ಪರಿಷತ್ ಮಾಜಿ ಸದಸ್ಯ ತೋಂಟದಾರ್ಯ, ಶಿವರಾತ್ರೀಶ್ವರ ಮಹಿಳಾ ಸಮಾಜದ ಅಧ್ಯಕ್ಷೆ ರತ್ನಹಾಲಪ್ಪಗೌಡ ಸೇರಿದಂತೆ ಇನ್ನಿತರರಿದ್ದರು. ಗಾಯಕಿ ಡಾ.ವಿ. ಮಾಲಿನಿ ಮತ್ತು ತಂಡ ಜೊತೆಗೂಡಿ ವಚನ ಗಾಯನ ನಡೆಸಿಕೊಟ್ಟರು.

ವ್ಯಕ್ತಿ ನಾಪತ್ತೆ



ಮೈಸೂರು,ನ.18(ಎಸ್‌ಪಿಎನ್)– ಕ್ಯಾನ್ಸರ್ ರೋಗಕ್ಕೆ ಚಿಕಿತ್ಸೆ ಪಡೆಯುತ್ತಿದ್ದ ವಿಜಯನಗರ 4ನೇ ಹಂತದ ನಿವಾಸಿ 68 ವರ್ಷದ ಜಯಣ್ಣ ನಾಪತ್ತೆಯಾಗಿದ್ದು, ಈ ಬಗ್ಗೆ ಅವರ ಪತ್ನಿ ವಿಜಯನಗರ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಸೋಮವಾರ ಇವರಿಗೆ ಉಸಿರಾಟ ತೊಂದರೆಯಾಗಿ, ಕೃತಕ ಉಸಿರಾಟ ವ್ಯವಸ್ಥೆ ಮಾಡಲಾಗಿತ್ತು. ಇದರಿಂದ ಬೇಸರಗೊಂಡು ಸೋಮವಾರ ಬೆಳಗ್ಗೆ ಯಾರಿಗೂ ಹೇಳದೆ ಮನೆಯಿಂದ ಹೊರಹೋದವರು ಮತ್ತೆ ಮನೆಗೆ ವಾಪಸ್ಸು ಬಂದಿಲ್ಲ. ಸಂಬಂಧಿಕರ ಮನೆಯಲ್ಲಿ ಹುಡುಕಿದರೂ ಪತ್ತೆಯಾಗದ ಕಾರಣ ವಿಜಯನಗರ ಠಾಣೆಗೆ ಜಯಣ್ಣನವರ ಪತ್ನಿ ದೂರು ನೀಡಿದ್ದಾರೆ. ಇವರ ಗುರುತು ಸಿಕ್ಕಲ್ಲಿ ವಿಜಯನಗರ ಠಾಣೆಯ ಇನ್ಸ್‌ಪೆಕ್ಟರ್ ಮೊ.ಸಂ:94808002241, 0821–2418317 ಕರೆ ಮಾಡಿ ಮಾಹಿತಿ ನೀಡುವಂತೆ ಎಎಸ್‌ಐ ಸುಮನ್‌ರಾವ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಂಗನವಾಡಿ ಕಾರ್ಯಕರ್ತೆಯರ ಗೌರವಧನ ಸಾವಿರ ಹೆಚ್ಚಳ

ತುಮಕೂರು, ನ.18– ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರಿಗೆ ಹಿಂದಿನ ಬಜೆಟ್‌ನಲ್ಲಿ 1 ಸಾವಿರ ಗೌರವ ಧನ ಹೆಚ್ಚಿಸಲಾಗಿದೆ. ಮುಂದಿನ ಬಜೆಟ್‌ನಲ್ಲಿ ಮತ್ತೆ 1 ಸಾವಿರ ಹೆಚ್ಚಿಸಲಾಗುವುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಭರವಸೆ ನೀಡಿದರು.



ನಗರದಲ್ಲಿ ಮಂಗಳವಾರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ (ಐಸಿಡಿಎಸ್) ಸುವರ್ಣ ಮಹೋತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ ಪೂರ್ವಭಾವಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಗೌರವ ಧನ ಹೆಚ್ಚಳದ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಜತೆಗೆ ಚರ್ಚಿಸಲಾಗಿದೆ. ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರಲ್ಲಿ ಶೇ 70ರಷ್ಟು ಮಂದಿ ಗೃಹಲಕ್ಷ್ಮಿ ನೆರವು ಪಡೆಯುತ್ತಿದ್ದಾರೆ. ಗೃಹಲಕ್ಷ್ಮಿ ಸಹಕಾರ ಬ್ಯಾಂಕ್‌ನಲ್ಲಿ 30 ಸಾವಿರದಿಂದ 5 ಲಕ್ಷದ ವರೆಗೆ ಸಾಲ ವಿತರಿಸಲು ಯೋಜನೆ ರೂಪಿಸಲಾಗಿದೆ ಎಂದರು.

ಕಾರ್ಯಕ್ರಮಕ್ಕೂ ಮುನ್ನ ಸುದ್ದಿಗಾರರ ಜತೆ ಮಾತನಾಡಿ, ಹಿಂದಿನ ಎರಡು ತಿಂಗಳ ಗೃಹಲಕ್ಷ್ಮಿ ಹಣ ಬಾಕಿ ಇದೆ. ಆದಷ್ಟು ಶೀಘ್ರ ಬಿಡುಗಡೆ ಮಾಡಲಾಗುವುದು. ಇದಕ್ಕಾಗಿ ತಿಂಗಳಿಗೆ 2,500 ಕೋಟಿ ಬೇಕಾಗುತ್ತದೆ. ಕಾಲಕಾಲಕ್ಕೆ ಫಲಾನುಭವಿಗಳಿಗೆ ಯೋಜನೆಯ ನೆರವು ಕಲ್ಪಿಸಲಾಗುತ್ತಿದೆ ಎಂದು ತಿಳಿಸಿದರು.

ಮೈಸೂರು ರೈಲ್ವೆ ನಿಲ್ದಾಣದಲ್ಲಿ ಕೆಟ್ಟು ಧೂಳಿಡಿಯುತ್ತಿರುವ ಸಿಸಿಟಿವಿ ಕ್ಯಾಮರಾಗಳು!

- ಹಳೆಯ ಕ್ಯಾಮರಾ ದೃಶ್ಯ ಅಸ್ಪಷ್ಟ, ಕಂಟ್ರೋಲ್ ರೂಂನಲ್ಲಿರುವ ಎಲ್‌ಇಡಿ ಟಿವಿ ಕೂಡ ರಿಪೇರಿಗೆ
- 39 ಕ್ಯಾಮರಾಗಳಲ್ಲಿ ಹಲವು ರಿಪೇರಿ
- ಹೊಸ ಕ್ಯಾಮರಾ ಅಳವಡಿಸಲು ರೈಲ್ವೆ ಅಧಿಕಾರಿಗಳ ಬೇಜವಾಬ್ದಾರಿ
- ಸಾವಿರ ಕೋಟಿ ಆದಾಯದಲ್ಲಿ ಕೆಲವು ಲಕ್ಷ ಖರ್ಚು ಮಾಡಲು ಹಿಂದೇಟು




ಮೈಸೂರು, ನ.18(ಬಿಎಲ್‌ಯು)– ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ವೈಟ್ ಕಾಲರ್ ಭಯೋತ್ಪಾದಕರ ಅಟ್ಟಹಾಸಕ್ಕೆ ಇಡೀ ದೇಶವೇ ಬೆಚ್ಚಿ ಬಿದ್ದಿದೆ. ಸುರಕ್ಷಿತ ಅಡಗು ತಾಣಗಳಲ್ಲಿರುವ ಭಯೋತ್ಪಾದಕರ ಬೇಟೆಗೆ ದೇಶಾದ್ಯಂತ ಸಿಸಿಟಿವಿ ಕ್ಯಾಮರಾಗಳ ಮೂಲಕ ಹದ್ದಿನ ಕಣ್ಣಿಡಲಾಗಿದೆ. ಆದರೆ ಮೈಸೂರು ರೈಲ್ವೆ ನಿಲ್ದಾಣದಲ್ಲಿ ಬೆರಳೆಣಿಕೆಯಷ್ಟು ಸಿಸಿಟಿವಿ ಕ್ಯಾಮರಾಗಳಿದ್ದು, ಇದರಲ್ಲಿ ಹಲವು ಕೆಟ್ಟು ಧೂಳಿಡಿಯುತ್ತಿವೆ.


ಪಾರಂಪರಿಕ ಶೈಲಿಯ ಮೈಸೂರು ರೈಲ್ವೆ ನಿಲ್ದಾಣವನ್ನು 1940ರಲ್ಲಿ ನಿರ್ಮಾಣ ಮಾಡಲಾಗಿದೆ. ರಾಜ್ಯ ರಾಜಧಾನಿ ಬೆಂಗಳೂರಿಗೆ ಬರುವ ಬಹಳಷ್ಟು ರೈಲುಗಳನ್ನು ಮೈಸೂರಿಗೆ ವಿಸ್ತರಿಸಲಾಗಿದೆ. ಹಾಗಾಗಿ ಪ್ರತಿದಿನ ಕರ್ನಾಟಕ ಸೇರಿದಂತೆ ದೇಶದ ಹಲವು ರಾಜ್ಯಗಳಿಂದ ಸಾವಿರಾರು ಜನರು ಮೈಸೂರಿಗೆ ಬರುತ್ತಾರೆ.

ಆರು ಫ್ಲಾಟ್ ಫಾರಂ ಹೊಂದಿರುವ ಮೈಸೂರು ರೈಲ್ವೆ ನಿಲ್ದಾಣದಿಂದ ಸೂಪರ್ ಫಾಸ್ಟ್, ಶತಾಬ್ಧಿ, ವಂದೇ ಭಾರತ್ ಸೇರಿದಂತೆ ಹಲವು ಪ್ರತಿಷ್ಠಿತ ರೈಲುಗಳು ಸಂಚರಿಸುತ್ತಿವೆ.

ವಿಶ್ವವಿಖ್ಯಾತ ಪ್ರವಾಸಿ ತಾಣವಾದ ಮೈಸೂರಿನಲ್ಲಿ ಆರ್‌ಬಿಐ ನೋಟು ಮುದ್ರಣ ಘಟಕ, ಆರ್ ಎಂಪಿ, ಏರ್ ಫೋರ್ಸ್ ತರಬೇತಿ ಕೇಂದ್ರ, ಇನ್ಫೋಸಿಸ್, ವಿಪ್ರೋ ಸೇರಿದಂತೆ ಹಲವು ಸೂಕ್ಷ್ಮ ಸ್ಥಳಗಳಿವೆ. ಮಂಗಳೂರಿನಲ್ಲಿ ಕುಕ್ಕರ್ ಬಾಂಬ್ ಸ್ಫೋಟಿಸಿದ ತಾರೀಖ್ ಮೈಸೂರಿನಲ್ಲಿ ವಾಸವಾಗಿ, ಇಲ್ಲೇ ಕುಕ್ಕರ್ ಬಾಂಬ್ ಸಿದ್ಧಪಡಿಸಿದ್ದ. ಅಲ್ಲದೆ ಕೆಲವು ವರ್ಷಗಳ ಹಿಂದೆ ಫಹಾದ್ ಅಲಿ ಹಾಗೂ ಅಲಿ ಹುಸೇನ್ ಎಂಬ ಉಗ್ರರು ಮೈಸೂರಿನಲ್ಲಿ ಪೊಲೀಸರ ಬಲೆಗೆ ಸಿಕ್ಕಿ ಇನ್ನೂ ಜೈಲಿನಲ್ಲಿದ್ದಾರೆ.

ಇದನ್ನೆಲ್ಲಾ ನೋಡಿದರೆ ಮೈಸೂರು ಉಗ್ರರ ಹಿಟ್ ಲಿಸ್ಟ್‌ನಲ್ಲಿದೆ ಎಂಬುದು ಸ್ಪಷ್ಟವಾಗಿದೆ. ಇಂತಹ ಪ್ರಮುಖ ನಗರದ ರೈಲ್ವೆ ನಿಲ್ದಾಣ ಸೂಕ್ಷ್ಮ ಸ್ಥಳವಾಗಿದ್ದು, ಬೆರಳೆಣಿಕೆಯಷ್ಟು ಮಾತ್ರ ಸಿಸಿಟಿವಿ ಕ್ಯಾಮರಾಗಳಿವೆ. ಅದೂ ಎಂಟತ್ತು ವರ್ಷಗಳ ಹಿಂದೆ ಅಳವಡಿಸಿರುವ ಹಳೆಯ ಕ್ಯಾಮರಾಗಳಿವು.





ರೈಲ್ವೆ ನಿಲ್ದಾಣದ ಪ್ರಮುಖ ಕಡೆಗಳಲ್ಲಿ ಕೆಟ್ಟು ನಿಂತಿರುವ ಸಿಸಿ ಕ್ಯಾಮರಾಗಳು

ಮೈಸೂರು ರೈಲ್ವೆ ನಿಲ್ದಾಣದಲ್ಲಿ ಒಟ್ಟು 39 ಕ್ಯಾಮರಾಗಳಿವೆ. ಎರಡು ಕ್ಯಾಮರಾ ರಿಪೇರಿ ಸಾಧ್ಯವಾಗದೆ ಅದನ್ನು ಕೆಲ ದಿನಗಳ ಹಿಂದೆ ತೆರವು ಮಾಡಲಾಗಿದೆ. ಇನ್ನುಳಿದಂತೆ 39 ಕ್ಯಾಮರಾಗಳಿದ್ದು, ಇದರಲ್ಲಿ 8 ಕ್ಯಾಮರಾಗಳು ಕೆಟ್ಟು ಹಲವು ವರ್ಷಗಳಾಗಿವೆ.

ಉಳಿದಿರುವ 31 ಕ್ಯಾಮರಾಗಳು ಹಳೆಯದಾಗಿದ್ದು, ಇದರ ದೃಶ್ಯಗಳು ಅಸ್ಪಷ್ಟವಾಗಿವೆ. ಆರ್ ಪಿಎಫ್ ನಿಯಂತ್ರಣದಲ್ಲಿರುವ ಕಂಟ್ರೋಲ್ ರೂಂನಲ್ಲಿ ಸಿಸಿಟಿವಿ ಕ್ಯಾಮರಾಗಳ ಮೂಲಕ ಸುತ್ತಮುತ್ತಲಿನ ಚಲನ ವಲನ ಗಮನಿಸಲು ಎರಡು ಎಲ್ ಇಡಿ ಟಿವಿಗಳನ್ನು ಅಳವಡಿಸಲಾಗಿದೆ.

ಒಂದು ಸ್ಕ್ರೀನ್‌ನಲ್ಲಿ 17, ಮತ್ತೊಂದು ಸ್ಕ್ರೀನ್‌ನಲ್ಲಿ 14 ಸಿಸಿಟಿವಿ ಕ್ಯಾಮರಾ ದೃಶ್ಯಗಳು ಪ್ರದರ್ಶನವಾಗುತ್ತವೆ. ಆದರೆ 17 ಸಿಸಿಟಿವಿ ದೃಶ್ಯ ಪ್ರದರ್ಶನಗೊಳ್ಳುವ ಒಂದು ಎಲ್‌ಇಡಿ ಸ್ಕ್ರೀನ್‌ನ ಸಿಪಿಯು ಕೆಟ್ಟಿದ್ದು, ಆ ಟಿವಿ ಬಳಕೆಗೆ ಬರುತ್ತಿಲ್ಲ. ಇದರಿಂದ 17 ಸಿಸಿಟಿವಿ ಕ್ಯಾಮರಾ ಅಳವಡಿಸಿರುವ ಸ್ಥಳಗಳ ಚಲನವಲನವನ್ನು ಕಂಟ್ರೋಲ್ ರೂಂನಲ್ಲಿ ಗಮನಿಸಲು ಸಾಧ್ಯವಾಗುತ್ತಿಲ್ಲ.

ಬಹುತೇಕ ಎಲ್ಲಾ ಸಿಸಿಟಿವಿ ಕ್ಯಾಮರಾಗಳು ಹಳೆಯದಾಗಿದ್ದು, ಅದರ ದೃಶ್ಯಗಳು ಅಸ್ಪಷ್ಟವಾಗಿವೆ. ಇತ್ತೀಚೆಗೆ ಅಲೆಮಾರಿ ಸಮುದಾಯದ ಬಾಲಕಿಯ ಮೇಲೆ ಅತ್ಯಾಚಾರ ಎಸಗಿ, ಕೊಲೆ ಮಾಡಿದ ಆರೋಪಿ ರೈಲು ಮೂಲಕ ಬೇರೆ ಊರಿಗೆ ಪರಾರಿಯಾಗಿರಬಹುದು ಎಂಬ ಶಂಕೆ ಮೇಲೆ ಪೊಲೀಸರು ರೈಲ್ವೆ ನಿಲ್ದಾಣದ ಸಿಸಿಟಿವಿ ಕ್ಯಾಮರಾಗಳ ದೃಶ್ಯ ಪರಿಶೀಲನೆ ಮಾಡಿದರು. ಆದರೆ ಬಹುತೇಕ ಕ್ಯಾಮರಾಗಳ ದೃಶ್ಯ ಅಸ್ಪಷ್ಟವಾದ ಹಿನ್ನೆಲೆ ಏನೂ ಪ್ರಯೋಜನವಾಗಲಿಲ್ಲ.

ಮೈಸೂರು ರೈಲ್ವೆ ನಿಲ್ದಾಣದ ಆವರಣದ ಪ್ರವೇಶ ದ್ವಾರದಿಂದ ಕಟ್ಟಡದ ಪ್ರವೇಶ ದ್ವಾರದವರೆಗೆ ಸಿಸಿಟಿವಿ ಒಂದೂ ಕ್ಯಾಮರಾ ಇಲ್ಲ. ರೈಲ್ವೆ ನಿಲ್ದಾಣದ ಕಟ್ಟಡದ ಮೂಲ ಪ್ರವೇಶ ದ್ವಾರದಲ್ಲಿ ಒಂದೇ ಒಂದು ಸಿಸಿಟಿವಿ ಕ್ಯಾಮರಾ ಇದ್ದು ಅದು ಕೂಡ ಕೆಟ್ಟಿದೆ. ಇದರಿಂದ ರೈಲ್ವೆ ನಿಲ್ದಾಣದ ಆವರಣದ ಚಲನ–ವಲನಗಳನ್ನು ತಿಳಿಯಲು ಸಾಧ್ಯವೇ ಇಲ್ಲ.

ಕೆಲವು ಪ್ರಯಾಣಿಕರು ಆಟೋ, ಕ್ಯಾಬ್‌ನಲ್ಲಿ ರೈಲ್ವೆ ನಿಲ್ದಾಣಕ್ಕೆ ಬಂದಾಗ ಲಗ್ಗೇಜ್ ಬ್ಯಾಗ್ ಅನ್ನು ಮರೆತಿರುತ್ತಾರೆ. ಪ್ರಯಾಣಿಕರು ಪೊಲೀಸರಿಗೆ ದೂರು ನೀಡಿದಾಗ ಲಗ್ಗೇಜ್ ಇದ್ದ ಆಟೋ ಅಥವಾ ಕ್ಯಾಬ್ ಪತ್ತೆ ಮಾಡಲು ಇಡೀ ಆವರಣದಲ್ಲಿ ಸಿಸಿಟಿವಿ ಕ್ಯಾಮರಾಗಳಿಲ್ಲ.

ಮೈಸೂರು ರೈಲ್ವೆ ನಿಲ್ದಾಣದ ಸಿಸಿಟಿವಿ ಕ್ಯಾಮರಾ ಹಾಗೂ ಕಂಟ್ರೋಲ್ ರೂಂನಲ್ಲಿ ಎಲ್‌ಇಡಿ ಸ್ಕ್ರೀನ್ ಮಹತ್ವವನ್ನು ಪೊಲೀಸರು ರೈಲ್ವೆ ಇಲಾಖೆ ಹಿರಿಯ ಅಧಿಕಾರಿಗಳಿಗೆ ಮನದಟ್ಟು ಮಾಡಿದ್ದಾರೆ. ಆದರೆ ರೈಲ್ವೆ ಅಧಿಕಾರಿಗಳು ಮಾತ್ರ ಇವರ ಮಾತಿಗೆ ಕಿಂಚಿತ್ತೂ ಗಮನ ನೀಡುತ್ತಿಲ್ಲ.

ಸಿಸಿಟಿವಿ ಕ್ಯಾಮರಾ ಮಹತ್ವ ತಿಳಿಯದ ರೈಲ್ವೆ ಅಧಿಕಾರಿಗಳು

ಭಯೋತ್ಪಾದನೆ, ಅಪರಾಧ ಕೃತ್ಯ ಸೇರಿದಂತೆ ಹಲವು ನಿಗೂಢ ಕೃತ್ಯಗಳನ್ನು ಪತ್ತೆ ಹಚ್ಚಲು ಸದ್ಯ ತನಿಖಾ ಸಂಸ್ಥೆಗಳಿರುವ ಏಕೈಕ ಮೂಲ ಮಾರ್ಗ ಸಿಸಿಟಿವಿ ಕ್ಯಾಮರಾಗಳು. ದೆಹಲಿ ಬಾಂಬ್ ಸ್ಫೋಟಗೊಳಿಸಿದ ಆತ್ಮಾಹುತಿ ಭಯೋತ್ಪಾದಕ ಡಾ.ಉಮರ್ ನಬಿ ದೆಹಲಿ ಪ್ರವೇಶಿಸಿ, ಕಾರನ್ನು ಸ್ಫೋಟಿಸುವ ಮುನ್ನ ಆತ ನಡೆಸಿದ ಸಂಚು ಸೇರಿದಂತೆ ಹಲವು ವಿಚಾರಗಳ ಪತ್ತೆಗೆ ದೆಹಲಿಯಲ್ಲಿರುವ ಸಿಸಿಟಿವಿ ಕ್ಯಾಮರಾಗಳು ತನಿಖಾ ಸಂಸ್ಥೆಗೆ ಸಹಕಾರಿಯಾದವು. ಅಲ್ಲದೆ ಡಾ.ಉಮರ್ ನಬಿ ಬಳಸಿದ ಮತ್ತೊಂದು ಕಾರು ಹರಿಯಾಣದ ಖಂಡೇವಾಲಿಯಲ್ಲಿ ಪತ್ತೆ ಮಾಡಿದ್ದು ಸಹ ಸಿಸಿಟಿವಿ ಕ್ಯಾಮರಾಗಳ ಸಹಾಯದಿಂದ. ಉಗ್ರರ ಕೃತ್ಯ ಚಲನವಲನಗಳನ್ನು ಪತ್ತೆ ಮಾಡಲು ಸಿಸಿಟಿವಿ ಕ್ಯಾಮರಾಗಳು ತನಿಖಾ ಸಂಸ್ಥೆಗಳಿಗೆ ಅಕ್ಷರ ಮಟ್ಟಿಗೆ ಬಹುಪಯೋಗಿಯಾಗಿತ್ತು.

ಈ ಮೂಲಕ ಸಿಸಿಟಿವಿ ಕ್ಯಾಮರಾಗಳ ಮಹತ್ವ ಎಷ್ಟೆಂಬುದು ಸ್ಪಷ್ಟವಾಗಿದೆ. ಹೀಗಿರುವ ಮೈಸೂರು ರೈಲ್ವೆ ನಿಲ್ದಾಣದಲ್ಲಿ ಆಧುನಿಕ ತಂತ್ರಜ್ಞಾನದ ಸಿಸಿಟಿವಿ ಕ್ಯಾಮರಾ ಅಳವಡಿಕೆ ಅತ್ಯವಶ್ಯವಾಗಿದೆ. ಈಗಲಾದರೂ ಮೈಸೂರು ರೈಲ್ವೆ ಇಲಾಖೆಯ ಅಧಿಕಾರಿಗಳು ಶೀಘ್ರವೇ ಹೊಸ ಸಿಸಿಟಿವಿ ಕ್ಯಾಮರಾ ಅಳವಡಿಸುವುದು ಅವಶ್ಯವಾಗಿದೆ. ಮೈಸೂರು ರೈಲ್ವೆ ನಿಲ್ದಾಣದ ಸಿಸಿಟಿವಿ ಕ್ಯಾಮರಾಗಳ ಈ ಸ್ಥಿತಿ ಬಗ್ಗೆ ಮೈಸೂರು ಮಿತ್ರ ರೈಲ್ವೆ ಇಲಾಖೆಯ ಅಧಿಕಾರಿಗಳನ್ನು ಸಂಪರ್ಕಿಸಿದಾಗ ಪ್ರತಿಕ್ರಿಯೆ ನೀಡಲು ಒಬ್ಬರ ಮೇಲೊಬ್ಬರು ಬೊಟ್ಟು ಮಾಡಿ ತೋರಿಸಿ ಜಾರಿಕೊಂಡರು.

ಎಐ ಆಧಾರಿತ ಆಧುನಿಕ ಸಿಸಿಟಿವಿ ಕ್ಯಾಮರಾ ಅಳವಡಿಕೆ ಅನಿವಾರ್ಯ

ಮೈಸೂರು ರೈಲ್ವೆ ನಿಲ್ದಾಣದಲ್ಲಿ ಹೆಚ್‌ಡಿ ಗುಣಮಟ್ಟದ ಎಐ ತಂತ್ರಜ್ಞಾನಾಧಾರಿತ ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸುವ ಅಗತ್ಯವಿದೆ. ಆದರೆ ಹಳೆಯ ಕ್ಯಾಮರಾಗಳನ್ನು ತೆರವು ಮಾಡಿ ಹೊಸ ಕ್ಯಾಮರಾ ಅಳವಡಿಸಲು ರೈಲ್ವೆ ಇಲಾಖೆ ಅಧಿಕಾರಿಗಳು ಬೇಜವಾಬ್ದಾರಿ ತೋರಿದ್ದಾರೆ.

ಮೈಸೂರು ರೈಲ್ವೆ ವಿಭಾಗಕ್ಕೆ ಪ್ರಯಾಣಿಕ ಹಾಗೂ ಗೂಡ್ಸ್ ರೈಲಿನಿಂದ ಸಾವಿರ ಕೋಟಿಗೂ ಹೆಚ್ಚು ಆದಾಯ ಬರುತ್ತದೆ. ಇದರಲ್ಲಿ ಕೆಲವು ಲಕ್ಷದಲ್ಲಿ ಎಐ ಆಧಾರಿತ ಸಿಸಿಟಿವಿ ಕ್ಯಾಮರಾ ಅಳವಡಿಸಬಹುದು. ಆದರೆ ರೈಲ್ವೆ ಇಲಾಖೆಯ ಅಧಿಕಾರಿಗಳಿಗೆ ಪ್ರಾಯಶಃ ಸಿಸಿಟಿವಿ ಕ್ಯಾಮರಾ ಮಹತ್ವ ತಿಳಿದಿಲ್ಲ ಎನ್ನಿಸುತ್ತದೆ. ಆದ ಕಾರಣ ಇಷ್ಟು ವರ್ಷವಾದರೂ ಹೊಸ ಕ್ಯಾಮರಾ ಅಳವಡಿಸಲು ಮುಂದಾಗಿಲ್ಲ.

ಮೈಸೂರು ರೈಲ್ವೆ ನಿಲ್ದಾಣ ಆವರಣದ ಪ್ರವೇಶ ದ್ವಾರ, ಆರು ಫ್ಲಾಟ್ ಫಾರಂ, ರೈಲ್ವೆ ಇಂಜಿನ್‌ಗಳ ನಿಲುಗಡೆ ಸ್ಥಳ, ರೈಲ್ವೆ ವಿಭಾಗೀಯ ಕಚೇರಿ ಸೇರಿದಂತೆ ಇತರೆಡೆ ಕನಿಷ್ಟ 200 ಕ್ಯಾಮರಾಗಳ ಅವಶ್ಯಕತೆ ಇದೆ. ಇಷ್ಟು ಕ್ಯಾಮರಾ ಅಳವಡಿಕೆಗೆ ಕೆಲವು ಲಕ್ಷವಷ್ಟೇ ಖರ್ಚಾಗುತ್ತದೆ. ಆದರೆ ಇಷ್ಟು ಹಣ ಖರ್ಚು ಮಾಡಲು ರೈಲ್ವೆ ಇಲಾಖೆ ಅಧಿಕಾರಿಗಳು ಹಿಂಜರಿಯುತ್ತಿದ್ದಾರೆ.

ಗ್ರಾಮೀಣ ರಸ್ತೆಗಳ ಅಭಿವೃದ್ಧಿಯಿಂದ ಹಳ್ಳಿಗಳ ಉದ್ಧಾರ

3.65 ಕೋಟಿ ರೂ.ಗಳ ರಸ್ತೆ, ಕೆರೆ ಅಭಿವೃದ್ಧಿಗೆ ಭೂಮಿ ಪೂಜೆ ನೆರವೇರಿಸಿದ ಶಾಸಕ ದರ್ಶನ್

ನಂಜನಗೂಡು/ಮಲ್ಕುಂಡಿ, ನ.18– ಮಳೆಹಾನಿ ಯೋಜನೆ ಅಡಿ ಪಂಚಾಯತ್ ರಾಜ್ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆ ಸಚಿವ ಪ್ರಿಯಾಂಕ ಖರ್ಗೆ ಅವರು ಕ್ಷೇತ್ರಕ್ಕೆ 10 ಕೋಟಿ ಅನುದಾನ ನೀಡಿದ್ದು ಈ ಅನುದಾನ ಬಳಸಿ ಗ್ರಾಮೀಣ ಭಾಗದ ಮುಖ್ಯ ರಸ್ತೆಯ ಅಭಿವೃದ್ಧಿಗೆ ಚಾಲನೆ ನೀಡಲಾಗಿದೆ ಎಂದು ಶಾಸಕ ದರ್ಶನ್ ತಿಳಿಸಿದ್ದಾರೆ.

ತಾಲೂಕಿನ ಕಣೇನೂರು, ಕಪ್ಪಸೋಗೆ, ಯಾಲೇಹಳ್ಳಿ, ಹೊಸವೀಡು ಗ್ರಾಮದಲ್ಲಿ 3 ಕೋಟಿ 65 ಲಕ್ಷ ವೆಚ್ಚದ ರಸ್ತೆ ಮತ್ತು ಕೆರೆ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿದರು.

ಗ್ರಾಮೀಣ ಭಾಗದ ಮುಖ್ಯ ರಸ್ತೆಗಳು ಅಭಿವೃದ್ಧಿಯಾದಲ್ಲಿ ಮಾತ್ರ ಹಳ್ಳಿಗಳ ಉದ್ಧಾರ ಸಾಧ್ಯ, ಆದ್ದರಿಂದಲೇ ತಾಲೂಕಿನಿಂದ ಎಲ್ಲಾ ಗ್ರಾಮಗಳಿಗೂ ಸಂಪರ್ಕ ಕಲ್ಪಿಸುವ ರಸ್ತೆಗಳ ಅಭಿವೃದ್ಧಿಗಾಗಿ ಕ್ರಮ ವಹಿಸಲಾಗಿದೆ, ಕಳೆದ ಶುಕ್ರವಾರ ರಾಜೂರು ಮುಖ್ಯರಸ್ತೆಯ ಅಭಿವೃದ್ಧಿ, ಚಂದ್ರಾಡಿಯಿಂದ ಬಸಾಪುರ, ಲಂಕೆ ಗ್ರಾಮದ ಮುಖ್ಯರಸ್ತೆಯ ಅಭಿವೃದ್ಧಿಗಾಗಿ ಗುದ್ದಲಿ ಪೂಜೆ ನೆರವೇರಿಸಲಾಗಿತ್ತು. ಇಂದು ತಾಲೂಕಿನ ದುಗ್ಗಹಳ್ಳಿ ಮತ್ತು ಶೆಟ್ಟಹಳ್ಳಿ ಯಾಲೆಹಳ್ಳಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯು ಗುಂಡಿ ಬಿದ್ದು, ಸಂಚಾರಕ್ಕೆ ದುಸ್ತರವಾಗಿತ್ತು, ಅಲ್ಲದೆ ಕಪ್ಪಸೋಗೆ ಗ್ರಾಮದಿಂದ ತರಗನಹಳ್ಳಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯು ಕೂಡ ಸಂಪೂರ್ಣವಾಗಿ ಹಾಳಾಗಿತ್ತು. ಆದ್ದರಿಂದ ಈ ಎರಡು ರಸ್ತೆಗಳ ಅಭಿವೃದ್ಧಿಗೆ ಕ್ರಮ ವಹಿಸಲಾಗಿದೆ, ತಾಲೂಕಿನ ಕಪ್ಪಸೋಗೆ ಗ್ರಾಮದಿಂದ ತರಗನಹಳ್ಳಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆಯ ಅಭಿವೃದ್ಧಿಗಾಗಿ 1 ಕೋಟಿ 10 ಲಕ್ಷ ವೆಚ್ಚದಲ್ಲಿ ಚಾಲನೆ ನೀಡಲಾಗಿದೆ, ಯಾಲೆಹಳ್ಳಿ ಗ್ರಾಮದಿಂದ ದುಗ್ಗಹಳ್ಳಿ ಶೆಟ್ಟಹಳ್ಳಿ ಮುಖ್ಯರಸ್ತೆಯ ಅಭಿವೃದ್ಧಿಗಾಗಿ 1 ಕೋಟಿ 10 ಲಕ್ಷ ವೆಚ್ಚದಲ್ಲಿ ಚಾಲನೆ ನೀಡಲಾಗಿದೆ ಜೊತೆಗೆ ತಾಲೂಕಿನ ಕಣೇನೂರು ಗ್ರಾಮದಲ್ಲಿ 30 ಲಕ್ಷ ವೆಚ್ಚದಲ್ಲಿ ಸಿಸಿ ರಸ್ತೆ ನಿರ್ಮಾಣ, ಯಾಲೆಹಳ್ಳಿ ಗ್ರಾಮದಲ್ಲಿ 14.5 ಲಕ್ಷ ವೆಚ್ಚದಲ್ಲಿ ನೂತನ ಶಾಲಾ ಕೊಠಡಿಯ ಕಾಮಗಾರಿ ಸೇರಿದಂತೆ ಪಂಚಾಯತ್ ರಾಜ್ ಇಲಾಖೆ 2 ಕೋಟಿ 65 ಲಕ್ಷ ವೆಚ್ಚದ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದರು.

ಕೆರೆ ಅಭಿವೃದ್ಧಿ: ಅಂತರ್ಜಲ ಹೆಚ್ಚಿಸಿ ರೈತರಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ಸಣ್ಣ ನೀರಾವರಿ ಇಲಾಖೆಯ ಅನುದಾನ ದಡಿಯಲ್ಲಿ ಒಂದು ಕೋಟಿ ವೆಚ್ಚದಲ್ಲಿ ತಾಲೂಕಿನ ಹೊಸವೀಡು ಗ್ರಾಮದ ಕೆರೆಯ ಅಭಿವೃದ್ಧಿಗೆ ಚಾಲನೆ ನೀಡಲಾಗಿದೆ, ಇದರಿಂದ ಈ ಭಾಗದಲ್ಲಿ ಅಂತರ್ಜಲ ಹೆಚ್ಚಾಗಿ, ಜನಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ನೀಗಲಿದೆ, ಅಲ್ಲದೆ ರೈತರಿಗೆ ಕೃಷಿ ಚಟುವಟಿಕೆ ಕಾರ್ಯಗಳಿಗೆ ಅನುಕೂಲವಾಗಲಿದೆ ಎಂದರಲ್ಲದೆ, ಒಂದು ಕೋಟಿ ವೆಚ್ಚದಲ್ಲಿ ಈ ಕೆರೆಯ ಹೂಳು ತೆಗೆಯುವುದು, ಕೆರೆಗೆ ಸೋಪಾನಕಟ್ಟೆ ನಿರ್ಮಾಣ, ಕೆರೆ ಏರಿಗೆ ಮೆಟಲ್ ಬೀಮ್ ಅಳವಡಿಕೆ, ಕ್ಯಾಂಟಲ್ ರ್ಯಾಂಪ್, ನಿರ್ಮಿಸುವುದು, ಕೋಡಿಯ ಹಳ್ಳಕ್ಕೆ ರಕ್ಷಣಾತ್ಮಕ ತಡೆಗೋಡೆ ಸೇರಿದಂತೆ ಸುಸಜ್ಜಿತವಾಗಿ ಕೆರೆಯ ಅಭಿವೃದ್ಧಿಪಡಿಸಿ ಸುಂದರ ತಾಣವನ್ನಾಗಿ ನಿರ್ಮಿಸಲಾಗುವುದು ಎಂದು ಹೇಳಿದರು.

ಮಾಜಿ ಶಾಸಕ ಕಳಲೆಕೇಶವ ಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಕಂಠ ನಾಯಕ, ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಕೆ.ಮಾರುತಿ, ಅಕ್ರಮ ಸಕ್ರಮ ಸಮಿತಿ ಸದಸ್ಯ ಹಾಡ್ಯ ಜಯರಾಮ, ಮುಖಂಡರಾದ ಎಂ.ಮಾದಪ್ಪ ಅಭಿನಂದನ್ ಪಟೇಲ್, ಸಂಗರಾಜು, ಚಂದನ್‌ಗೌಡ, ಸೋಮೇಶ್, ಸೂರ್ಯಕುಮಾರ್, ಕಪ್ಪಸೋಗೆ ಮೂರ್ತಿ, ಪ್ರಭು, ನಿರಂಜನಮೂರ್ತಿ, ಹಲ್ಲರೆ ಮಹದೇವು, ಹಾಡ್ಯ ಗ್ರಾಪಂ ಅಧ್ಯಕ್ಷ ಹರೀಶ್, ದೇವರಾಯ ಶೆಟ್ಟಿಪುರ ಗ್ರಾಪಂ ಅಧ್ಯಕ್ಷೆ ಶಿಲ್ಪ ಸುರೇಶ್, ಮಹೇಶ್, ಮಹೇಂದ್ರ, ಎಇಇ ರಾಜು, ಎಇ ಈರಯ್ಯ, ಸೇರಿದಂತೆ ಹಲವಾರು ಪ್ರಮುಖರು ಉಪಸ್ಥಿತರಿದ್ದರು.



ಹೊಸವೀಡು ಗ್ರಾಮದಲ್ಲಿ ಒಂದು ಕೋಟಿ ವೆಚ್ಚದಲ್ಲಿ ಕೆರೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ದರ್ಶನ್ ಧ್ರುವನಾರಾಯಣರಿಂದ ಗುದ್ದಲಿ ಪೂಜೆ.



ಕಪ್ಪಸೋಗೆ ಗ್ರಾಮದಲ್ಲಿ ಒಂದು ಕೋಟಿ ಹತ್ತು ಲಕ್ಷ ವೆಚ್ಚದಲ್ಲಿ ಕಪ್ಪಸೋಗೆ ತರಗನಹಳ್ಳಿ ಗ್ರಾಮದ ಮುಖ್ಯರಸ್ತೆ ಅಭಿವೃದ್ಧಿಗೆ ಗುದ್ದಲಿ ಪೂಜೆ.

ಚೌಡೇಶ್ವರಿ ಅಮ್ಮನವರ ದೇವಸ್ಥಾನದಲ್ಲಿ ದೀಪೋತ್ಸವ



ತಿ.ನರಸೀಪುರದ ಚೌಡೇಶ್ವರಿ ಅಮ್ಮನವರ ದೇವಸ್ಥಾನದಲ್ಲಿ ದೀಪೋತ್ಸವ ವಿಜೃಂಭಣೆಯಿಂದ ಮಂಗಳವಾರ ಸಂಜೆ ನೆರವೇರಿತು. ಪಟ್ಟಣದ ಹಳೆ ತಿರುಮಕೂಡಲಿನಲ್ಲಿರುವ ಶ್ರೀ ಚೌಡೇಶ್ವರಿ ಅಮ್ಮನವರ ದೇವಾಲಯದಲ್ಲಿ ದೀಪೋತ್ಸವ ದುರ್ಗಾ ಹೂಮ, ಮಹಾಭಿಷೇಕ, ಮಹಾಮಂಗಳಾರತಿ ನಡೆಯಿತು. ಮಧ್ಯಾಹ್ನ ಶ್ರೀ ಆದಿ ಚುಂಚನಗಿರಿ ರಜತೋತ್ಸವ ಕಲ್ಯಾಣ ಮಂಟಪದಲ್ಲಿ ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು.

ಹುಲಿ ಪತ್ತೆಗೆ ಹನಗೋಡು ಸುತ್ತಮುತ್ತ ಕೂಂಬಿಂಗ್ ಕಾರ್ಯಾಚರಣೆ

ಸಿಬ್ಬಂದಿಗಳ ಕಣ್ಣು ತಪ್ಪಿಸಿ ಹುಲಿರಾಯನ ಓಡಾಟ!

ಹುಣಸೂರು: ಹನಗೋಡು ಸುತ್ತಮುತ್ತಲ ಗ್ರಾಮಗಳಲ್ಲಿ ಹತ್ತು ದಿನಗಳಿಂದೀಚೆಗೆ ಹುಲಿ ದಾಳಿಯಿಂದ ಹತ್ತಾರು ಜಾನುವಾರುಗಳು ಸಾವನ್ನಪ್ಪಿರುವ ಹಿನ್ನೆಲೆಯಲ್ಲಿ ವಿವಿಧೆಡೆ ಸಾಕಾನೆಗಳ ಸಹಾಯದಿಂದ ಕೂಂಬಿಂಗ್, ಡ್ರೋಣ್ ಮೂಲಕ ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿದರು.

ತಾಲೂಕಿನ ಹನಗೋಡು ಬಳಿಯ ಕಾಮಗೌಡನಹಳ್ಳಿ, ಬೀರತಮ್ಮನಹಳ್ಳಿ, ಬಿ.ಆರ್.ಕಾವಲ್ ಗ್ರಾಮಗಳ ಬಳಿಯ ಅರಣ್ಯದಂಚಿನಲ್ಲಿ ಸಾಕಾನೆಗಳಾದ ಶ್ರೀರಂಗ, ವರಲಕ್ಷ್ಮಿ ನೆರವಿನಿಂದ ಅರಣ್ಯ ಇಲಾಖೆ ವನ್ಯಜೀವಿ ವಿಭಾಗ ಹಾಗೂ ಎಸ್‌ಟಿಪಿಎಫ್ ಸಿಬ್ಬಂದಿ ಹುಲಿ ಪತ್ತೆಗಾಗಿ ಕೂಂಬಿಂಗ್ ನಡೆಸಿದರು.

ಅಲ್ಲದೆ ಥರ್ಮಲ್ ಡ್ರೋಣ್ ಮೂಲಕವೂ ಸುತ್ತಮುತ್ತಲ ಪ್ರದೇಶಗಳಲ್ಲಿ ಹುಡುಕಾಟ ನಡೆಸಿದರೂ ಹುಲಿ ಕುರುಹು ಪತ್ತೆಯಾಗಿಲ್ಲ. ಹುಲಿ ಕಾಣಿಸಿಕೊಂಡ ಕಡೆಗಳಲ್ಲಿ ಟ್ರಾಪಿಂಗ್ ಕ್ಯಾಮರಾ ಅಳವಡಿಸಿದ್ದು, ಹುಲಿ ಓಡಾಟ ಸೆರೆಯಾದಲ್ಲಿ ಅವುಗಳನ್ನು ಗುರುತಿಸಿ, ಐ.ಡಿ. ನಂಬರ್‌ನ ನೀಡಿ, ಹಿರಿಯ ಅಧಿಕಾರಿಗಳ ಅನುಮತಿ ಪಡೆದು ಸೆರೆ ಹಿಡಿಯಲು ಕ್ರಮವಹಿಸಲಾಗುವುದು ಎಂದು ಹುಣಸೂರು ಉಪ ವಿಭಾಗದ ಎಸಿಎಫ್ ಲಕ್ಷ್ಮಿಕಾಂತ್ ತಿಳಿಸಿದ್ದಾರೆ.



ಹನಗೂಡು ಸುತ್ತ ಮುತ್ತ ಹುಲಿ ಸೆರೆಗಾಗಿ ಕಾರ್ಯಾಚರಣೆ ನಡೆಸುತ್ತಿರುವ ಅರಣ್ಯ ಸಿಬ್ಬಂದಿ

ಕಡೇ ಕಾರ್ತಿಕ ಸೋಮವಾರದ ವೈಭವದ ಜಾತ್ರೆ



ಹುಣಸೂರು, ನ.18– ಕಡೇ ಕಾರ್ತಿಕದ ಅಂಗವಾಗಿ ತಾಲೂಕಿನ ಧರ್ಮಾಪುರದಲ್ಲಿ ಎಲ್ಲಾ ಜನಾಂಗದವರು ಒಟ್ಟಾಗಿ ಸೇರಿ ಈಶ್ವರ, ಮಹದೇಶ್ವರ, ಚನ್ನಕೇಶವ ಸ್ವಾಮಿಯ ಜಾತ್ರಾ ಮಹೋತ್ಸವವು ವಿಜೃಂಭಣೆಯಿಂದ ಆಚರಿಸಿದರು.

ಸೋಮವಾರ ರಾತ್ರಿ ಓಕುಳಿಯ ಉತ್ಸವವು ನಡೆಯಿತು. ಸೋಮವಾರ ಸಂಜೆ ಗ್ರಾಮದ ಮೂಡಲ ಕೆರೆಯಲ್ಲಿ ಪೂಜೆ ಸಲ್ಲಿಸಿ ಬಾಜ ಭಜಂತ್ರಿಯೊಂದಿಗೆ ಮೆರವಣಿಗೆ ಮೂಲಕ ಸುಮಂಗಲಿಯರು ಕಳಸ ಹೊತ್ತು ತಂದು ಮಾರಿಗುಡಿ ಮುಂದಿನ ಚನ್ನ ಕೇಶವ ಸ್ವಾಮಿ ದೇವಾಲಯದ ಮುಂದಿನ ಓಕುಳಿ ಕೊಳಕ್ಕೆ ನೀರು ತುಂಬಿಸಿದ ನಂತರ ಮೈನವಿರೇಳಿಸುವಂತೆ ಓಕುಳಿಯಾಡಿದರು. ಎರಡು ದಿನದ ಜಾತ್ರಾ ಮಹೋತ್ಸವದಲ್ಲಿ ಸಂಪ್ರದಾಯದಂತೆ ಗ್ರಾಮೀಣ ಪ್ರದೇಶದ ಸಾಂಸ್ಕೃತಿಕ ವೈಭವ ಮೇಳೈಸಿತು.

ಕೊಂಡೋತ್ಸವ: ಮಂಗಳವಾರ ಬೆಳಿಗ್ಗೆ ನಡೆದ ಕೊಂಡೋತ್ಸವಕ್ಕೆ ಪಕ್ಕದ ನಾಡಪ್ಪನಹಳ್ಳಿಯಿಂದ ಆಗಮಿಸಿದ್ದ ಮಹದೇಶ್ವರ ಸ್ವಾಮಿಯ ಉತ್ಸವ ದೇವರು ಹಾಗೂ ಗ್ರಾಮದ ಈಶ್ವರಸ್ವಾಮಿ, ಮಹದೇಶ್ವರ ಸ್ವಾಮಿ, ಮಲ್ಲದೇವರು, ಹುಲಿ ವಾಹನದೊಂದಿಗೆ ಮೂಡಲ ಕೆರೆಗೆ ಆಗಮಿಸಿ ಅಲ್ಲಿ ಪೂಜೆ ಸಲ್ಲಿಸಿದ ನಂತರ ಕುಣಿಯುವ ಗುಡ್ಡರ ಕುಣಿತ, ಮಂಗಳ ವಾದ್ಯಗಳೊಂದಿಗೆ ಕೊಂಡೋತ್ಸವ ನಡೆಯುವ ಸ್ಥಳಕ್ಕೆ ಮೆರವಣಿಗೆಯಲ್ಲಿ ಆಗಮಿಸಿದ ನಂತರ ಪೂಜಾರಿ ಚಂದ್ರಪ್ಪ, ಮಾದೇಗೌಡರು ದೇವರ ಆವಾಗಾಹನೆಗೆ ಒಳಗಾಗಿ ದೇವರಿಗೆ ಜೈಕಾರ ಹಾಕುತ್ತಾ ಕೊಂಡವನ್ನು ಹಾಯ್ದರು.

ಆನಂತರ ದೇವಾಲಯ ಸುತ್ತ ದೇವರುಗಳ ಪ್ರದಕ್ಷಿಣೆ ನಡೆದ ನಂತರ ಉತ್ಸವದ ಮೂಲಕ ಮೈದಾನಕ್ಕಾಗಮಿಸಿ ಎಲ್ಲಾ ಉತ್ಸವ ಮೂರ್ತಿಗಳನ್ನು ಸಾಲಿಗಿಟ್ಟ ನಂತರ ಎಲ್ಲರೂ ಪೂಜೆ ಸಲ್ಲಿಸಿದರು. ವಿವಿಧ ಜನಾಂಗಗಳ ಜಾನಪದ ಕಲಾ ತಂಡಗಳು ನೆರೆದಿದ್ದವರನ್ನು ಮನಸೂರೆಗೊಳಿಸಿದರು.

ಈ ಜಾತ್ರಾ ಮಹೋತ್ಸವದಲ್ಲಿ ಶಾಸಕ ಹರೀಶ್ ಗೌಡ, ಮಾಜಿ ಶಾಸಕ ಹೆಚ್.ಪಿ. ಮಂಜುನಾಥ್, ಜಿ.ಪಂ ಮಾಜಿ ಸದಸ್ಯ ಡಿ.ಕೆ. ಕುನೇಗೌಡ, ಗ್ರಾಪಂ ಅಧ್ಯಕ್ಷ ವಿ.ಮಹದೇವ್, ಕಾಂಗ್ರೆಸ್ ಪಕ್ಷದ ತಾ.ಕಾರ್ಯದ್ಯಕ್ಷ ಗದ್ದಿಗೆ ದೇವರಾಜ್ ದೇವರ ದರ್ಶನ ಪಡೆದರು. ಯಜಮಾನ ಸಿದ್ದೇಗೌಡ, ಚಿಕ್ಕಯಜಮಾನ ಸೋಮಣಶೆಟ್ಟಿ ಹಾಗೂ ವಿವಿಧ ಜನಾಂಗದ ಯಜಮಾನರಾದ ನಾಗಶೆಟ್ಟಿ, ಸೋಮಣ್ಣಶೆಟ್ಟಿ, ಕುಮಾರ, ಚೆನ್ನನಾಯಕ, ಬೈರನಾಯಕ, ಸೇರಿದಂತೆ ಗ್ರಾಪಂ. ಸದಸ್ಯರಾದ ತೋಳಸಮ್ಮ, ಪ್ರಕಾಶ್, ಮಹದೇವಸ್ವಾಮಿ, ಲಕ್ಷ್ಮಿ ಶಿವನಾಯಕ, ಪುನೀತ ಲೋಕೇಶ್, ನಾಗಮಣಿ, ಗೌರಮ್ಮ, ಮಲ್ಲೇಶ್, ವಕೀಲ ಮಹದೇವ್, ಉದ್ಯಮಿ ಕೃಷ್ಣ, ಸತೀಶ ಪಾಪಣ, ಮುಖಂಡರಾದ, ವೀರಭದ್ರಶೆಟ್ಟಿ, ವಿಶ್ವನಾಥ್, ರಮೇಶ್, ರುದ್ರಶೆಟ್ಟಿ, ನಾರಾಯಣ್, ಮಹೇಶ್, ಪಿ.ಡಿ.ಓ ಪ್ರೇಮಕ್ಕ ಸೇರಿದಂತೆ ಹಲವಾರು ಜನ ಪ್ರತಿನಿಧಿಗಳು, ಸುತ್ತ–ಮುತ್ತಲ ಗ್ರಾಮಸ್ಥರು ಸೇರಿದಂತೆ 10 ಸಾವಿರಕ್ಕೂ ಹೆಚ್ಚು ಮಂದಿ ಭಕ್ತರು ಭಾಗವಹಿಸಿ ಪುನೀತರಾದರು.

ಆದಿವಾಸಿಗಳಿಗೆ ಕಣ್ಣಿನ ಶಸ್ತ್ರ ಚಿಕಿತ್ಸಾ ಶಿಬಿರ

ಶಿಬಿರದಲ್ಲಿ 29 ಮಂದಿಗೆ ಚಿಕಿತ್ಸೆ, 23 ಮಂದಿ ಶಸ್ತ್ರ ಚಿಕಿತ್ಸೆಗೆ ಆಯ್ಕೆ



ಕಣ್ಣಿನ ಶಸ್ತ್ರಚಿಕಿತ್ಸಾ ಸಮುದಾಯ ಸಮರ್ಪಣಾ ಕಾರ್ಯಕ್ರಮದಲ್ಲಿ ಚಿಕಿತ್ಸೆ ಪಡೆದ ಆದಿವಾಸಿಗಳು.

ಸರಗೂರು: ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್‌ನ ಅಂಗ ಸಂಸ್ಥೆಯಾದ ವಿವೇಕಾನಂದ ಸ್ಮಾರಕ ಆಸ್ಪತ್ರೆಯು ಕಣ್ಣಿನ ಶಸ್ತ್ರಚಿಕಿತ್ಸಾ ಸಮುದಾಯ ಸಮರ್ಪಣಾ ಕಾರ್ಯಕ್ರಮವನ್ನು ವಿವೇಕಾನಂದ ಸ್ಮಾರಕ ಆಸ್ಪತ್ರೆಯ ಆವರಣದಲ್ಲಿ ನಡೆಸಿತು.

ಕಾರ್ಯಕ್ರಮವು ಆದಿವಾಸಿಗಳ ಅಂಧತ್ವ ನಿವಾರಣೆಗಾಗಿ ಆಯೋಜಿಸಿದ್ದ ಕಾರ್ಯಕ್ರಮವಾಗಿತ್ತು. ರೋಟರಿ ಅವೈಡಬಲ್ ಬ್ಲೈಂಡ್‌ನೆಸ್ ಫೌಂಡೇಷನ್‌ನ ಸಂಪತ್ ಕುಮಾರ್ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾ, ನಾನು ಸಂಸ್ಥೆ ಜೊತೆಗೆ 2005 ರಿಂದ ಒಡನಾಟವನ್ನು ಹೊಂದಿದೇನೆ. ನನ್ನ ಚಿಕ್ಕಪ್ಪನವರಾದ ಸಾರಂಗಪಾಣಿರವರ ಹೆಸರಲ್ಲಿ ಕಣ್ಣಿನ ಶಸ್ತ್ರಚಿಕಿತ್ಸೆಗೆ ಸಹಕಾರ ನೀಡುವುದರಿಂದ ಗ್ರಾಮೀಣ ಭಾಗದಲ್ಲಿ ಆದಿವಾಸಿಗಳ ಕಣ್ಣಿನ ಅಂಧತ್ವ ನಿವಾರಣೆಗಾಗಿ ಸಹಾಯವಾಗುತ್ತದೆ ಎಂಬ ಭಾವನೆಯಿಂದ ಸಮಾಜಮುಖಿಯಾಗಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆ ಜೊತೆ ಸಮುದಾಯದ ಸೇವೆ ಮಾಡುವ ಭಾಗ್ಯ ನಮ್ಮದಾಗುತ್ತದೆ. ರೋಟರಿ ಅವೈಡಬಲ್ ಬ್ಲೈಂಡ್‌ನೆಸ್ ಫೌಂಡೇಷನ್ ಗ್ರಾಮೀಣ ಭಾಗದಲ್ಲಿ ಆದಿವಾಸಿಗಳ ಕಣ್ಣಿನ ಅಂಧತ್ವ ನಿವಾರಣೆಗಾಗಿ ಹೆಚ್ಚು ಆದ್ಯತೆ ನೀಡಲಾಗುತ್ತದೆ, ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ವಿವೇಕಾನಂದ ಸ್ಮಾರಕ ಆಸ್ಪತ್ರೆಯ ವ್ಯವಸ್ಥಾಪಕ ಸಂಧ್ಯ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರು ಹಾಗೂ ಆಸ್ಪತ್ರೆ ಉಪ ನಿರ್ದೇಶಕರಾದ ಡಾ.ಶಂಕರ್ ಬಿ.ಜಿ, ವೈದ್ಯರಾದ ಡಾ.ಅಭಿಷೇಕ್, ಡಾ.ರೆನೋ, ಡಾ.ಧೀರಜ್, ನಂದೀಶ್, ಮಮತ, ಕವಿತ, ಶ್ಯಾಮಲ, ಆದಿವಾಸಿ ಸಮುದಾಯದ ಪ್ರತಿನಿಧಿಗಳಾದ ಗೌರಿ ಮತ್ತು ಹೆಚ್.ಕೆ ಸಿದ್ದರಾಜು ಬಿ.ಕೆ ,ಪ್ರವೀಣ್, ವೆಂಕಟಸ್ವಾಮಿ, ಚನ್ನಪ್ಪ ಈರಾಜು, ಹರ್ಷಿತ, ಬಂಗಾರಶೆಟ್ಟಿ, ಸಾರ್ವಜನಿಕರು ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು. ಕಣ್ಣಿನ ಶಸ್ತ್ರಚಿಕಿತ್ಸಾ ಶಿಬಿರಕ್ಕೆ ಅಂಕನಾಥ ಪುರಹಾಡಿ, ಹುಸ್ಕೂರ್ ಹಾಡಿ, ಪೆಂಜಳ್ಳಿ ಹಾಡಿ, ಲಕ್ಷ್ಮೀಪುರಹಾಡಿ, ಹುಣಸೇಕುಪ್ಪೆಹಾಡಿ, ಕಾಟವಾಳಹಾಡಿ, ಬಾವಿಕೆರೆಹಾಡಿ, ದೇವನ ಹಾಡಿ, ಬ್ರಹ್ಮಗಿರಿಹಾಡಿಯಿಂದ ಒಟ್ಟು 29 ಜನ ಫಲಾನುಭವಿಗಳು ಶಸ್ತ್ರಚಿಕಿತ್ಸಾ ಶಿಬಿರದಲ್ಲಿ ಪಾಲ್ಗೊಂಡಿದ್ದರು. ಅವರಲ್ಲಿ 23 ಶಸ್ತ್ರಚಿಕಿತ್ಸೆಗೆ ಆಯ್ಕೆಯಾಗಿದ್ದಾರೆ.

ಹಗಲಿನ ಬದಲು ರಾತ್ರಿ ವಿದ್ಯುತ್ ಪೂರೈಕೆ

ನಂಜನಗೂಡು, ನ.18–ತಾಲೂಕಿನ ನಂಜನಗೂಡು– ಬೇಗೂರು, ಸಿಂಧುವಳ್ಳಿಪುರ–ಬೇಗೂರು ವಿದ್ಯುತ್ ಮಾರ್ಗದ ಹೊರೆಯಾಲ ಗ್ರಾಮದಲ್ಲಿ ಹೊಸ ವಿದ್ಯುತ್ ವಿತರಣಾ ಕೇಂದ್ರ ನಿರ್ಮಾಣ ಕಾಮಗಾರಿಯನ್ನು ಹಮ್ಮಿಕೊಂಡಿರುವ ಕಾರಣ ನ.20 ರಿಂದ ನ.25ರ ವರೆಗೆ ತಾಲೂಕಿನ ಗಾಂಧಿಗ್ರಾಮ, ಮರಳೂರು, ಗೊದ್ದನಪುರ, ತಾಂಡವಪುರ ವಿದ್ಯುತ್ ವಿತರಣಾ ಕೇಂದ್ರದ ಏಚಗಳ್ಳಿ, ಬೊಕ್ಕಹಳ್ಳಿ, ಸಿಂಧುವಳ್ಳಿಪುರ ವಿದ್ಯುತ್ ವಿತರಣಾ ಕೇಂದ್ರದ ಸಿಂಧುವಳ್ಳಿ, ಪಾಳ್ಯ, ಉಪ್ಪಿನಹಳ್ಳಿ, ನವಿಲೂರು, ಮಾಕನಪುರ, ಕೂಡ್ಲಾಪುರ, ಎಲಚಗೆರೆ ಸುತ್ತಮುತ್ತಲಿನ ಪ್ರದೇಶಗಳಿಗೆ ಹಗಲಿನ ವೇಳೆ ಬದಲು ರಾತ್ರಿ 10 ಗಂಟೆಯಿಂದ ಬೆಳಗ್ಗೆ, 6 ಗಂಟೆವರೆಗೆ ವಿದ್ಯುತ್ ನೀಡಲಾಗುವುದು. ಸಾರ್ವಜನಿಕರು ಮತ್ತು ರೈತರು ಚೆಸ್ಕಾಂ ಇಲಾಖೆಯೊಂದಿಗೆ ಸಹಕಾರ ನೀಡಬೇಕು ಎಂದು ಸಹಾಯಕ ಕಾರ್ಯಪಾಲಕ ಇಂಜಿನಿಯರ್ ದೇವರಾಜಯ್ಯ ಪ್ರಕಟಣೆಯಲ್ಲಿ ಕೋರಿದ್ದಾರೆ.

ತಿ.ನರಸೀಪುರದಲ್ಲಿ ಗ್ರಂಥಾಲಯ ಸಪ್ತಾಹ ಆಚರಣೆ



ತಿ.ನರಸೀಪುರ ಶಾಖಾ ಗ್ರಂಥಾಲಯದಲ್ಲಿ 2025ನೇ ಸಾಲಿನ ರಾಷ್ಟ್ರೀಯ ಗ್ರಂಥಾಲಯ ಸಪ್ತಾಹವನ್ನು ಆಚರಿಸಲಾಯಿತು. ಪೂರ್ಣಿಮಾ ಸಿ, ಸಹಾಯಕರಾದ ಚೈತ್ರ ಎನ್, ಸಾರ್ವಜನಿಕ ಓದುಗರು, ಸರ್ಕಾರಿ ಹಿರಿಯ ಪ್ರಾಥಮಿಕ ಬಾಲಕಿಯರ ಶಾಲಾ ವಿದ್ಯಾರ್ಥಿಗಳು ಭಾಗವಹಿಸಿದ್ದರು. ವಿವಿಧ ಸ್ಪರ್ಧೆಯಲ್ಲಿ ಗೆದ್ದ ಸಾರ್ವಜನಿಕ ಓದುಗರಿಗೆ ಹಾಗೂ ವಿದ್ಯಾರ್ಥಿಗಳಿಗೆ ಬಹುಮಾನವನ್ನು ವಿತರಿಸಲಾಯಿತು.

ಸೇವಾ ಮನೋಭಾವದಿಂದ ಕೆಲಸ ಮಾಡಿದರೆ ಅಭಿವೃದ್ಧಿ ಸಾಧ್ಯ



ಕೆ.ಆರ್.ನಗರ: ಸೇವಾ ಮನೋಭಾವನೆಯಿಂದ ಕೆಲಸ ಮಾಡಿದರೆ ನಾವು ಸಹಕಾರ ಸಂಘಗಳನ್ನು ಉಳಿಸಿ ಬೆಳೆಸಬಹುದು ಎಂದು ಗ್ರಾಮೀಣ ನಿಧಿ ಸೌಹಾರ್ದ ಕೋ ಆಪರೇಟಿವ್ ಸೊಸೈಟಿ ಲಿಮಿಟೆಡ್‌ನ ಅಧ್ಯಕ್ಷ ಕೆ.ಆರ್.ಶ್ಯಾಮಸುಂದರ್ ಸಲಹೆ ನೀಡಿದರು.

ಪಟ್ಟಣದ ಗ್ರಾಮೀಣ ನಿಧಿ ಸೌಹಾರ್ದ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್‌ನ ಕಚೇರಿಯಲ್ಲಿ ಸಂಸ್ಥೆಯ ನೂತನ ವೃತ್ತಿಪರ ನಿರ್ದೇಶಕಿಯಾಗಿ ಆಯ್ಕೆಯಾದ ಅಶ್ವಿನಿ ಸ್ಪಿನ್‌ಕೃಷ್ಣ ಅವರಿಗೆ ಆಯ್ಕೆ ಪ್ರಮಾಣ ಪತ್ರ ನೀಡಿ ಸನ್ಮಾನಿಸಿ ಮಾತನಾಡಿದ ಅವರು, ಸಹಕಾರ ಸಂಘಗಳಲ್ಲಿ ಕೆಲಸ ಮಾಡುವವರು ಸೇವಾ ದೃಷ್ಟಿಯನ್ನು ಇಟ್ಟುಕೊಂಡು ಸೇವೆ ಸಲ್ಲಿಸಬೇಕು. ಈ ಸಹಕಾರ ಸಂಘಗಳಲ್ಲಿ ನಾವು ಲಾಭಗಳನ್ನು ಗಳಿಸುವ ಮನೋಭಾವನೆಯನ್ನು ಬಿಡಬೇಕು. ಆಗ ಮಾತ್ರ ಸಹಕಾರ ಸಂಸ್ಥೆಗಳು ಬೆಳೆಯಲು ಸಹಕಾರಿಯಾಗುತ್ತವೆ ಎಂದು ಕಿವಿಮಾತು ಹೇಳಿದರು

ಇದೇ ವೇಳೆ ಸಾಲುಮರದ ತಿಮ್ಮಕ್ಕನವರಿಗೆ ಒಂದು ನಿಮಿಷ ಮೌನ ಆಚರಿಸಿ ಶ್ರದ್ಧಾಂಜಲಿಯನ್ನು ಸಲ್ಲಿಸಲಾಯಿತು.

ಸಫಾರಿ ಸ್ಥಗಿತದಿಂದ ಬೀದಿ ಪಾಲಾದ ನೌಕರರು

ಹೆಚ್.ಡಿ.ಕೋಟೆ ತಾಲೂಕು ಕಚೇರಿ ಮುಂದೆ ಪ್ರತಿಭಟನೆ, ತಹಸೀಲ್ದಾರ್‌ಗೆ ಮನವಿ ಸಲ್ಲಿಕೆ

ಹೆಚ್.ಡಿ.ಕೋಟೆ: ನಾಗರಹೊಳೆ ಅಭಯಾರಣ್ಯದಲ್ಲಿ ಸಫಾರಿ ನಿಲ್ಲಿಸಿರುವುದರಿಂದ ಪ್ರವಾಸಿಗರು ರೆಸಾರ್ಟ್‌ಗಳಿಗೆ ಬಾರದೆ ರೆಸಾರ್ಟ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸುಮಾರು 2000 ಉದ್ಯೋಗಿಗಳಿಗೆ ಅತೀವ ತೊಂದರೆ ಉಂಟಾಗಿದೆ ಎಂದು ತಾಲೂಕಿನ ತೆರಾ ವೈಲ್ಡ್ ಲೈಫ್ ರೆಸಾರ್ಟ್‌ನ ಹೊಸಮಾಳ ಸ್ವಾಮಿ ಆರೋಪಿಸಿದ್ದಾರೆ.

ರೆಸಾರ್ಟ್‌ಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರು ಸಫಾರಿ ಸ್ಥಗಿತವನ್ನು ವಿರೋಧಿಸಿ ಪಟ್ಟಣದ ತಾಲೂಕು ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿ ತಹಸೀಲ್ದಾರ್ ಶ್ರೀನಿವಾಸ್ ಅವರಿಗೆ ಮನವಿ ಸಲ್ಲಿಸಿದರು.

ಈ ವೇಳೆ ಮಾತನಾಡಿದ ಅವರು, ಹೆಚ್.ಡಿ.ಕೋಟೆ ತಾಲೂಕು ಪ್ರಾಣಿ, ವನ್ಯ ಮತ್ತು ಜಲ ಸಂಪತ್ತಿನಿಂದ ಕೂಡಿರುವುದರಿಂದ ಪ್ರವಾಸಿಗರಿಗರ ಅನುಕೂಲಕ್ಕಾಗಿ ತಾಲೂಕಿನಲ್ಲಿ ಹಲವು ರೆಸಾರ್ಟ್‌ಗಳು ತಲೆ ಎತ್ತಿವೆ, ಸುಮಾರು 2000 ಮಂದಿ ತಾಲೂಕಿನ ನಿರುದ್ಯೋಗಿಗಳಿಗೆ ಉದ್ಯೋಗಗಳು ಸಹ ದೊರೆತಿವೆ, ತಾಲೂಕಿನಲ್ಲಿ ಯಾವುದೇ ಕಾರ್ಖಾನೆಗಳಿಲ್ಲದ್ದರಿಂದ ರೆಸಾರ್ಟ್‌ಗಳೇ ಇಲ್ಲಿನ ಜನರಿಗೆ ಉದ್ಯೋಗವನ್ನು ನೀಡಿವೆ, ಆದರೀಗ ಏಕಾಏಕಿ ಸಫಾರಿ ನಿಲ್ಲಿಸಿರುವುದರಿಂದ ನಮ್ಮ ಉದ್ಯೋಗಕ್ಕೆ ಕುತ್ತು ಬಂದೊದಗಿದೆ ಎಂದು ಬೇಸರಿಸಿದರು.



ಪಟ್ಟಣದ ತಾಲೂಕು ಕಚೇರಿ ಮುಂಭಾಗ ರೆಸಾರ್ಟ್‌ಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರು ಪ್ರತಿಭಟನೆ ನಡೆಸಿದರು.

ಸಂದೇಶ್ ವಾಟರ್ ಎಡ್ಜ್ ಸಿಬ್ಬಂದಿ ದೇವಯ್ಯ ಮಾತನಾಡಿ, ತಾಲೂಕಿನಲ್ಲಿರುವ ಅಧಿಕೃತ ರೆಸಾರ್ಟ್‌ಗಳು ತಾಲೂಕಿನಲ್ಲಿ ನಡೆಯುವ ಅನೇಕ ಜನಪರ ಕಾರ್ಯಕ್ರಮಗಳಿಗೆ ಸಹಕಾರ ನೀಡುತ್ತಾ ಸ್ಥಳೀಯರಿಗೆ ಆಸರೆಯಾಗಿವೆ. ಅನೇಕ ನಿರುದ್ಯೋಗಿಗಳು ಉದ್ಯೋಗಿಗಳಾಗಿದ್ದಾರೆ. 2000 ಕುಟುಂಬಸ್ಥರು ನೆಮ್ಮದಿಯಿಂದ ಜೀವನ ನಡೆಸುತ್ತಿದ್ದಾರೆ. ಜೊತೆಗೆ ಇಲ್ಲಿನ ರೆಸಾರ್ಟ್‌ಗಳು ಸ್ಥಳೀಯರಿಗೆ ಉದ್ಯೋಗವನ್ನು ನೀಡಿ ತಾಲ್ಲೂಕಿನ ಜನತೆಯ ಮನಗೆದ್ದಿದೆ. ಈಗ ಸಫಾರಿ ನಿಂತಿರುವ ಕಾರಣ ಅದೇ ರೆಸಾರ್ಟ್‌ಗಳು ತಮ್ಮಲ್ಲಿ ಕಾರ್ಯನಿರ್ವಹಿಸುತ್ತಿದ್ದ ಉದ್ಯೋಗಿಗಳನ್ನು ತೆಗೆಯುವ ನಿರ್ಧಾರಕ್ಕೆ ಬಂದಿವೆ, ಇದರಿಂದ ಅದೆಷ್ಟೋ ಕುಟುಂಬಗಳು ಬೀದಿಪಾಲಾಗಲಿವೆ, ಇದಕ್ಕೆ ಸರ್ಕಾರವೇ ನೇರ ಕಾರಣ ಎಂದು ಬೇಸರಿಸಿದರು.

ಕಾರ್ಮಿಕ ಮಹಿಳೆ ಯಶೋಧ ಮಾತನಾಡಿ, ನಾವು ಜಮೀನಿನಲ್ಲಿ ಕೂಲಿ ಮಾಡಲು ಸಾಧ್ಯವಿಲ್ಲ, ಇದರಿಂದಾಗಿ ಸ್ಥಳೀಯವಾಗಿ ರೆಸಾರ್ಟ್‌ನಲ್ಲಿ ದಿನಗೂಲಿ ನೌಕರಳಾಗಿ ಸೇವೆ ಸಲ್ಲಿಸುತ್ತಿದ್ದೇವೆ, ಆದರೀಗ ನಮ್ಮ ಕೆಲಸಕ್ಕೆ ಕುತ್ತು ಬಂದೊದಗಿದೆ, ಅಧಿಕಾರಿಗಳು ಯೋಚಿಸಿ ನಮಗೆ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸಬೇಕು ಎಂದು ಒತ್ತಾಯಿಸಿದರು.

ಮನವಿ ಪತ್ರ ಸ್ವೀಕರಿಸಿದ ತಹಸೀಲ್ದಾರ್ ಶ್ರೀನಿವಾಸ್ ಮಾತನಾಡಿ ಈ ಮನವಿಯನ್ನು ಜಿಲ್ಲಾಧಿಕಾರಿಗಳ ಮುಖಾಂತರ ಸರ್ಕಾರಕ್ಕೆ ಸಲ್ಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಲಾಗುವುದು ಎಂದರು.

ಮನವಿ ಸಲ್ಲಿಸುವ ವೇಳೆ ಅಧಿಕೃತ ರೆಸಾರ್ಟ್‌ಗಳಾದ ವಾಟರ್ ವುಡ್ ಲಾಡ್ಜ್ ಅಂಡ್ ರೆಸಾರ್ಟ್ಸ್, ಸರಾಯ್ ರೆಸಾರ್ಟ್, ಸಂದೇಶ್ ವಾಟರ್ ಎಡ್ಜ್, ಕಾವ್ ರೆಸಾರ್ಟ್, ರೆಡ್ ಅರ್ಥ್, ಡಿಸ್ಕವರಿ ವಿಲೇಜ್, ವೈಲ್ಡ್ ಆರೆಂಜ್ ಕಬಿನಿ, ಕಬಿನಿ ಲೇಖ್ ವೀವ್, ಕಬಿನಿ ಸ್ಪ್ರಿಂಗ್ಸ್, ಸಲೀಂ, ಷಣ್ಮುಗ, ಮಂಜು, ಶಿವಪ್ಪ, ಚಂದ್ರು, ಸ್ವಾಮಿ, ಮೂರ್ತಿ, ವಿನೋದ್, ಸ್ವಾಮಿ, ಪ್ರತಾಪ್ ಸಿಂಹ, ವಿಜಯಕುಮಾರ್, ದೇವೇಶ್, ಶಿವಪ್ಪ, ಯಶೋಧಮ್ಮ, ರವಿ, ರಾಕಿ, ಮಹೇಶ್, ಗುರುಸ್ವಾಮಿ, ಭೈರ, ನವೀನ್, ಸಿದ್ದು, ಕೃಷ್ಣ, ಚಿಕ್ಕಣ್ಣ, ಪ್ರತಾಪ್, ಅರುಣ್ ಇದ್ದರು.

ಎಸ್.ಮಾದಯ್ಯ ನಿಧನ



ತಿ.ನರಸೀಪುರ: ಪಟ್ಟಣದ ಹಿರಿಯ ಜೆಡಿಎಸ್ ಮುಖಂಡರಾದ ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಮಾಜಿ ಅಧ್ಯಕ್ಷ ಎಸ್.ಮಾದಯ್ಯ ಉರುಫ್ ತೋಳಪ್ಪ(85) ಮಂಗಳವಾರ ಮೈಸೂರಿನ ಆಸ್ಪತ್ರೆಯಲ್ಲಿ ನಿಧನರಾದರು.

ಮುನ್ಸಿಪಾಲ್ ನಿವೃತ್ತ ನೌಕರ, ತಾಲೂಕು ಕುರುಬರ ಸಂಘದ ನಿರ್ದೇಶಕ, ವ್ಯವಸಾಯೋತ್ಪನ್ನ ಸಹಕಾರ ಸಂಘದ ಮಾಜಿ ಉಪಾಧ್ಯಕ್ಷರಾಗಿಯೂ ಚಿರಪರಿಚಿತರಾಗಿದ್ದ ಎಸ್.ಮಾದಯ್ಯ ಅವರ ಪಾರ್ಥೀವ ಶರೀರವನ್ನು ಪಟ್ಟಣದ ನಿವಾಸದಲ್ಲಿ ಸಾರ್ವಜನಿಕರ ದರ್ಶನಕ್ಕೆ ಇಡಲಾಗಿತ್ತು. ಮಾಜಿ ಶಾಸಕ ಎಂ.ಅಶ್ವಿನ್ ಕುಮಾರ್ ಸೇರಿದಂತೆ ಹಲವು ಗಣ್ಯರು ಅಂತಿಮ ದರ್ಶನ ಪಡೆದು ಸಂತಾಪ ವ್ಯಕ್ತಪಡಿಸಿದರು.

ಪತ್ನಿ ಮಹದೇವಮ್ಮ, ಓರ್ವ ಪುತ್ರ, ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಆಗಲಿರುವ ದಿವಂಗತರ ಅಂತ್ಯಕ್ರಿಯೆ ಸಂಜೆ ಪಟ್ಟಣದ ಕುರುಬ ಸಮಾಜದ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು.

ರೋಡ್ ಮಾದಯ್ಯ



ಮೂಗೂರು: ಗ್ರಾಮದ ಅಂಬೇಡ್ಕರ್ ಬಡಾವಣೆಯ ನಿವಾಸಿ ರೋಡ್ ಮಾದಯ್ಯ (91) ಅಲಿಯಾಸ್ ದೊಡ್ಡಮಾದ ಪಿಡಬ್ಲ್ಯೂಡಿ ನಿವೃತ್ತ ಗ್ಯಾಂಗ್ ಮ್ಯಾನ್ ಇವರು ಮಂಗಳವಾರ ರಾತ್ರಿ ವಯೋಸಹಜ ಅನಾರೋಗ್ಯದಿಂದ ನಿಧನ ಹೊಂದಿದರು.

ಮೃತರು ಪತ್ನಿ ಐವರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಗ್ರಾಮದ ರುದ್ರಭೂಮಿಯಲ್ಲಿ ಬುಧವಾರ ಮಧ್ಯಾಹ್ನ 1 ಗಂಟೆಗೆ ನಡೆಯಲಿದೆ.

ದಕ್ಷಿಣ ಮೂರ್ತಿ



ಪಿರಿಯಾಪಟ್ಟಣ: ಬಿ.ಎಮ್.ರಸ್ತೆ ನಿವಾಸಿ ದಿವಂಗತ ನಂಜಪ್ಪನವರ ಪುತ್ರ ಬಿ.ಎನ್.ದಕ್ಷಿಣಮೂರ್ತಿ(73) ಮಂಗಳವಾರ ನಿಧನರಾದರು.

ನಾಳೆ (ಬುಧವಾರ) ಮಧ್ಯಾಹ್ನ 1 ಗಂಟೆಗೆ ವೀರಶೈವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ

ರೈಲ್ವೇ ನಿಲ್ದಾಣದಲ್ಲಿ ಪ್ರವಾಸಿ ತಾಣಗಳ ಮಾಹಿತಿ

ರೈಲ್ವೇ ನಿಲ್ದಾಣದಲ್ಲಿ ಮಾರ್ಗದರ್ಶಕ್ ಕ್ಯೂಆರ್ ಕೋಡ್ ಬಳಕೆ

ಮೈಸೂರು,ನ.18(ಜಿಎ)–ರೈಲಿನ ಮೂಲಕ ಮೈಸೂರಿಗೆ ಆಗಮಿಸುವ ಪ್ರವಾಸಿಗರಿಗೆ ಪ್ರೇಕ್ಷಣೀಯ ತಾಣಗಳನ್ನು ಸರಳವಾಗಿ ಪರಿಚಯಿಸಲು ರೈಲ್ವೇ ಇಲಾಖೆ ಮುಂದಾಗಿದ್ದು, ನಿಲ್ದಾಣದಲ್ಲಿ ಮಾಹಿತಿ ಫಲಕಗಳನ್ನು ಅಳವಡಿಸಿ, ಪ್ರವಾಸಿತಾಣಗಳಿಗೆ ಸುಲಭವಾಗಿ ತಲುಪಲು ಸಹಕಾರಿಯಾಗಿದೆ.

ಪ್ರವಾಸಿಗರ ಸ್ವರ್ಗವಾದ ಮೈಸೂರಿಗೆ ದೇಶ ವಿದೇಶಗಳಿಂದ ಲಕ್ಷಾಂತರ ಮಂದಿ ಪ್ರವಾಸಿಗರು ಭೇಟಿ ನೀಡುತ್ತಾರೆ. ಈ ವೇಳೆ ಅವರಿಗೆ ರೈಲ್ವೇ ನಿಲ್ದಾಣದಿಂದ ಪ್ರವಾಸಿ ತಾಣಗಳಿಗೆ ತೆರಳಲು ಸಹಕಾರಿಯಾಗುವಂತೆ ಪ್ರವಾಸಿ ತಾಣಗಳ ಮಾಹಿತಿ ಫಲಕ ಅಳವಡಿಸಲಾಗಿದೆ.

ಮೈಸೂರಿಗೆ ಭೇಟಿ ನೀಡುವ ಪ್ರವಾಸಿಗರು ಇಂಟರ್‌ನೆಟ್ ಮೂಲಕ ಮೊದಲು ಪ್ರವಾಸಿ ತಾಣಗಳ ಬಗ್ಗೆ ಮಾಹಿತಿ ಪಡೆದು ಕೊಂಡು ಬಂದಿರುತ್ತಾರೆ. ಆದರೆ, ರೈಲ್ವೇ ನಿಲ್ದಾಣದಿಂದ ಯಾವ ಸ್ಥಳ ಎಷ್ಟು ದೂರವಿದೆ, ಅವುಗಳಿಗೆ ಇಂದು ಪ್ರವೇಶ ಇದೆಯೇ, ಪ್ರವೇಶ ಸಮಯ ಎಷ್ಟು ಎಂಬ ಸಾಕಷ್ಟು ಗೊಂದಲಗಳು ಉದ್ಭವ ಆಗುತ್ತದೆ. ಈ ಹಿನ್ನೆಲೆ ಎಲ್ಲಾ ಗೊಂದಲಗಳನ್ನು ನಿವಾರಣೆ ಮಾಡಿ ಪ್ರವಾಸಿಗರಿಗೆ ಸುಲಭಗೊಳಿಸಲು ಈ ಮಾಹಿತಿ ಫಲಕ ಹಾಕಲಾಗಿದೆ.



ರೈಲ್ವೇ ನಿಲ್ದಾಣದ ಮುಖ್ಯದ್ವಾರದ ಮುಂದೆ ಅಳವಡಿಸಿರುವ ಮಾಹಿತಿ ಫಲಕ

ಮಾಹಿತಿ ಫಲಕದಲ್ಲಿ ಪ್ರಮುಖ ಪ್ರವಾಸಿ ತಾಣಗಳಾದ ಮೈಸೂರು ಅರಮನೆ, ಚಾಮುಂಡಿಬೆಟ್ಟ, ರೈಲ್ವೇ ಮ್ಯೂಸಿಯಂ, ಮೃಗಾಲಯ, ಸಂತ ಫಿಲೋಮಿನ ಚರ್ಚ್, ಜಗನ್ಮೋಹನ ಅರಮನೆ, ರಂಗನತಿಟ್ಟು ಪಕ್ಷಿಧಾಮ ಮತ್ತು ಕೆಆರ್‌ಎಸ್ ಡ್ಯಾಂ ರೈಲ್ವೇ ನಿಲ್ದಾಣದಿಂದ ಎಷ್ಟು ದೂರವಿದೆ, ಅವುಗಳ ಪ್ರವೇಶ ಸಮಯ, ರಜೆ ದಿನಗಳು ಮತ್ತು ನಗರ ಬಸ್ ನಿಲ್ದಾಣ, ವಿಮಾನ ನಿಲ್ದಾಣ, ಗ್ರಾಮಾಂತರ ಬಸ್ ನಿಲ್ದಾಣ, ಪ್ರೀಪೇಡ್ ಆಟೋ ಸೌಲಭ್ಯಗಳ ಸಂಪೂರ್ಣ ಮಾಹಿತಿ ಒದಗಿಸಲಾಗಿದೆ. ಇವುಗಳ ಮಾಹಿತಿ ಆಧರಿಸಿ ಪ್ರವಾಸಿಗರು ತಮ್ಮ ನೆಚ್ಚಿನ ತಾಣಕ್ಕೆ ಭೇಟಿ ನೀಡಲು ಅನುಕೂಲಕರವಾಗಿದೆ.

ಮಾರ್ಗದರ್ಶಕ್ ಕ್ಯೂಆರ್ ಕೋಡ್

ರೈಲ್ವೇ ನಿಲ್ದಾಣದಲ್ಲಿರುವ ಸೌಲಭ್ಯಗಳ ಬಗ್ಗೆ ಸಮಗ್ರ ಮಾಹಿತಿ ಒದಗಿಸಲು ಇತ್ತೀಚೆಗೆ ಸ್ಮಾರ್ಟ್ ಡಿಜಿಟಲ್ ನ್ಯಾವಿಗೇಷನ್ ಸಿಸ್ಟಮ್ ಮಾರ್ಗದರ್ಶಕ್ ಕ್ಯೂಆರ್ ಕೋಡ್‌ಗಳನ್ನು ರೈಲ್ವೇ ನಿಲ್ದಾಣದಲ್ಲಿ ಅಳವಡಿಸಿದ್ದು, ಇವುಗಳಿಂದ ನಿಲ್ದಾಣದಲ್ಲಿರುವ ಸೌಲಭ್ಯಗಳ ಮಾಹಿತಿ ಪಡೆದುಕೊಳ್ಳಬಹುದಾಗಿದೆ.

ಈ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿದ ತಕ್ಷಣ ರೈಲ್ವೇ ನಿಲ್ದಾಣದ ತುರ್ತು ಸೇವೆಗಳು, ವಿಶೇಷ ಚೇತನರಿಗೆ ಸೌಲಭ್ಯ, ಲಿಫ್ಟ್, ಆಡಳಿತ ಕಚೇರಿ, ತಿಂಡಿ ತಿನಿಸು, ಕುಡಿಯುವ ನೀರಿನ ಘಟಕ, ಪ್ರಯಾಣಿಕರ ತಂಗುದಾಣ, ಟಿಕೇಟ್ ಕೌಂಟರ್, ಶೌಚಾಲಯ, ಎಟಿಎಂ, ಪ್ರವೇಶ ಮತ್ತು ನಿರ್ಗಮನಕ್ಕೆ ಯಾವ ಕಡೆ ಚಲಿಸಬೇಕು ಎಂದು ಮಾಹಿತಿಗಳನ್ನು ಮಾರ್ಗದರ್ಶಕ್ ಒಳಗೊಂಡಿದೆ.



ನಿಲ್ದಾಣದ ಒಳ ಭಾಗದಲ್ಲಿ ಪ್ರಯಾಣಿಕರ ಅನುಕೂಲಕ್ಕಾಗಿ ಮಾರ್ಗದರ್ಶಕ್ ಕ್ಯೂಆರ್ ಕೋಡ್ ಅಳವಡಿಸಿರುವುದು

ವಿಡಿಯೋ ತುಣುಕು ಮೂಲಕ ಮಾಹಿತಿ

ಮಾಹಿತಿಯನ್ನು ಮತ್ತಷ್ಟು ಸುಲಭವಾಗಿ ನೀಡಲು ಇಲಾಖೆಯಿಂದ ವಿಡಿಯೋ ತುಣುಕು ಸಹಕಾರಿಯಾಗಲಿದೆ ಎಂಬ ದೃಷ್ಟಿಯಿಂದ ಮುಂದಿನ ದಿನಗಳಲ್ಲಿ ಎಲ್ಲಾ ಪ್ರವಾಸಿ ತಾಣಗಳ ಮತ್ತು ಮೈಸೂರಿನ ಸಂಚಾರದ ಬಗೆಗಿನ 15 ಸೆಕೆಂಡ್‌ನ ವಿಡಿಯೋ ತುಣುಕು ಸಿದ್ಧಪಡಿಸಿ, ರೈಲ್ವೇ ನಿಲ್ದಾಣದ ಎಲ್ಲಾ ಪ್ಲಾಟ್‌ಫಾರಂನಲ್ಲಿ ಟಿವಿಗಳಲ್ಲಿ ಪ್ರಸಾರ ಮಾಡುವ ಚಿಂತನೆ ಇದೆ.

-ಗಿರೀಶ್ ಧರ್ಮರಾಜ್
ಸಾರ್ವಜನಿಕ ಸಂಪರ್ಕಾಧಿಕಾರಿ, ಮೈಸೂರು ವಿಭಾಗ, ನೈರುತ್ಯ ರೈಲ್ವೆ

ಸರ್ಕಾರಿ ಶಾಲಾ ಮಕ್ಕಳಿಗೆ ಕಲಿಕಾ ಸಾಮಗ್ರಿ ವಿತರಣೆ

ಮೈಸೂರು, ನ.18(ಎಂಕೆ)– ಮೈಸೂರಿನ ಲಿಂಗಾಬುದಿಯ ಸರ್ಕಾರಿ ಶಾಲೆ ಆವರಣದಲ್ಲಿ ಮೈಸೂರು ಮಿಡ್‌ಟೌನ್ ಇನ್ನರ್ ವ್ಹೀಲ್ ಕ್ಲಬ್ ವತಿಯಿಂದ ಶೌಚಾಲಯ ನಿರ್ಮಿಸಿಕೊಡಲಾಗಿದೆ.

ಸರ್ಕಾರಿ ಶಾಲಾ ಮಕ್ಕಳಲ್ಲಿ ಕೌಶಲ್ಯಾಧಾರಿತ ಕಲಿಕೆಯ ಗುಣಮಟ್ಟವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಪುಸ್ತಕಗಳೊಂದಿಗೆ ನಲಿ–ಕಲಿ ಕಲಿಕಾ ಸಾಮಗ್ರಿಗಳು, ಲ್ಯಾಪ್‌ಟಾಪ್, ಎರಡು ಕ್ಯಾಬಿನ್ ಒಳಗೊಂಡ ಶೌಚಾಲಯ ನಿರ್ಮಾಣ ಹಾಗೂ ಅಧ್ಯಯನ ಸಾಮಾಗ್ರಿಗಳ ಜೊತೆಗೆ ತರಗತಿ ಕೊಠಡಿ, ಗೋಡೆಗಳನ್ನು ಆಕರ್ಷಕವಾಗಿ ಚಿತ್ರಿಸುವ ಮೂಲಕ ಸಹಕರಿಸಲಾಗಿದೆ. ಅಲ್ಲದೆ ಮೈಸೂರು ಮಿಡ್‌ಟೌನ್ ಇನ್ನರ್‌ವ್ಹೀಲ್ ಕ್ಲಬ್ ಹಲವು ಸಮುದಾಯ ಸೇವೆಗಳಲ್ಲಿ ತೊಡಗಿಕೊಂಡಿದ್ದು, ನಿರಂತರವಾಗಿ ಸೇವಾ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಬರುತ್ತಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.



ಸಾಹಿತಿಗಳಾದ ಡಾ. ಎಸ್.ಎಲ್.ಭೈರಪ್ಪ; ಡಾ. ಮೊಗಳ್ಳಿ ಗಣೇಶರಿಗೆ ನುಡಿ ನಮನ

ಮೈಸೂರು, ನ.18(ಎಂಟಿವೈ)– ಸಾಹಿತ್ಯ ಕ್ಷೇತ್ರಕ್ಕೆ ಅಪಾರವಾದ ಕೊಡುಗೆ ನೀಡಿರುವ ಸಾಹಿತಿ ಡಾ.ಎಸ್.ಎಲ್. ಭೈರಪ್ಪ ಅವರು ವಿಶ್ವ ಸಾಹಿತಿ ಎನಿಸಿದ್ದಾರೆ ಎಂದು ಮೈಸೂರು ಆಕಾಶವಾಣಿ ನಿವೃತ್ತ ನಿರ್ದೇಶಕರಾದ ಡಾ.ಎಂ.ಎಸ್. ವಿಜಯಾಹರನ್ ಅಭಿಪ್ರಾಯಪಟ್ಟರು.

ಮೈಸೂರಿನ ಮಹಾರಾಣಿ ಮಹಿಳಾ ಕಲಾ ಕಾಲೇಜಿನಲ್ಲಿ ಮಂಗಳವಾರ ಕಾಲೇಜಿನ ಐಕ್ಯೂಎಸಿ ಮತ್ತು ಸ್ನಾತಕೋತ್ತರ ಕನ್ನಡ ವಿಭಾಗದ ಸಹಯೋಗದಲ್ಲಿ ನಡೆದ ಸಾಹಿತಿಗಳಾದ ಡಾ.ಎಸ್. ಎಲ್.ಭೈರಪ್ಪ ಮತ್ತು ಡಾ.ಮೊಗಳ್ಳಿ ಗಣೇಶ್ ಅವರ ನುಡಿ ನಮನ ಕಾರ್ಯಕ್ರಮದಲ್ಲಿ ಮಾತನಾಡಿದರು.

ಡಾ.ಎಸ್.ಎಲ್. ಭೈರಪ್ಪನವರ ಸಾಹಿತ್ಯ, ಕೃತಿಗಳು 17 ಭಾಷೆಗಳಿಗೆ ಭಾಷಾಂತರಗೊಂಡಿದ್ದು, ಅತೀ ಹೆಚ್ಚು ಓದುಗರ ಪಡೆಯನ್ನೇ ಹೊಂದಿದ್ದಾರೆ. ಸಾಹಿತ್ಯ ಕ್ಷೇತ್ರಕ್ಕೆ ಭೈರಪ್ಪ ಅವರ ಕೊಡುಗೆ ಅಪಾರವಾಗಿದ್ದು, ಅವರನ್ನು ಕೆಲವರು ಎಡಪಂಥೀಯರು ಎಂದು ಗುರುತಿಸಿದ್ದರು. ಆಗ ಅವರು ನಾನು ಎಡ ಪಂಥೀಯ ಅಲ್ಲ, ಬಲ ಪಂಥೀಯ ಕೂಡ ಅಲ್ಲ, ಮಧ್ಯ ಪಂಥೀಯ ಎಂದು ಹೇಳಿಕೊಂಡಿದ್ದರು. ಆದ್ದರಿಂದ ಅವರನ್ನು ನಾವು ಯಾವ ಪಂಥೀಯಕ್ಕೂ ಸೇರಿಸುವುದು ಬೇಡ ಎಂದು ಹೇಳಿದರು.

ಮೈಸೂರು ವಿವಿಯ ಕಲಾ ನಿಕಾಯದ ಡೀನ್ ಪ್ರೊ.ಎಂ.ಎಸ್ ಶೇಖರ್ ಅವರು ಸಾಹಿತಿ ಡಾ.ಮೊಗಳ್ಳಿ ಗಣೇಶ್ ಅವರ ಜೊತೆಗಿನ ಒಡನಾಟ, ಹೋರಾಟದ ಬದುಕು ಮತ್ತು ತೀಕ್ಷ್ಣ ಬುದ್ಧಿಯ ಕಥನಕಲೆಯ ಕುರಿತು ಮಾತನಾಡಿದರು.

ಕಾರ್ಯಕ್ರಮದಲ್ಲಿ ಮಹಾರಾಣಿ ಕಾಲೇಜಿನ ಪ್ರಾಂಶುಪಾಲರಾದ ಡಾ.ಎಂ.ಎಸ್ ಅನಿತಾ, ಕನ್ನಡ ವಿಭಾಗದ ಮುಖ್ಯಸ್ಥ ಹರೀಶಗೌಡ, ಕನ್ನಡ ಸ್ನಾತಕೋತ್ತರ ವಿಭಾಗದ ಸಂಯೋಜಕರಾದ ಡಾ. ಡಿ.ಸುಂದರಿ, ಕನ್ನಡ ಸ್ನಾತಕೋತ್ತರ ವಿಭಾಗದ ಪ್ರಾಧ್ಯಾಪಕರಾದ ಡಾ. ಹೆಚ್. ಆರ್. ಚಂದ್ರಕಲಾ, ಎ.ಎಂ.ನಾಗೇಂದ್ರಪ್ರಸಾದ್, ಎಂ.ಜಿ. ಮುಜಾಹಿದ್ ಪಾಷ, ಪತ್ರಾಂಕಿತ ವ್ಯವಸ್ಥಾಪಕ ಕೆ.ವೆಂಕಟೇಶ್ ಉಪಸ್ಥಿತರಿದ್ದರು.



ಮೈಸೂರಿನ ಮಹಾರಾಣಿ ಮಹಿಳಾ ಕಲಾ ಕಾಲೇಜಿನಲ್ಲಿ ಮಂಗಳವಾರ ಸಾಹಿತಿಗಳಾದ ಡಾ.ಎಸ್. ಎಲ್.ಭೈರಪ್ಪ ಮತ್ತು ಡಾ.ಮೊಗಳ್ಳಿ ಗಣೇಶ್ ಅವರ ನುಡಿ ನಮನ ಕಾರ್ಯಕ್ರಮ ಜರುಗಿತು.

ಪತಿ, ಅತ್ತೆಯ ಕಿರುಕುಳ; ಮಗುವಿನ ಜೊತೆ ನದಿಗೆ ಹಾರಿ ಮಹಿಳೆ ಆತ್ಮಹತ್ಯೆ



ಮೃತ ಮಹಾದೇವಿ

ಹಾಸನ, ನ.18– ಪತಿ ಹಾಗೂ ಅತ್ತೆಯಿಂದ ಕಿರುಕುಳಕ್ಕೆ ಮನನೊಂದು ಗೃಹಿಣಿಯೊಬ್ಬರು ಮಗುವಿನೊಂದಿಗೆ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಹಾಸನ ಜಿಲ್ಲೆ ಅರಕಲಗೂಡು ತಾಲೂಕಿನ ರಾಮನಾಥಪುರ ಬಳಿ ನಡೆದಿದೆ.

ಮಹಾದೇವಿ (29) ಆತ್ಮಹತ್ಯೆಗೆ ಶರಣಾದ ಮಹಿಳೆ. ಮಹಾದೇವಿ ಮೂರು ವರ್ಷಗಳ ಹಿಂದೆ ಅರಕಲಗೂಡು ತಾಲೂಕಿನ ಸೀಬಿಹಳ್ಳಿ ಗ್ರಾಮದ ಕುಮಾರ್ ಜೊತೆ ಎರಡನೇ ವಿವಾಹವಾಗಿದ್ದರು. ಮೊದಲ ಪತಿಯಿಂದ ವಿಚ್ಛೇದನ ಪಡೆದಿದ್ದ ಸಾಲಿಗ್ರಾಮ ತಾಲೂಕಿನ ಕರ್ಪೂರವಳ್ಳಿ ಗ್ರಾಮದ ಮಹಾದೇವಿ ಎರಡನೇ ಮದುವೆ ಸಂದರ್ಭ ಕುಟುಂಬಸ್ಥರು ವರದಕ್ಷಿಣೆ ರೂಪದಲ್ಲಿ 100 ಗ್ರಾಂ ಚಿನ್ನ ನೀಡಿದ್ದರು.

ಆದರೆ ಇತ್ತೀಚಿಗೆ ಪತ್ನಿ ಮೇಲೆ ಅನುಮಾನ ಪಡುತ್ತಿದ್ದ ಕುಮಾರ್, ಅವಾಚ್ಯ ಶಬ್ದಗಳಿಂದ ನಿಂದಿಸಿ ಕಿರುಕುಳ ನೀಡುತ್ತಿದ್ದ. ಕುಮಾರ್ ಕಿರುಕುಳ ತಾಳಲಾರದೆ ಮಹಾದೇವಿ ಕಳೆದ ಹದಿನೈದು ದಿನಗಳ ಹಿಂದೆ ತವರು ಮನೆ ಸೇರಿದ್ದರು. ಆದರೂ ಸುಮ್ಮನಾಗದ ಪತಿ ಕುಮಾರ್ ಪತ್ನಿಗೆ ಅಶ್ಲೀಲ ಮೆಸೇಜ್ ಮಾಡಿ ಮಾನಸಿಕ ಕಿರುಕುಳ ನೀಡುತ್ತಿದ್ದ. ಹಾಸನಕ್ಕೆ ಬಂದಿದ್ದ ಮಹಾದೇವಿಗೆ ಬಸ್ ನಿಲ್ದಾಣದಲ್ಲೇ ಕುಮಾರ್ ನಿಂದಿಸಿದ್ದ. ಇದರಿಂದ ಮನನೊಂದಿದ್ದ ಮಹಾದೇವಿ ನಂತರ ಹಾಸನ ಮಹಿಳಾ ಪೊಲೀಸ್ ಠಾಣೆಗೆ ಬಂದು ದೂರು ನೀಡಿದ್ದರು. ಬಳಿಕ ಡೆತ್‌ನೋಟ್ ಬರೆದಿಟ್ಟು ಮಗುವಿನೊಂದಿಗೆ ವೀಡಿಯೋ ಮಾಡಿ ಮನೆಯಿಂದ ತೆರಳಿದ್ದರು..

ಬಳಿಕ ಕುಟುಂಬಸ್ಥರು ಮಹಾದೇವಿಗಾಗಿ ಎಲ್ಲೆಡೆ ಹುಡುಕಾಟ ನಡೆಸಿದ್ದರು. ಸೋಮವಾರ ಅರಕಲಗೂಡು ತಾಲೂಕಿನ, ಬೆಟ್ಟಸೋಗೆ ಬಳಿ ಮಹಾದೇವಿ ಮೃತದೇಹ ಪತ್ತೆಯಾಗಿದೆ. ಶುಕ್ರವಾರ ರಾಮನಾಥಪುರದ ಬಳಿಯ ಕಾವೇರಿ ನದಿಗೆ ಒಂದೂವರೆ ವರ್ಷದ ಮಗುವಿನೊಂದಿಗೆ ಹಾರಿ ಮಹಾದೇವಿ ಆತ್ಮಹತ್ಯೆಗೆ ಶರಣಾಗಿದ್ದಾರೆ.

ಪ್ರೌಢಶಾಲಾ ವಿದ್ಯಾರ್ಥಿಗಳ ಚಿತ್ರಕಲಾ ಸ್ಪರ್ಧೆ ವಿಜೇತರು

ಮೈಸೂರು, ನ. 18– ಬೋಗಾದಿಯ ಜೆಎಸ್‌ಎಸ್ ಮಕ್ಕಳ ವಿದ್ಯಾರ್ಥಿನಿಲಯದಲ್ಲಿ ಕರುನಾಡ ಕಲಾ ವೈಭವ ಶೀರ್ಷಿಕೆಯಡಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಚಿತ್ರಕಲಾ ಸ್ಪರ್ಧೆ ಆಯೋಜಿಸಲಾಗಿತ್ತು.

ಈ ಸ್ಪರ್ಧೆಗೆ ನಗರದ ವಿವಿಧ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಈ ಸ್ಪರ್ಧೆಯ ತೀರ್ಪುಗಾರರಾಗಿ ಜೆಎಸ್‌ಎಸ್ ಬಾಲಿಕಾ ಪ್ರೌಢಶಾಲೆಯ ಚಿತ್ರಕಲಾ ಶಿಕ್ಷಕರಾದ ಎನ್.ಬಿ. ಪಲ್ಲದ್ ಆಗಮಿಸಿದ್ದರು. ನಿಲಯದ ಕ್ಷೇಮಪಾಲಕ ಎಂ.ಪಿ. ವಿನಯ, ನಿಲಯದ ಕ್ಷೇಮಪಾಲಕ ಡಿ.ಎಂ. ಮಧು ಉಪಸ್ಥಿತರಿದ್ದರು.

ಸಮಾರೋಪ ಸಮಾರಂಭದಲ್ಲಿ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಪ್ರಥಮ ಬಹುಮಾನವನ್ನು ಸಂಜಯ್ ಜಿ.ಎಂ, ಜೆಎಸ್‌ಎಸ್ ಮಕ್ಕಳ ವಿದ್ಯಾರ್ಥಿನಿಲಯ, ಬೋಗಾದಿ, ದ್ವಿತೀಯ ಬಹುಮಾನವನ್ನು ಮನೋಜ್, ಕೆಎಸ್‌ಎಸ್ ವಿದ್ಯಾರ್ಥಿನಿಲಯ, ವಿ.ವಿ.ರಸ್ತೆ, ಮೈಸೂರು ಹಾಗೂ ತೃತೀಯ ಬಹುಮಾನವನ್ನು ಶಿವಾನಂದ, ಅಜಿತ ನೆಲೆ ವಿದ್ಯಾರ್ಥಿನಿಲಯ, ಬೋಗಾದಿ ಈ ವಿದ್ಯಾರ್ಥಿಗಳು ಪಡೆದರು.



ಅಂಕೋಲಾ ಬಳಿ ಟ್ಯಾಂಕರ್ ಪಲ್ಟಿ; ಮೀಥೇನ್ ಅನಿಲ ಸೋರಿಕೆ

ಕಾರವಾರ, ನ.18– ಹುಬ್ಬಳ್ಳಿ–ಅಂಕೋಲಾ ರಾಷ್ಟ್ರೀಯ ಹೆದ್ದಾರಿಯ ಅಂಕೋಲಾದ ಕಂಚಿನ ಬಾಗಿಲು ಬಳಿ ಇಂದು ಮಂಗಳವಾರ ಟ್ಯಾಂಕ್ ಉರುಳಿ ಬಿದ್ದ ಪರಿಣಾಮ ಟ್ಯಾಂಕರ್‌ನಲ್ಲಿದ್ದ ಮೀಥೇನ್ ಸೋರಿಕೆಯಾಗಿ ಸ್ಥಳದಲ್ಲಿ ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು.

ಟ್ಯಾಂಕರ್ ಗುಜರಾತ್‌ನಿಂದ ಹುಬ್ಬಳ್ಳಿ–ಯಲ್ಲಾಪುರ ಮೂಲಕ ಉಡುಪಿಗೆ ಸಾಗುತ್ತಿತ್ತು ಎನ್ನಲಾಗಿದೆ. ಚಾಲಕನ ನಿಯಂತ್ರಣ ಕಳೆದುಕೊಂಡು ಪಲ್ಟಿಯಾಗಿದೆ. ಪರಿಣಾಮ ಮಹಾರಾಷ್ಟ್ರ ಮೂಲದ ಚಾಲಕ ಅರುಣ್ ಶೇಖ್ (57) ಗಂಭೀರವಾಗಿ ಗಾಯಗೊಂಡಿದ್ದು, ಅವರನ್ನು ಉಡುಪಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಟ್ಯಾಂಕರ್‌ನಿಂದ ಮೀಥೇನ್ ಸೋರಿಕೆಯಾಗುತ್ತಿರುವ ಹಿನ್ನೆಲೆಯಲ್ಲಿ ಸಾರ್ವಜನಿಕ ಹಿತ ದೃಷ್ಟಿಯಿಂದ ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯ ಘಟನಾ ಸ್ಥಳದಲ್ಲಿ ತುರ್ತು ನಿರ್ಬಂಧ ಹೇರಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ದಾವೂದ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಐ ಆ್ಯಮ್ ಗಾಡ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ದೇ ದೇ ಪ್ಯಾರ್ ದೇ–2 (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಬ್ರ್ಯಾಟ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ರಾಜಕಮಲ್	
ಅದರ್ಸ್ (ತ)	4 ಪ್ರದರ್ಶನಗಳು
ಸಂಗಂ	
ಗತವೈಭವ (ಕ)	4 ಪ್ರದರ್ಶನಗಳು
ಲಿಡೋ	
ಬ್ರ್ಯಾಟ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಯಜಮಾನ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಕಾಂತಾರ ಚಾಪ್ಟರ್ 1(ಕ): ಮ.1.25ಕ್ಕೆ, ಸಂ.4.45ಕ್ಕೆ
	ಪ್ರೆಡೆಟರ್ ಬ್ಯಾಡ್‌ಲ್ಯಾಂಡ್ಸ್ (ಇ): ಬೆ.11.00ಕ್ಕೆ, ರಾ.8.05, ರಾ.10.25ಕ್ಕೆ
ಸ್ಕ್ರೀನ್ 2	ಡೈಸ್ ಇರೇ (ಮ): ಬೆ.10.40ಕ್ಕೆ, ಆರೊಮಲೆ (ತ): ಮ.1.25ಕ್ಕೆ, ಬ್ರ್ಯಾಟ್(ಕ): ಸಂ.4.05ಕ್ಕೆ, ಸಂ.7.15ಕ್ಕೆ ಜಟಾಧರ (ತೆ): ರಾ.10.20ಕ್ಕೆ
ಸ್ಕ್ರೀನ್ 3	ಹಕ್ (ಹಿ): ಬೆ.10.35ಕ್ಕೆ, ಮ. 1.25ಕ್ಕೆ, ಸಂ. 7.15ಕ್ಕೆ ಲವ್ ಯು ಮುದ್ದು(ಕ): ಸಂ. 4.20ಕ್ಕೆ, ಇನ್ನೊಸೆಂಟ್ (ಮ): ರಾ.10.10ಕ್ಕೆ,
ಸ್ಕ್ರೀನ್ 4	ಕಾಂತಾರ ಚಾಪ್ಟರ್ 1(ಕ): ಸಂ. 7.00ಕ್ಕೆ, ಬ್ರ್ಯಾಟ್(ಕ): ಬೆ.10.20ಕ್ಕೆ, ಯಜಮಾನ(ಕ): ಮ.1.30ಕ್ಕೆ, ದಿ ಗರ್ಲ್‌ಫ್ರೆಂಡ್ (ತೆ): ಸಂ.4.10ಕ್ಕೆ, ರಾ. 10.20ಕ್ಕೆ

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಕಾಂತಾರ –1(ಕ): ಬೆ.10.30, ಮ.1.35, ರಾ.7.15ಕ್ಕೆ
ಬ್ರ್ಯಾಟ್ (ಕ): ಬೆ.10.45ಕ್ಕೆ, ಮ.1.45, ಸಂ.4.45, ರಾ.7.45ಕ್ಕೆ
ನಿಷಿದ್ಧ (ಕ): ಬೆ.10.50ಕ್ಕೆ, ದಿ ಗರ್ಲ್‌ಫ್ರೆಂಡ್ (ತೆ): ಬೆ.11, ಸಂ.6.30, ರಾ.9.15ಕ್ಕೆ
ಕೋಣ (ಕ): ಮ.1.15ಕ್ಕೆ, ಐ ಆ್ಯಮ್ ಗಾಡ್ (ಕ): ಸಂ.3.40ಕ್ಕೆ,
ಲವ್ ಯು ಮುದ್ದು(ಕ): ಸಂ.6.40ಕ್ಕೆ, ಡೈಸ್ ಇರೇ (ಮ): ರಾ. 9.15ಕ್ಕೆ,

ನೆಕ್ಸಸ್ ಮಾಲ್

ಕಾಂತಾರ ಚಾಪ್ಟರ್ 1(ಕ) : ಬೆ: 10.00ಕ್ಕೆ, ಸಂ.4.15ಕ್ಕೆ, ರಾ.10.30ಕ್ಕೆ.
ಬ್ರ್ಯಾಟ್ (ಕ): ಬೆ: 9.45ಕ್ಕೆ, ಸಂ.4.05ಕ್ಕೆ.
ದಿ ಗರ್ಲ್‌ಫ್ರೆಂಡ್ (ತೆ): ಬೆ: 9.55ಕ್ಕೆ, ಮ.12.50ಕ್ಕೆ, ಸಂ.6.55, ರಾ: 9.50ಕ್ಕೆ
ಹಕ್ (ಹಿ): ಬೆ: 10.05ಕ್ಕೆ, ಮ.1.25, ಸಂ.7.40, ರಾ.10.00ಕ್ಕೆ
ಪ್ರೆಡೆಟರ್ ಬ್ಯಾಡ್‌ಲ್ಯಾಂಡ್ಸ್ (ಇ): ಬೆ. 10.05ಕ್ಕೆ, ಮ.12.30, ಸಂ.7.15, ರಾ.9.40ಕ್ಕೆ
ದಿ ತಾಜ್ ಸ್ಟೋರಿ (ಹಿ): ಬೆ: 10.05, ಮ: 3.50ಕ್ಕೆ,
ಯಜಮಾನ (ಕ): ಮ: 12.40ಕ್ಕೆ, ಜಟಾಧರ (ತೆ): ಮ: 1.00ಕ್ಕೆ,
ಡೈಸ್ ಇರೇ (ಮ): ಮ. 1.35ಕ್ಕೆ, ರಾ: 7.40ಕ್ಕೆ, ಬಾಹುಬಲಿ (ಹಿ): ಮ. 2.55ಕ್ಕೆ,
ತಮ್ಮಾ (ಹಿ): ಮ.3.45ಕ್ಕೆ, ಚೆನ್ನೈ ಎಕ್ಸ್‌ಪ್ರೆಸ್ (ಹಿ): ಸಂ. 4.05ಕ್ಕೆ,
ಆರೊಮಲೆ (ತ): ಸಂ.7.15ಕ್ಕೆ, ಏಕ್ ದಿವಾನೆ ಕಿ ದೀವಾನಿಯಾತ್ (ಹಿ): ಸಂ.7.15ಕ್ಕೆ
ಇನ್ನೋಸೆಂಟ್(ಮ): ರಾ.10.10ಕ್ಕೆ, ಮರ್ಡರ್ ರಿಪೋರ್ಟ್(ಕೋ): ರಾ.10.20ಕ್ಕೆ,

ಗರುಡ ಮಾಲ್

ಕಾಂತಾರ ಚಾಪ್ಟರ್ 1(ಕ) : ಬೆ: 9.50ಕ್ಕೆ, ಮ.1.10ಕ್ಕೆ, ಸಂ.7.05
ಪ್ರೆಡೆಟರ್ ಬ್ಯಾಡ್‌ಲ್ಯಾಂಡ್ಸ್ (ಇ): ಬೆ. 10.00ಕ್ಕೆ, ಸಂ.4.45, ರಾ.10.20ಕ್ಕೆ
ದಿ ಗರ್ಲ್‌ಫ್ರೆಂಡ್ (ತೆ): ಬೆ: 10.10ಕ್ಕೆ, ಸಂ.7.05, ರಾ.10.00ಕ್ಕೆ
ಹಕ್ (ಹಿ): ಬೆ: 10.40ಕ್ಕೆ, ಸ.4.15, ರಾ.10.30ಕ್ಕೆ
ಬಾಹುಬಲಿ (ತೆ): ಮ. 12.25ಕ್ಕೆ,
ಬ್ರ್ಯಾಟ್ (ಕ): ಮ. 1.05ಕ್ಕೆ, ಸಂ.7.10ಕ್ಕೆ
ಜಟಾಧರ (ತೆ): ಮ: 1.30ಕ್ಕೆ,
ಲವ್ ಯು ಮುದ್ದು(ಕ): ಸಂ.4.20ಕ್ಕೆ, ಡೈಸ್ ಇರೇ (ಮ): ಸಂ.4.35, ರಾ.10.10ಕ್ಕೆ
ಐ ಆ್ಯಮ್ ಗಾಡ್ (ಕ): ಸಂ.7.05ಕ್ಕೆ,

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದಲ್ಲಿ ಕೃಷಿ ತಂತ್ರಜ್ಞ; ಕೃಷಿ ಯಂತ್ರೋಪಕರಣಗಳ ರಿಪೇರಿ ಕೌಶಲ್ಯ ತರಬೇತಿ

ಮೈಸೂರು, ನ. 18– ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರ, ಸುತ್ತೂರು, ಆತ್ಮ ಯೋಜನೆ ಕೃಷಿ ಇಲಾಖೆ ಮೈಸೂರು ಹಾಗೂ ವಿಸಿಫಾರಂ ಮಂಡ್ಯ ಅವರುಗಳ ಸಹಯೋಗದೊಂದಿಗೆ 5 ದಿನಗಳ ಕೃಷಿ ತಂತ್ರಜ್ಞ ಹಾಗೂ ಕೃಷಿ ಯಂತ್ರೋಪಕರಣಗಳ ಕೌಶಲ್ಯ ತರಬೇತಿಯನ್ನು ಸುತ್ತೂರಿನ ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಉದ್ಘಾಟನೆಯನ್ನು ಮಂಡ್ಯದ ಕೃಷಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಡಾ. ಶ್ರೀದೇವಿ ಉದ್ಘಾಟಿಸಿ ಮಾತನಾಡಿ, ರೈತರು ತಮ್ಮ ಕೃಷಿ ಯಂತ್ರೋಪಕರಣಗಳನ್ನು ತಾವೇ ದುರಸ್ತಿ ಮಾಡಿಕೊಳ್ಳುವ ಹಂತಕ್ಕೆ ಬರಬೇಕು. ರೈತರಿಗೆ ಕೃಷಿ ಯಂತ್ರೋಪಕರಣ ರಿಪೇರಿ ತರಬೇತಿ ನೀಡುವ ನಿಟ್ಟಿನಲ್ಲಿ ಜೆಎಸ್‌ಎಸ್ ಕೆವಿಕೆ, ಕೃಷಿ ಇಲಾಖೆ ಹಾಗೂ ಮಂಡ್ಯದ ಕೃಷಿ ವಿಶ್ವವಿದ್ಯಾನಿಲಯದ ಪ್ರಥಮ ಹೆಜ್ಜೆಯಾಗಿದೆ. ಎಲ್ಲಾ ಶಿಬಿರಾರ್ಥಿಗಳನ್ನು ಮಂಡ್ಯದ ವಿಸಿ ಫಾರಂಗೆ ಭೇಟಿ ಮಾಡಿಸಿ ಪ್ರಾಯೋಗಿಕ ತರಬೇತಿಯನ್ನು ಸಹ ನೀಡಲಾಗುವುದು ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ನಂಜನಗೂಡು ತಾಲೂಕಿನ ಕೃಷಿ ಅಧಿಕಾರಿ ರಘುವೀರ್ ಮಾತನಾಡಿ, ಈ ಕೌಶಲ್ಯ ತರಬೇತಿ ಪಡೆದ ರೈತರು ತಮ್ಮ ಸ್ವಂತ ಸ್ಥಳ, ಹಳ್ಳಿಗಳಲ್ಲಿ ಇತರೆ ರೈತರಿಗೆ ಕೃಷಿ ಯಂತ್ರೋಪಕರಣಗಳ ರಿಪೇರಿ ಕೌಶಲ್ಯವನ್ನು ತಿಳಿಸಿಕೊಡಬೇಕೆಂದು ಕರೆನೀಡಿದರು. ಕೃಷಿ ಇಲಾಖೆಯ ವತಿಯಿಂದ ರೈತರಿಗೆ ಕೃಷಿ ಯಂತ್ರೋಪಕರಣಗಳಿಗೆ ಸಿಗುವ ಸಬ್ಸಿಡಿ ಕುರಿತು ಮಾಹಿತಿ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಸುತ್ತೂರಿನ ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥ ಡಾ. ಬಿ.ಎನ್. ಜ್ಞಾನೇಶ್ ಮಾತನಾಡಿ, ಪ್ರಸ್ತುತ ಪರಿಸ್ಥಿತಿಯಲ್ಲಿ ರೈತರು ತಮ್ಮ ಕೃಷಿ ಯಂತ್ರೋಪಕರಣಗಳನ್ನು ರಿಪೇರಿ ಮಾಡಿಸಲು ಸಮೀಪದ ತಾಲೂಕು ಕೇಂದ್ರಕ್ಕೆ ಭೇಟಿ ನೀಡಬೇಕು. ಇದರಿಂದ ರೈತರಿಗೆ ಸಮಯ ಹಾಗೂ ವೆಚ್ಚ ಹೆಚ್ಚಾಗುತ್ತದೆ. ಸಕಾಲದಲ್ಲಿ ಸೀಮಿತ ಕೃಷಿ ಯಂತ್ರೋಪಕರಣಗಳ ರಿಪೇರಿಗಳನ್ನು ತಮ್ಮ ಸ್ವಂತ ಸ್ಥಳದಲ್ಲಿಯೇ ರಿಪೇರಿ ಮಾಡಿಕೊಳ್ಳುವ ಸಲುವಾಗಿ ಈ ತರಬೇತಿಯನ್ನು ಹಮ್ಮಿಕೊಳ್ಳಲಾಗಿದೆ. ಇದರಿಂದ ಸಮಯ ಹಾಗೂ ವೆಚ್ಚವನ್ನು ರೈತರು ಉಳಿಸಬಹುದಾಗಿದೆ ಎಂದು ತಿಳಿಸಿದರು. ರೈತರು ಈ ಕೌಶಲ್ಯ ತರಬೇತಿಯನ್ನು ಸಮರ್ಪಕವಾಗಿ ಉಪಯೋಗಿಸಿಕೊಳ್ಳಲು ರೈತರಿಗೆ ತಿಳಿಸಿದರು.

ಮೈಸೂರು ಜಿಲ್ಲೆಯ ತಾಲೂಕುಗಳಿಂದ 42 ರೈತರು ತರಬೇತಿಯಲ್ಲಿ ಪಾಲ್ಗೊಂಡು ಕೃಷಿ ಯಂತ್ರೋಪಕರಣಗಳ ತಾಂತ್ರಿಕ ಮಾಹಿತಿ ಹಾಗೂ ರಿಪೇರಿ ಕೌಶಲ್ಯವನ್ನು ಪಡೆದುಕೊಂಡರು. ತರಬೇತಿಯ ಉಸ್ತುವಾರಿಯನ್ನು ಕೃಷಿ ವಿಜ್ಞಾನ ಕೇಂದ್ರದ ವಿಷಯ ತಜ್ಞರಾದ ಶ್ರೀಮತಿ ಹೆಚ್.ವಿ. ದಿವ್ಯಾ ಹಾಗೂ ಫಾರಂ ಮ್ಯಾನೇಜರ್ ಗಂಗಪ್ಪ ಹಿಪ್ಪರಿಗಿ ವಹಿಸಿಕೊಂಡಿದ್ದರು.



ಸಮಾಜಮುಖಿ ಸಾಹಿತ್ಯ ರಚನೆ ಉತ್ತಮ ಸಾಹಿತಿಯ ಲಕ್ಷಣ

ಮಂಡ್ಯ ಕರ್ನಾಟಕ ಸಂಘದ ಅಧ್ಯಕ್ಷರಾದ ಪ್ರೊ. ಜಯಪ್ರಕಾಶ್‌ಗೌಡ ಅಭಿಮತ

ಮೈಸೂರು, ನ 18– ವಾಸ್ತವ ನೆಲೆಯಲ್ಲಿ ಸಮಾಜಮುಖಿಯಾಗಿ ಸಾಹಿತ್ಯ ರಚಿಸುವುದು ಉತ್ತಮ ಸಾಹಿತಿಯ ಲಕ್ಷಣ ಎಂದು ಮಂಡ್ಯ ಕರ್ನಾಟಕ ಸಂಘದ ಅಧ್ಯಕ್ಷರಾದ ಪ್ರೊ. ಜಯಪ್ರಕಾಶ್ ಗೌಡ ಅಭಿಪ್ರಾಯಪಟ್ಟರು.

ಮಂಡ್ಯದ ಪಿ ಇ ಎಸ್ ಕಾಲೇಜಿನ ವಿವೇಕಾನಂದ ಸಭಾಂಗಣದಲ್ಲಿ ನಡೆದ ಸ್ವಯಂ ಸ್ವಾಸ್ಥ್ಯ ನೇಚರ್ ಕ್ಯೂರ್ ಫೌಂಡೇಶನ್ ಬೆಂಗಳೂರು ಮತ್ತು ಎಂ ಆರ್ ಎಂ ಪ್ರಕಾಶನ ಮಂಡ್ಯ ಇವರು ಆಯೋಜಿಸಿದ್ದ ರಾಷ್ಟ್ರೀಯ ಪ್ರಕೃತಿ ಚಿಕಿತ್ಸಾ ದಿನಾಚರಣೆಯ ಪ್ರಯುಕ್ತ ಡಾ. ನೀಗೂ ರಮೇಶ್ ಅವರ ಎರಡು ಪುಸ್ತಕಗಳನ್ನು ಲೋಕಾರ್ಪಣೆ ಮಾಡಿ ಮಾತನಾಡಿದರು. ನೀಗೂ ರಮೇಶ್ ಅವರು ಆದರ್ಶಮಯ ಕಲ್ಪನಾ ಲೋಕದಲ್ಲಿ ಕಾವ್ಯ ರಚಿಸದೆ ಇಂದಿನ ಸಮಾಜಕ್ಕೆ ತುರ್ತು ಅಗತ್ಯವಾಗಿರುವ ಆರೋಗ್ಯ ಜಾಗೃತಿಯನ್ನು ಕುರಿತು ಹನಿಗವನ ರೂಪದಲ್ಲಿ ರಚಿಸಿರುವ ಸಾಹಿತ್ಯ ತುಂಬಾ ಮೌಲಿಕವಾದದ್ದು ಎಂದು ಪ್ರತಿಪಾದಿಸಿದರು.

ಕೆಂಗೇರಿ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಶ್ರೀ ಶ್ರೀ ನಿಶ್ಚಲಾನಂದ ಮಹಾಸ್ವಾಮಿಗಳು ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿದ್ದರು. ಪ್ರಕೃತಿ ಚಿಕಿತ್ಸಾ ತಜ್ಞರಾದ ಪಾಸಿಟಿವ್ ತಮ್ಮಯ್ಯ ಮತ್ತು ಕೆ.ಎಸ್.ಗಿರಿರಾಜು ಅವರೊಂದಿಗೆ ಆರೋಗ್ಯ ಸಂವಾದ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ದಾವಣಗೆರೆಯ ಪ್ರಕ್ರಿಯೆ ಪ್ರಕೃತಿ ಚಿಕಿತ್ಸೆ ವೈದ್ಯಾಧಿಕಾರಿಗಳಾದ ಡಾ. ಗಂಗಾಧರ ವರ್ಮ ನೆರವೇರಿಸಿದರು. ಡಾ. ನೀಗೂ ರಮೇಶ್ ರವರು ರಚಿಸಿರುವ 'ಆರೋಗ್ಯ ಹನಿ' ಕೃತಿಯನ್ನು ಡಾ.ಬಿ.ಸಿ. ದೊಡ್ಡೇಗೌಡ ಪರಿಚಯಿಸಿದರು. ಪ್ರಕೃತಿ ಚಿಕಿತ್ಸೆಯೊಂದಿಗೆ ಪರಿಪೂರ್ಣ ಆರೋಗ್ಯ ಕೃತಿಯನ್ನು ಪತ್ರಕರ್ತ ದ. ಕೋ. ಹಳ್ಳಿ ಚಂದ್ರಶೇಖರ್ ಪರಿಚಯಿಸಿದರು. ಇದೇ ಸಂದರ್ಭದಲ್ಲಿ ಸ್ವಯಂ ಸ್ವಾಸ್ಥ್ಯ ನೇಚರ್ ಕ್ಯೂರ್ ಫೌಂಡೇಶನ್ ಕೊಡ ಮಾಡುವ ಗಾಂಧಿ ಸ್ವಯಂ ಸ್ವಾಸ್ಥ್ಯ ಪುರಸ್ಕಾರವನ್ನು ತುಮಕೂರು ಜಿಲ್ಲೆ ಗುಬ್ಬಿ ತಾಲೂಕಿನ ಸಹಜ ಕೃಷಿಕರಾದ ಎ ಎಸ್ ಮಹೇಶ್ ಅವರಿಗೆ ಪ್ರಧಾನ ಮಾಡಲಾಯಿತು. ಕಾರ್ಯಕ್ರಮದಲ್ಲಿ ಮಂಡ್ಯದ ಮೈಶುಗರ್ ಕಂಪನಿಯ ಆಡಳಿತ ಅಧಿಕಾರಿಗಳಾದ ಮನುಜಶ್ರೀ ಮತ್ತು ಪ್ರಕಾಶಕರಾದ ಮಹೇಶ್ ಕುಮಾರ್ ಎನ್ ಅವರು ಉಪಸ್ಥಿತರಿದ್ದರು. ಲೇಖಕ ಕೊತ್ತತ್ತಿ ರಾಜು ಕಾರ್ಯಕ್ರಮ ನಿರೂಪಿಸಿದರು.

ಆರೋಗ್ಯ ಮತ್ತು ವ್ಯಕ್ತಿತ್ವ ವಿಕಸನ ಸಾಹಿತ್ಯ ರಚನೆಯತ್ತ ಇತ್ತೀಚಿನ ಸಾಹಿತಿಗಳು ಆಸಕ್ತಿ ತೋರುತ್ತಿರುವುದು ಉತ್ತಮ ಬೆಳವಣಿಗೆ ಎಂದು ಕೆಂಗೇರಿಯ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಶ್ರೀ ಶ್ರೀಶ್ರೀ ನಿಶ್ಚಲಾನಂದ ಮಹಾಸ್ವಾಮಿಗಳು ಅಭಿಪ್ರಾಯಪಟ್ಟರು.

ಮಂಡ್ಯ ಜಿಲ್ಲೆಯವರೇ ಆದ ನೀಗೂ ರಮೇಶ್ ಅವರ ಸಾಹಿತ್ಯವು ವಾಸ್ತವಕ್ಕೆ ಹತ್ತಿರವಾಗಿದೆ. ಸಾಹಿತಿಗಳು ಸಮಾಜಮುಖಿಯಾಗುವ ಹೊಸ ಮಾರ್ಗವನ್ನು ಇವರ ಬರಹಗಳು ಪರಿಚಯಿಸಿವೆ, ಸಾಹಿತ್ಯ ರಚಿಸಲು ಯಾವುದೇ ವಿಷಯಗಳ ಮಿತಿ ಇಲ್ಲ ಎಂಬುದನ್ನು ಸಾಬೀತು ಮಾಡಿವೆ ಎಂದು ವ್ಯಾಖ್ಯಾನಿಸಿದರು.



ರಾಷ್ಟ್ರೀಯ ಪ್ರಕೃತಿ ಚಿಕಿತ್ಸಾ ದಿನಾಚರಣೆಯ ಪ್ರಯುಕ್ತ ಡಾ. ನೀಗೂ ರಮೇಶ್ ಅವರ ಪುಸ್ತಕಗಳನ್ನು ಲೋಕಾರ್ಪಣೆ ಮಾಡಲಾಯಿತು

ಮ್ಯಾನೇಜ್‌ಮೆಂಟ್ ಫೆಸ್ಟ್‌ನಲ್ಲಿ ಎಸ್‌ಡಿಎಂ–ಐಎಂಡಿ ವಿದ್ಯಾರ್ಥಿಗಳಿಗೆ ಪ್ರಶಸ್ತಿ



ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಎಸ್‌ಡಿಎಂಐಎಂಡಿ ನಿರ್ದೇಶಕ ಡಾ. ಎಸ್.ಎನ್.ಪ್ರಸಾದ್ ಅಭಿನಂದಿಸಿದರು.

ಮೈಸೂರು, ನ.18(ವಿವಿಹೆಚ್)– ಮೈಸೂರಿನ ಎಸ್‌ಡಿಎಂ ಇನ್ಸ್ಟಿಟ್ಯೂಟ್ ಫಾರ್ ಮ್ಯಾನೇಜ್ಮೆಂಟ್ ಡೆವಲಪ್‌ಮೆಂಟ್ (ಎಸ್‌ಡಿಎಂ–ಐಎಂಡಿ) ವಿದ್ಯಾರ್ಥಿಗಳು ತಿರುಚಿಯ ಭಾರತಿದಾಸನ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ (ಬಿಐಎಂ)ನಲ್ಲಿ ಆಯೋಜಿಸಿದ್ದ ಮ್ಯಾನೇಜ್ಮೆಂಟ್ ಫೆಸ್ಟ್‌ನಲ್ಲಿ ಭಾಗವಹಿಸಿ ಹಲವಾರು ಪ್ರಶಸ್ತಿಗಳನ್ನು ಗೆದ್ದಿದ್ದಾರೆ.

ಆಪರೇಷನ್ಸ್ ಸ್ಪರ್ಧೆಯಲ್ಲಿ ಕೃಪಾ ಶೆಟ್ಟಿ, ಪರೀಕ್ಷಿತ್ ಗೋಖಲೆ ಮತ್ತು ಧನುಷ್.ಜಿ ಮೊದಲ ಸ್ಥಾನ ಪಡೆದಿದ್ದಾರೆ. ಇವರು ರಸಪ್ರಶ್ನೆ, ಕೇಸ್ ಸ್ಟಡಿ ವಿಶ್ಲೇಷಣೆ ಮತ್ತು ಬೇಡಿಕೆ ಪೂರೈಕೆಯನ್ನು ಸಮತೋಲನಗೊಳಿಸುವ ವರ್ಚುವಲ್ ಸಿಮ್ಯುಲೇಶನ್ ಗೇಮ್‌ಗಳಲ್ಲಿ ಉತ್ತಮ ಪ್ರದರ್ಶನ ನೀಡಿದರು. ಬೆಸ್ಟ್ ಮ್ಯಾನೇಜರ್ ವಿಭಾಗದಲ್ಲಿ ವೃತ್ತಿಕಾ ದಾಸ್ ಮೊದಲ ಸ್ಥಾನ ಪಡೆದಿದ್ದಾರೆ. ಇಲ್ಲಿ ಆಪ್ಟಿಟ್ಯೂಡ್ ಪರೀಕ್ಷೆ ಜೊತೆಗೆ ಇಪ್ಪತ್ತರಿಂದ ಇಪ್ಪತ್ತೈದು ನಿಮಿಷಗಳ ವೈಯಕ್ತಿಕ ಸಂದರ್ಶನವೂ ಇದ್ದು, ಸ್ವ-ಪರಿಚಯ, ಒತ್ತಡ ನಿರ್ವಹಣೆ, ಸಮಸ್ಯೆ ಪರಿಹಾರ ಸಾಮರ್ಥ್ಯ ಮತ್ತು ತ್ವರಿತ ಚಿಂತನೆಗಳನ್ನು ಪರಿಶೀಲಿಸಲಾಯಿತು.

ಫೈನಾನ್ಸ್ ವಿಭಾಗದಲ್ಲಿ ಪುರಾ ಸಾಯಿ ತೇಜ, ಅನಿಕೇತ್ ಬರ್ನ್ವಾಲ್ ಮತ್ತು ಅಭಯ್ ಬಾಳಿಗಾ ಅವರು ಮೊದಲ ಸ್ಥಾನ ಗೆದ್ದಿದ್ದಾರೆ. ಈ ವಿಭಾಗದಲ್ಲಿ ರಸಪ್ರಶ್ನೆ, ಹಣಕಾಸು ಸಂಬಂಧಿತ ಕೇಸ್ ಸ್ಟಡಿ ಮತ್ತು ವಿಲೀನ ಸ್ವಾಧೀನ (ಎಂ&ಎ) ಕೇಸ್‌ಗಳಿಗೆ ಶಿಫಾರಸುಗಳನ್ನು ನೀಡುವ ಹಂತಗಳು ಸೇರಿದ್ದವು. ಪಿಚ್ ಮತ್ತು ಪ್ರೊಪೆಲ್ ಸ್ಪರ್ಧೆಯಲ್ಲಿ ನರೇನ್ ಸತೀಶ್, ಶಮೀರಾ ಐ ಹಾಗೂ ಸಿದ್ಧಾರ್ಥ್ ಸಿಂಗ್ ಉತ್ತಮವಾಗಿ ಪ್ರದರ್ಶನ ನೀಡಿ ಮೊದಲ ಸ್ಥಾನ ಪಡೆದಿದ್ದಾರೆ. ತೀರ್ಪುಗಾರರ ಮುಂದೆ ತಮ್ಮ ವ್ಯವಹಾರ ಕಲ್ಪನೆಯನ್ನು ನಿಖರವಾಗಿ ಪ್ರಸ್ತುತಪಡಿಸುವ ಸಾಮರ್ಥ್ಯ ಇವರಿಗೆ ಗೆಲುವು ತಂದುಕೊಟ್ಟಿತು.

ಸೋಲೋ ಸಿಂಗಿಂಗ್ ಸ್ಪರ್ಧೆಯಲ್ಲಿ ಅಖಿಲ್ ಪಿ. ಚಂದ್ರಶೇಖರ್ ಎರಡನೇ ಸ್ಥಾನ ಪಡೆದಿದ್ದಾರೆ. ಈ ವಿಭಾಗದಲ್ಲಿ ಆನ್ಲೈನ್ ಪ್ರಾಥಮಿಕ ಸುತ್ತು ಮತ್ತು ಆಫ್ಲೈನ್ ಫೈನಲ್ ಸುತ್ತು ನಡೆದವು.

ವಿವಿಧ ವಿಭಾಗಗಳಲ್ಲಿ ವಿದ್ಯಾರ್ಥಿಗಳು ತೋರಿದ ಸಾಧನೆಗೆ ಸಂಸ್ಥೆಯ ನಿರ್ದೇಶಕರು, ಅಧ್ಯಾಪಕರು ಮತ್ತು ಸಿಬ್ಬಂದಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಪ್ರಮಾಣ ಪತ್ರ

ಮೈಸೂರು ಸಿಟಿ, ಬನ್ನಿಮಂಟಪ ಬಡಾವಣೆ, ಚಿಕ್ಕವೀರಣ್ಣ ರಸ್ತೆ, 3ನೇ ಕ್ರಾಸ್, ಮನೆ ನಂ. 111 ರಲ್ಲಿ ವಾಸವಾಗಿರುವ ಲೇಟ್ ಮಾದಯ್ಯ ರವರ ಮಗನಾದ ಮಲ್ಲಯ್ಯ ಆದ ನಾನು, ನನ್ನ ಎಲ್ಲಾ ದಾಖಲಾತಿಗಳಲ್ಲಿ ಮಲ್ಲಯ್ಯ @ ಮಲ್ಲಪ್ಪ ಎಂದು ನಮೂದಾಗಿದ್ದು, ಮೇಲ್ಕಂಡ ನನ್ನ ಹೆಸರು ಮಲ್ಲಯ್ಯ @ ಮಲ್ಲಪ್ಪ ಈ ಎರಡು ಹೆಸರು ನನ್ನದೇ ಆಗಿರುತ್ತದೆ ಹಾಗೂ ನನ್ನ ತಂದೆಯಾದ ಲೇಟ್ ಮಾದಯ್ಯ @ ಮಲ್ಲಪ್ಪ ಎಂದು ನಮೂದಾಗಿದ್ದು, ಈ ಮೇಲ್ಕಂಡ ನನ್ನ ತಂದೆಯ ಹೆಸರು ಲೇಟ್ ಮಾದಯ್ಯ @ ಮಲ್ಲಪ್ಪ ಈ ಎರಡು ಹೆಸರು ನನ್ನ ತಂದೆಯದೇ ಆಗಿರುತ್ತದೆ ಎಂದು ದಿನಾಂಕ: 17-11-2025 ರಂದು ಸುಮಿತ್ರ ಬಿ. ನೋಟರಿ ಯವರ ಮುಂದೆ ಪ್ರಮಾಣೀಕರಿಸುತ್ತೇನೆ.

ಸಹಿ/– ಮಲ್ಲಯ್ಯ

DOCUMENT LOST

I, Krishna Kumari R/a No. 96/A, Rajput Block, N.R. Mohalla, Mysuru, have Lost Allotment, Possession certificate belongs to above mentioned property on 18/11/2025 at Mysore. Finders please Contact
9845101035

ಕಾರ್ಯಪಾಲಕ ಅಭಿಯಂತರರು ಕಛೇರಿ

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್ ಹುಣಸೂರು ವಿಭಾಗ ಹುಣಸೂರು 571105 ಹುಣಸೂರು ವಿಭಾಗ, ಕೆ.ಎಸ್.ಆರ್.ಟಿ.ಸಿ ಡಿಪೋ ಹಿಂಭಾಗ, ಹುಣಸೂರು.

Email: eehunsur@kridl.net

ಸಂಖ್ಯೆ: ಕಾಅ.ಕೆ.ಆರ್.ಐ.ಡಿ.ಎಲ್:ಹುಣಸೂರು.ವಾಹನ:2025–26/531 ದಿನಾಂಕ : 14-11-2025

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ಕೆ.ಆರ್.ಐ.ಡಿ.ಎಲ್ ಸಂಸ್ಥೆಯ ಕಾರ್ಯಪಾಲಕ ಅಭಿಯಂತರರು, ಹುಣಸೂರು ವಿಭಾಗ ಕಛೇರಿಗೆ ಹೊರಗುತ್ತಿಗೆ ಆಧಾರದ ಮೇಲೆ ಬಾಡಿಗೆಗೆ ವಾಹನ ಸೇವೆಯನ್ನು ಪಡೆಯಲು ಇ-ಪ್ರೊಕ್ಯೂರ್‌ಮೆಂಟ್ www.eproc.Karntaka.gov.in ಮುಖಾಂತರ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ಅಧಿಸೂಚನೆ ಈ ಕೆಳಕಂಡಂತಿರುತ್ತದೆ. ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲಾತಿ ಲಭ್ಯವಿರುವ ದಿನಾಂಕ: 15–11–2025 ರಿಂದ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 01–12–2025. ಹೆಚ್ಚಿನ ವಿವರಗಳನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಮಾಹಿತಿ ಪಡೆದುಕೊಳ್ಳಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಕೆ.ಆರ್.ಐ.ಡಿ.ಎಲ್, ಹುಣಸೂರು ವಿಭಾಗ, ಹುಣಸೂರು.
(ಸಂಪರ್ಕ ಸಂಖ್ಯೆ: 9448055174)

3ನೇ ವರ್ಷದ ಸವಿನೆನಪು



ದುಃಖಿತಪ್ತರು :
ಮಿನಿನಾ,
ಸದ್ಾ ಮಗ–
ಉದಯ್ ಜಿತೇಂದ್ರ,
ಮಂಜುನಾಥ್,
ಮೊಮ್ಮಕ್ಕಳು
ಮತ್ತು
ಬಂಧುಮಿತ್ರರು
ಹಾಗೂ ಕುಟುಂಬ
ವರ್ಗದವರು

ಶ್ರೀಮತಿ ಕಮಲಮ್ಮ

10ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ 10 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನ ಮನೆಯಲ್ಲಿ ಚಿರಸ್ಥಾಯಿಯಾಗಿದೆ.

ದುಃಖಿತಪ್ತರು:
ಪತ್ನಿ, ಮಕ್ಕಳು, ಮೊಮ್ಮಕ್ಕಳು ಮತ್ತು ಕುಟುಂಬವರ್ಗದವರು

ಎ.ವಿಜಯನ್
ಮುಡಾ ಕಂಟ್ರಾಕ್ಟರ್

25ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಬಿ.ಎಸ್. ಪಾಪಣ್ಣ
ನಿವೃತ್ತ ಪಶು ವೈದ್ಯಕೀಯ ಮತ್ತು ಪಶು ಪರೀಕ್ಷಕರು
ನಿಧನ : 19–11–2000

ನೀವು ನಮ್ಮನಗಲಿ ಇಂದಿಗೆ 25 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ ಪತ್ನಿ ಪುಟ್ಟಲಿಂಗಮ್ಮ ಮತ್ತು ಮಕ್ಕಳಾದ ವಸಂತಕುಮಾರ್, ಸುನಿತ, ಶಶಿಕಲಾ, ಗಿರೀಶ್, ಲೋಕಮ್ಮ ಮತ್ತು ಕುಟುಂಬ ವರ್ಗದವರು.

PUBLIC NOTICE

Notice is hereby given that my client is entering into a sale transaction with 1. Mr. Khaleelur Rahaman Sharief, aged about 49 years, Son of Late. Abdul Rahman, Residing at Door No.427/13 MIG, 7th 'A' Cross, 'A' Sector, New Town, Yelanka, Bengaluru-560064 and 2. Mrs. Salma Tarannum, aged about 40 years, Wife of Mr. Khaleelur Rahaman Sharief, Residing at Door No.427/13 MIG, 7th 'A' Cross, 'A' Sector, New Town, Yelanka, Bengaluru-560064 with respect to the Schedule Property mentioned hereunder. Any person/s having or claiming any right/s, title, estate or interest/s by way of inheritance/s, mortgage, sale, lease lien, charge, trust, maintenance, easements, transfer, license, possession, gift, encumbrance or in whatsoever manner over the Schedule Properties are hereby required to give notice of the same to the undersigned in the address mentioned below within 07 days from the date of publication hereof together with the copies of all documents on the basis of which such claims are made, failing which any such right, title, interest or claim, will be deemed to have been waived and not binding on my client and he will proceed to conclude the transaction without reference to the same if any.

SCHEDULE PROPERTY

All that piece and parcel of the vacant site property bearing No.37-1-506-168, Old No.34 measuring East to West 45.73 Meter (150 Feet) and North to South 27.43, Meter (90 Feet), totally measuring 1254.18 Sq. Meters (13500 Sq.Ft.) situated at '4th' Block, Jayalakshmipuram Extension, Devaraja Mohalla, Mysuru, bounded on the East by : Property No. 16, West by : 30 Feet wide Road, North by: Property No.33, South by: Property No.35.

Sd/- H.P. RAKSHITH, BAL., LL.B.,
Advocate, KAR No. 1915/04
#651, CA-1, 1st Floor, "Sri Vidhya"
1st Main Road, Aravinda Nagar,
Mysuru-23. Mob: 9738200157

Place: Mysuru
Date: 18-11-2025

ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು

ಸಂಖ್ಯೆ:ಮೈಅಪ್ರಾ/ವ.ಕ–2/ /2025–26
ದಿನಾಂಕ : 13.11.2025

ಪತ್ರಿಕಾ ಪ್ರಕಟಣೆ

ಶ್ರೀಮತಿ. ಗಿರಿಜಾ ಕೋಂ ಶ್ರೀ.ಬಿ.ಎಸ್. ಮೂರ್ತಿ ರವರಿಗೆ ಮೈಸೂರು ನಗರದ ದಟ್ಟಗಳ್ಳಿ ಐ-ಬ್ಲಾಕ್ ಬಡಾವಣೆಯ ಎಲ್.ಐ.ಜಿ ಮನೆ ಸಂಖ್ಯೆ: 74 ಅಳತೆ 7.50 X 12.50 ಮೀ ನಿವೇಶನವು ಪ್ರಾಧಿಕಾರದಿಂದ ದಿನಾಂಕ: 23.03.1989 ರಂದು ನಿವೇಶನವು ಮಂಜೂರಾಗಿರುತ್ತದೆ. ದಿನಾಂಕ: 20.03.1991 ರಂದು ಸ್ವಾಧೀನ ಪತ್ರ ಪಡೆದಿರುತ್ತಾರೆ.

ಮೂಲ ಮಂಜೂರಾತಿದಾರರಾದ ಶ್ರೀಮತಿ. ಗಿರಿಜಾ ರವರು ದಿನಾಂಕ:18.09.2020 ರಂದು ಮರಣ ಹೊಂದಿರುವ ಬಗ್ಗೆ ಮೈಸೂರು ಮಹಾ ನಗರಪಾಲಿಕೆ ಮೈಸೂರು ರವರಿಂದ ಮರಣ ಪ್ರಮಾಣ ಪತ್ರವನ್ನು ಪಡೆದು ಸಲ್ಲಿಸಿರುತ್ತಾರೆ. ಹಾಗೂ ಉಪ ತಹಶೀಲ್ದಾರ್ ಕಸಬಾ ಹೋಬಳಿ ಮೈಸೂರು ತಾಲ್ಲೂಕು ಮತ್ತು ಜಿಲ್ಲೆ ರವರು ನೀಡಿರುವ ವಂಶವೃಕ್ಷ ಪ್ರಮಾಣ ಪತ್ರದ ಸಂಖ್ಯೆ RD5018882825979 ದಿನಾಂಕ 09.03.2022 ಅನ್ನು ಸಲ್ಲಿಸಿರುತ್ತಾರೆ. ಮಂಜೂರಾತಿ ದಾರರ ಪತಿಯು ಸಹ ಮರಣ ಹೊಂದಿರುತ್ತಾರೆ.

ಲೇಟ್.ಗಿರಿಜಾ ರವರ ಮಗ ಶ್ರೀ.ಅರ್ಜುನ. ಎಸ್ ರವರು ಖಾತೆ ವರ್ಗಾವಣೆ ಹಾಗೂ ಕ್ರಯಪತ್ರ ಕೋರಿ ಅರ್ಜಿ ಸಲ್ಲಿಸಿರುವುದರಿಂದ, ಸದರಿಯವರ ಹೆಸರಿಗೆ ಮೇಲ್ಕಂಡ ಮನೆಯನ್ನು ಖಾತೆ ವರ್ಗಾವಣೆ ಮಾಡಿ ಕ್ರಯಪತ್ರ ನೀಡುವ ಸಂಬಂಧ ಯಾರಿಂದಾದರೂ ತಂಟೆ ತಕರಾರು/ಆಕ್ಷೇಪಣೆ ಏನಾದರು ಇದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 30 ದಿವಸಗಳೊಳಗೆ ಲಿಖಿತವಾಗಿ ಆಯುಕ್ತರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು ರವರಿಗೆ ದೂರು ಸಲ್ಲಿಸುವುದು. ಇಲ್ಲದಿದ್ದಲ್ಲಿ ಯಾವುದೇ ಆಕ್ಷೇಪಣೆ ಇಲ್ಲವೆಂದು ಪರಿಗಣಿಸಿ ನಿಯಮಾನುಸಾರ ಕ್ರಮ ವಹಿಸಲಾಗುವುದು.

ಸಹಿ/– ವಿಶೇಷ ತಹಸೀಲ್ದಾರ್
ವಲಯ ಕಛೇರಿ–2
ಮೈಸೂರು ಅಭಿವೃದ್ಧಿ ಪ್ರಾಧಿಕಾರ ಮೈಸೂರು

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಗುಂಡ್ಲುಪೇಟೆ

ಆರ್.ಎ ಸಂಖ್ಯೆ: 96/2025

ಮೇಲ್ಮನವಿದಾರರು :ಶಿವನಾಗಮ್ಮ ಮತ್ತು ಇನ್ನೊಬ್ಬರು

ವಿರುದ್ಧ

ಎದುರುದಾರರು :ಕೆ.ಬಿ.ನಾಗರಾಜು, ಬಿನ್ ಲೇ. ಬಸಪ್ಪ, ಸುಮಾರು 71 ವರ್ಷ, ಕಮರಹಳ್ಳಿ ಗ್ರಾಮ, ಬೇಗೂರು ಹೋಬಳಿ, ಗುಂಡ್ಲುಪೇಟೆ ತಾಲ್ಲೂಕು. ಹಾಲಿ ವಾಸ: ಮೈಸೂರು.

ಸಾರ್ವಜನಿಕ ನೋಟೀಸ್

ಮೇಲ್ಕಂಡ ಮೇಲ್ಮನವಿಯನ್ನು ಮೇಲ್ಮನವಿದಾರರಾದ ಶಿವನಾಗಮ್ಮ ಮತ್ತು ಇನ್ನೊಬ್ಬರು, ಗುಂಡ್ಲುಪೇಟೆಯ ಪ್ರಧಾನ ಸಿವಿಲ್ ನ್ಯಾಯಾಲಯದ ಅಸಲು ದಾವಾ ಸಂಖ್ಯೆ: 247/2021 ರ ಪ್ರಾಥಮಿಕ ಡಿಕ್ರಿಯ ಆದೇಶದ ವಿರುದ್ಧ ನಿಮ್ಮ ವಿರುದ್ಧ ಗುಂಡ್ಲುಪೇಟೆಯ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಹೂಡಿದ್ದು, ಮೇಲ್ಕಂಡ ಅರ್ಜಿಯ ದಿನಾಂಕ 9/12/25 ರಂದು ಸುನಾವಣೆಗೆ ಇದ್ದು, ಸದರಿ ದಿನದಂದು ಈ ಅರ್ಜಿಯ ಸಂಬಂಧ ಫಸ ನ್ಯಾಯಾಲಯದಲ್ಲಿ ಖುದ್ದಾಗಿ ಅಥವಾ ವಕೀಲರ ಮುಖಾಂತರ ಮೇಲ್ಕಂಡ ದಿನಾಂಕದಂದು ಬೆಳಿಗ್ಗೆ 11:00 ಗಂಟೆಗೆ ಹಾಜರಾಗತಕ್ಕದ್ದು, ತಪ್ಪಿದಲ್ಲಿ ಸದರಿ ಅರ್ಜಿಯನ್ನು ಏಕಪಕ್ಷೀಯವಾಗಿ ತೀರ್ಮಾನ ಮಾಡಲಾಗುತ್ತದೆ.

By Order of The Court
Sd/- Chief Ministerial Officer
Senior Civil Judge & JMFC Court
Gundlupet

ಅರ್ಜಿದಾರರ ಪರ ವಕೀಲರು
ಸಹಿ/– ಎಸ್.ಎನ್.ನಂದೀಶ,
ಬಿ.ಎ.ಎಲ್.ಎಲ್.ಬಿ.,
ವಕೀಲರು, ಗುಂಡ್ಲುಪೇಟೆ

POLICE PUBLIC SCHOOL

(Run by the Karnataka State Police Welfare and Education Trust, Mysore)

INVITE APPLICATIONS FOR THE POST OF PRINCIPAL, PPS, JALAPURI, MYSURU.

1. ESSENTIAL QUALIFICATIONS:

i) Master's Degree with at least 60% marks from recognized institution/University.
ii) Bachelor degree in Education (B.Ed.) with at least 60% marks from NCTE recognized Institution/ University.

OR

Three year integrated B.Ed.- M.Ed from NCTE recognized institution/University with at least 60% marks

OR

iii) Working as Principal and Vice-Principal in CBSC or ICSE schools.

OR

For Kendriya Vidyalaya Sangathan: Working as Principal or Vice-Principal in CBSE/ICSE schools with 3 years of experience.

For Navodaya Vidyalaya Samiti: working as Principal or Vice-Principal having 09 years of combined service as PGT and Vice-Principal in which minimum 03 years as Vice-Principal.

OR

15 years regular service as PGT/ Lecturer in Central/ State Government/Autonomous organizations of Central/State Government.

iv) Knowledge of Computer Applications.
v) Working knowledge of Hindi and English

2. PAY : Pay will be fixed based on Experience and Competence.

3. AGE: Minimum 35 Years and Maximum 50 Years.

Send your application with detailed resume within 10 days of Publication of this advertisement.

Secretary, KSPW & E Trust and Superintendent of Police, Mysuru district. Jalapuri, Mysore-570 019.

(Contact No. 9448908970 | Email: spmys@ksp.gov.in)

Sd/- Secretary, KSPW & E Trust, Mysore.

ಮೈಸೂರು ಮಿತ್ರ

46

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು